ನಮ್ಮ ಮುನ್ಸಿಪಲ್ ಕೌನ್ಸಿಲಿನ ಮುಂದಿನ ಮೀಟಿಂಗು ತಾ ೧೯—೯—೨೬ನೇ ಸೋಮವಾರ ಬೆಯ ಮೇ ನಸಂದ ಶ್ರೀ ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಮುನ್ಸಿಪಲ್ ಆಫೀಸಿನಲ್ಲಿ ಜರಗುವುದು

ಸ್ವೀಮರು ಚಲಾವಣೆ ಪ್ರಾರಂಭ

ಮುಂಬಾಯಿ ಸ್ವೀಮ್ ನೆವಿಗೇಶನ್ ಕಂಪನಿಯ ಮೊದಲನೆಯ ಸ್ವೀಮರು ಕಳೆದ ಆದಿತ್ಯವಾರ ದಿನ ಇಲ್ಲಿಗೆ ಬಂದು ಮುಂಗಳವಾರ ದಿನ ಇಲ್ಲಿಂದ ಪುನಃ ಹಿಂದಕ್ಕೆ ಪ್ರಯಾಣ ಬೆಳಿಸಿದೆ.

ಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನೋತ್ಸವ

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನೋತ್ಸವವು ಗೋಕರ್ಣನಾಥ ದೇವಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು. ಉತ್ಸವದ ನಿಮಿತ್ತ ಸಾರ್ವಜನಿಕ ಸಭೆಯೊಂದು ಜರುಗಿ ಶ್ರೀಗಳವರ ಕೆ ಕೃಷ್ಣರಾವ್, ಎಸ್ ಎಸ್ ಕಿಲ್ಲೆ ಮೊದಲಾದವರು ಸ್ವಾಮಿಜಿಯವರ ಚಿತ್ರಪಟದಭಾಷಣವಿತ್ತರು.

ಕಲೆಕ್ಟರರಿಗೆ ಸತ್ಕಾರ

ಇಲ್ಲಿಯ ಜಿಲ್ಲಾ ಸಮಾಜದ ಪ್ರಮುಖರು ಸೇರಿ ನೂತ್ನ ಕಲೆಕ್ಟರರನ್ನು ಶ್ರೀ ಗೋಕರ್ಣನಾಥ ದೇವಸ್ಥಾನಕ್ಕೆ ಆಹ್ವಾನಿಸಿ ಸತ್ಕರಿಸಿದರು

ದ ಕ ಜಿಲ್ಲಾ ಹರಿಜನ ಎಜ್ಯುಕೇಶನಲ್ ಕಮಿಟಿ

ದ ಕ ಜಿಲ್ಲಾ ಹರಿಜನ ಎಜ್ಯುಕೇಶನಲ್ ಕಮಿಟಿಗೆ ಶ್ರೀಗಳವರಿಂದ ಈಗಾಗಲೇ ಒ ಎಲ್ ಎ ಡಾ ಎಚ್ ಪಿ ಆಡಪ (ಜಿಲ್ಲಾ ಹರಿಜನ ಸೇವಾಸಂಘದ ಅಧ್ಯಕ್ಷರು) ಮಿ ಗೋವಿಂದರಾಯ (ಶೆಡ್ಯೂಲ್ಡ್ ಕಾಸ್ಟ್ ಮಿಷನ್ ಏಜೆಂಟರು ಕಾಲ) ಇವರು ಆಯ್ಕೆಯಾಗಿದ್ದಾರೆ

ಸಾದರ ಸ್ವೀಕಾರ

ಬೆಳಕು:—ಸ್ಥಳೀಯ ತಿಂಗಳಿಗೊಮ್ಮೆ ಪ್ರಕಟವಾಗುವ ಸಂತಿ ಭಂಡಿತ ಗೃಹಪತ್ರಿಕೆಯೆಂದು ಹೊಡಿಯ ಪುಸ್ತಕಗಳಲ್ಲಿ ಪ್ರಥಮಮಣಿ ಮುಖ್ಯ ಕರ್ಣಾಟಕ್ಕೆ ಸೇರಿದ್ದು ಪ್ರಕಟಣೆಗಳು ಬರಿದಿಕರು ಕೆ ಬಿ ಸಿತಂಗಾಲು ಪೊಲೆ ಒಲ್ಲಾಳ್.

ನಂದಾದೀಪ: ಸಂಪುಟ ತಿರುಪುರ ಸುಪಂಡಿತ ನಿಂದ ಹೊರಡುವ ಕೊಡಲ್ಪಟ್ಟ ಗ್ರಂಥಪಠನಲೆಯಂ ಗಿ ನೇಯ ಮಾಸ ಪತ್ರಿಕೆಯೊಂದು ಕರ್ಣಾಟಕ್ಕೆಗೊಗೊಂಡ ಪುಸ್ತಕ ಪುಟ ಅಂ ಬೆಲೆ ಅಣೆಗೆ ಲೇಖಕರು ಶ್ರೀ ಕೊಡ್ಲಿಯ ಶ್ರೀ ಮಂಕಾಯರು.

ದೇಶಭಕ್ತ:—ಸಾರಾಜಕ ಸಾಪ್ತಿಕ ಲಂಡನ್ ತಿರಿಯರ ಪ್ರಕಾಶನದಿಂದ ಹೊರಡಿಸಿ ತೊಡಲ್ಪಟ್ಟ ಗ್ರಂಥಪಠನಲೆಯ ಗಳನ್ನು ಒರಿದವರಿಗೆ ಕೆಲ್ಲ ಪುಟ ಗಳಿಗೆ ಬೆಲೆ ಕೇವಲ ೧೦ ಆಣೆ

ಪ್ಲೇಡೆಂಡ್ಸ್ ವೇಂಡರ್ಸ್ ಡಿಕ್ಷನರೀ:

ಲೇಖಕರು ತಿಳಿ ಬಾರದ್ದಾದ ಪುಕಾರಕ್ಕೆ ಇದು ನಿಮಿತ್ತ ಸಮ್ಮಿಳಿಗಳು ಭಾಷಾತಜ್ಞರಿಗೆ ಮಾಡುವವರಿಗೂ ಇಂಗ್ಲಿಷ್ ಭಾಷೆಯನ್ನು ಕಲಿಯುವ ಪರಾ ಸ್ಥಬ್ಧಾಂಗಿಯೂ ಸರ್ವಥಾಯಿಯೂ ಆಶ್ರಯಕೊ ಡುವಂತೆ ತಯಾರಾಗಿದ್ದಾರೆ. ಇದು ಇಂಗ್ಲಿಷ್ ಭಾಷಾ ಭ್ಯಾಸಿಗಳಿಗೆ ಒಳ್ಳೆ ಸಹಾಯಕಾರಿಯಾಗುವುದು. ಬೆಲೆ ಒರೀ ಪ್ರಾಯ ಪ್ರತಿಯೊಬ್ಬ ನಿಮ್ಮಿಗಿಯೂ ಇದನ್ನು ಕೊಂಡುಕೊಳ್ಳುವುದು ಒಳ್ಳೆಯದೆಂದು ನಮ್ಮ ವಿನಂತಿ ಸ್ಥಳೆಯ ವಿಜಯಿರು 'ಮೆಸರ್ಸ ಸ್ಕೂಲ್ ಬುಕ್ ಕೊ

ಮಂಗಳೂರು ಶ್ರೀ ವೆಂಕಟ್ರಮಣ ದೇವರ ಧ್ವಂ ಜಾರೋಹಣ ಕಾರ್ಯಕ್ರಮ ದಿನಾಂಕ ೨೫ನೇ ಬುಧವಾರ ಪೂರ್ವಾಹ್ನ ೧೦-೩೦ಕ್ಕೆ ಶ್ರೀ ದೇವರ ಪಗೇಟಿ ಬಾಕಿ ನವೇಜಾಗಳು ಕೂಡಾ ವಸೂಲು ಮಾಡುವ ಹಕ್ಕು ಇದೇ ತಾರೀಕು ಪಿಗ್-೧೯೨೬ನೇ ಬುಧವಾರ ಹಗಲು ಘಂಟೆ ೧೨ ರೊಳಗೆ ಸಲ್ಲಿಸಬೇಕೆಂದು ಕೋರಿಕೆ.

ಒನೇ ಹೂ ಮತ್ತು ತರಕಾರಿಗಳ ಪ್ರದರ್ಶನ

ಮಂಗಳೂರಿನ ಒನೇ ಹೂ ಮತ್ತು ಕಾಯಿಪಲ್ಯ ಗಳ ಪ್ರದರ್ಶನವು ಕೆನರಾ ಹೈಸ್ಕೂಲಿನ ಶ್ರೀ ಲೈಷ್ಣಮಂ ದಿರದಲ್ಲಿ ಆಕ್ಟೋಬರ್ ತಿಂಗಳ ತಾರೀಕು ೪ ಮತ್ತು ೫ಕ್ಕೆ ಜರಗುವುದು. ಪ್ರೈಸ್ಡ್‌ಲಿಸ್ಟ್‌ಗಳು ಪುನೇರ ಆಫೀಸು ಪೊರ್ಮಾಪ್ಟ್ ಸಕ್ರೆಟರಿಯವರಿಗೆ ಬರೆದು ತರಿಸಿಕೊಳ್ಳ ಬಹುದು.

ತಾಲೂಕು ಸಮಾಚಾರ

ಉಡುಪಿ

ತಾ. ೧೨ಕ್ಕೆ ಸ್ಥಳೆಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ಅಧ್ಯಕ್ಷರಾದ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ೧೦ ಸದಸ್ಯರು ಹಾಜರಿದ್ದರು ಮುನಿಸಿಪಾಲಿಟಿಯವರು ಪಿಡುಗ್ಗಿಕ್ಕಿಯ ದೀಪಗಳನ್ನು ಬೆಳಗಿಸುವ ಬಗ್ಗೆ ಉಸಂಯೋಗಿಸುವುದಾಗಿ ನಿರ್ಣಯಿಸಿದ್ದಕ್ಕಾಗಿ ದೀಪದ ಬಗ್ಗೆ ವ ಸಾಮಾನ್ಯ ಉದ್ದೇಶಗಳ ಬಗ್ಗೆ ಹೆಚ್ಚಿಗೆ ತಿರಿಸಿಯನ್ನು ಹಾಕುವುದು ಅವಶ್ಯವಿಲ್ಲವೆಂದು ಅಧ್ಯಕ್ಷರು ಅಭ್ಯಾಸನೆ ಯಿತ್ತುದು ವಾಸ್ತವವೆಂ ಎಂದು ಶ್ರೀ ಬಿ. ವಾಸುದೇವ ರಾಯರು ಕೇಳಿದ ಪ್ರಶ್ನೆಗೆ ಸದ್ಯ ನಿರ್ಣಯಿಸಿದಂತೆ ೧೯೧ ದಿವಸಗಳಿಗೆಂದು ಅಂದಾಜು ಮಾಡಲಾಗಿರುವ ಹೆಚ್ಚಿಗೆ ರೂ. ೨೬೦೦ ದಿಂದ ಮೆಟ್ಟಿಗೆ ಎರಡೂ ವಿಧಾನಗಳಲ್ಲಿ ಹೆಚ್ಚಿಗೆ ತಿಗೆ ಮೂಲುವುದು ಆಗುತ್ಯವಿಲ್ಲವೆಂದು ತಮ್ಮ ಅಭಿಪ್ರಾಯವನ್ನು ದೃಢಪಡಿಸಿದರು. ಈ ಅಭ್ಯಾಸನೆಯ ಆಧಾರದ ಮೇಲೆಯೇ ದಿಮ್ಮಿಚ್ಚಿಕ್ಕಿಯನ್ನು ಕೊಂಡುಕೊಳ್ಳುವ ವರ್ಚೆಯೂ ಸರ್ಕಾರವೂ ನಡೆ ಲಾಗ್ಬಲ್ಲದೆ ಎಂಬುದಕ್ಕೆ ಅರ್ಥಿಕ ದೃಷ್ಟಿಯೇ ಸದ್ಯ ನಿರ್ಧಾರಕ್ಕೆ ಪುಬಲ ಆಧಾರವಾಗಿ ಪರಿಗಣಿಸಲ್ಪಟ್ಟಿದೆ ಯೆಂದು ಒತ್ತಿವೀಳುಲಾಯಿತು ಮುನಿಸಿಪಲ್ ಆಫೀಸಿನಲ್ಲಿ ಡಾ ಪಿ ಜಿ ಆರ್ಯ ಮತ್ತು ಶ್ರೀ ಪಿ ಎಸ್ ನಾಧವರಾಯರ ಸದಸ್ಯತನವು ಎಜ್ಜಾಗಿದೆಯೆಂದು ಸಭೆಗೆ ತಿಳಿಸಲಾಯ್ತಲ್ಲದೆ ಸದ್ಯಿಯವನ್ನು ಕಮ್ಮಿಸ್ಸು ಊರ್ಜಿತಪಡಿಸಬೇಕೆಂಬುದಕ್ಕೆ ಅರ್ಜಿಪಡಿಸಿದೆಯೋ ಎಂಬುದಕ್ಕೆ, ಸ್ಪಷ್ಟಪಡಿಸಿ ಅವರಿಂದ ತಿಳಿದುಬಂದು ಅನಂತರ ಆವಶ್ಯಕ ಪತ್ರವ್ಯವಹಾರಗಳನ್ನು ಅನಂತರ ಆವಶ್ಯಕ ವಾಗಿ ಮಾಡಿಕೊಳ್ಳಲು ಕೌನ್ಸಿಲಿನ ತಾಸಾಗಿ ಕಾರ್ಯದರ್ಶಿಯವರಿಗೆ ಅಧಿಕಾರವಿತ್ತು ಸಭೆಯು ಮುಕ್ತಾಯವಾಯಿತು.

ಅವರ ಸ್ಮಾರಕವಾಗಿ ತಮ್ಮ ಪದಸ್ಥತಿಯನ್ನು ಊರ್ಜಿತಪಡಿಸಲೇ ಕೌನ್ಸಿಲ್ ಸಾಧಾರಣ ಸಭೆಯಲ್ಲಿ ಅಧ್ಯಕ್ಷರಾಗಿ ಆರಿಸಿಬಂದ ಶ್ರೀ ಎಮ್ ಬಲ್ಲ ಕಮ್ಮಿಸ್ಸುವರ ಸೂಚನೆ ಮತ್ತು ಅನುಮತಿಯ ಮೇಲೆ ಲಿಡುಪಿಯವರಾದ ಡಾ. ಯು ಎಲ್ ಸಾಂತಾಮೂರ್ತಿಯರು ಏಂಪು ರೀ ಡಿ ಸಿ ಕೆಟ್ಟಿನ ಮ್ಯಾ ಲ್ರೇಡ್ಸ್‌ಮೆನ್‌ರನ್ನು ಅಜ್ಞಾದಾ ಟಿಗಾಗಿ ನೇಮಿಸಿದ್ದಕ್ಕಾಗಿಯೂ ಅವರಿಗೆ ವಾಸಿತ್ತಿ ಕಾ ಲಿಗೆ ಒರೆದುದನ್ನು ಅಂಗೀಕರಿಸಲಾಯಿತಲ್ಲದೆ ಅವರ ಸಾಮರ್ಥ್ಯದಂತೆ ಕಡಿಮೆಯಿಲ್ಲದೆ ಸಿಮ್ಮಚ್ಚಿಕ್ಕಿಯನ್ನು ಸ್ವಾರಂಭಿಸಲಾಯಿತು ದೀಪ ಸದ್ಯ ರೀತಿಯೇ ಮುಂದುವರಿಸಲು ತೀರ್ಮಾನಿಸಲಾಯಿತಲ್ಲದೆ ಅದನ್ನು ಎಜ್ಜಾಗಿ ಮಾಡಿಕೊಳ್ಳುವ ಬಗ್ಗೆಯೂ ಎರ್ಪಾಡು ಮಾಡಲಾಯಿತು. ಕ್ಲಾರ್ಕ್ ಸಲ ಪಿವಾದ ಮುನಿಸಿಪಲ್ ಎಜ್ಜಿನಿಯರ್ ಮಿಸ್ಟರ್ ಕೆಲ್ಲರ್‌ರವರು ಸಲ್ಲಿಸಿದ ಎಜ್ಜಿಕಾರ್ಯ ಗಳು ಸಿಕಾಧಾರವಾಗಿ ಮಾಡಲ್ಪಟ್ಟಿವೆಯೆಂದು ಸಭೆಗೆ ತಿಳಿಸಲಾಯಿತು. ಅಡಿಗರವರ ಕಾರ್ಯಾಲಯಕ್ಕೆ ಅಧಿಕಾರಿಯ ಹುದ್ದೆಗೆ ಅಭ್ಯರ್ಥಿಗಳು ಬರೆದ ಪರೀಕ್ಷೆಯ ಪತ್ರಿಕೆಗಳನ್ನು ಪರೀಕ್ಷಿಸಿ ಅಭಿಪ್ರಾಯವನ್ನು ಕೊಡಲು ಮುನಿಸಿಪಲ್ ಎಜ್ಜಿನಿಯರ್ ಮಿಸ್ಟರ್ ಕೆಲ್ಲರ್‌ರವರನ್ನು ಕೇಳಿಕೊಳ್ಳಲಾಯಿತು. ಪರೀಕ್ಷೆಗೆ ಸಾತ್ಪತಾಗಿದೆಯೆಂದು ಕೆಲ್ಲರ ಅಭಿಪ್ರಾಯವಿತ್ತು ಪ್ರೈಮರಿ ಸ್ಕೂಲ್ ಟೀಚರ್ ಎಂಬ ಪೋಸ್ಟಿಗೆ ಅಭ್ಯರ್ಥಿಗಳು ಬರೆದ ಪರೀಕ್ಷೆಯ ಪತ್ರಿಕೆಗಳನ್ನು ಪರೀಕ್ಷಿಸಿ ಅಭಿಪ್ರಾಯವನ್ನು ಕೊಡಲು ಹೆಡ್ ಮಿಸ್ಟ್ರೆಸ್ ಹೆಲೆನ್ ಪಿಂಟೊರವರನ್ನು ಕೇಳಿಕೊಳ್ಳಲಾಯಿತು. ಕೆಲವು ಕಾರಣಗಳಿಂದ ಈ ಪರೀಕ್ಷೆಯನ್ನು ಮುಂದಕ್ಕೆ ಹಾಕ

ಯುರೋಪಿನಲ್ಲಿ ಈ ವಾರ

ಲಂಡನ್—ಸಪ್ತ ರಾಷ್ಟ್ರಗಳ ಮಾಜಿ ಮಂತ್ರಿ 'ಡನ್' ಸ್ಕಾಪಿಬ್ರಿಯ ಬೈಸ್ಸು ಪತ್ರಿಕೆಯಲ್ಲಿ ಸ್ಫೋಟಕವನ್ನು ಕುರಿತಾಗಿ ಬರೆದಿದೆ ವತ್ತದಲ್ಲಿ—ಬ್ರಿಟಿಷರಿಗೆ ಸಜ್ಜುಸ್ಥಿತಿಯ ವಿಷಯ ತಮ್ಮ ಗೃಹಿಕೆ ಉಂಟುಮಾಡಿರೆ, ಜಗತ್ತಿನಲ್ಲಿ ಉಂಟಾಗಬಹುದಾದ ಯುದ್ಧ ಪ್ರಳಯಭಯ ಅವರ್ಣನೀಯವಾಗಿದೆ? ಸುಡೆಟನ್ ಜರ್ಮನರ ವಿಷಯವಾಗಿರುವ ಸಮಸ್ಯೆಯನ್ನು ಯಾರೇ ಆಗಲಿ ಇತ್ಯರ್ಥ ಮಾಡುವುದಕ್ಕೆಂದು ಬಲಪ್ರಯೋಗ ಮಾಡಿದರೆ ಅದರ ದುಸ್ಪರಿಣಾಮಗಳು ಸಾಮಾನ್ಯವೆಂದೂ ಆಗಲಾರವು.

ಎಷ್ಟು ಮಟ್ಟಿಗೆ ರಿಯಾಯತಿ ಕೋರಿಸ ಬಹುದೋ ಅಷ್ಟನ್ನು ಸುಡೆಟನ್ ಜರ್ಮನರಿಗೆ ಝೆಕ್ಕ ಸರಕಾರವು ಕೋರಿಸಿ ಸಂಧಾನದ ವ್ಯವಸ್ಥೆ ಮಾಡಿಯಿದೆ ಎಲ್ಲರೂ ಒಪ್ಪಬಹು ದಾದ ರಿಯಾಯತಿಗಳನ್ನು ಈ ಸಂಧಾನದ ಕರ್ತಗಳಿಂದ ಹೊರಡಿಸಲಹುದಾಗಿದೆ

ಮಧ್ಯಯುರೋಪಿನಲ್ಲಿ ಉಂಟಾಗಬಹು ದಾದ ಯಾವ ಕಲಹವೂ ಆ ರಾಜ್ಯದಲ್ಲೇ ಮುಗಿಯಲಾರದು ಇತ್ತೀಚೆಯ ಇತಿಹಾಸದ ನೆನಪು ಚೆನ್ನಾಗಿರಲಿ

ಬ್ರಿಟನ್ನು ಮತ್ತು ಫ್ರಾನ್ಸುಗಳೊಳಗೆ ಮೈತ್ರಿಯು ಸದಾಸರ್ವದಾ ದೃಢವಾಗಿಯೇ ಇದೆ, ಇರುವುದು ಜನಾಂಗಿಕವಾದ ಕೋಲಾಹಲವುಂಟಾಗುವಲ್ಲಿ, ಮೊದಲಾಗಿ ಫ್ರಾನ್ಸು ನೊಂದರೆ, ಬ್ರಿಟನ್ನು, ಪರಿಣಾಮವು ಏನೇ ಆಗಲಿ, ಫ್ರಾನ್ಸಿನ ಕಡೆಗೆ ನಿಲ್ಲುವುದು ಇದು ಟೋರಿ ಭಾವನೆ, ಚರಿತ್ರದ ಫಲ ಇತ್ಯಾದಿಗಳಿಂದಲ್ಲ—ಫ್ರಾನ್ಸಿನ ಸಂರಕ್ಷಣೆಯೇ ಬ್ರಿಟನ್ನಿನ ಸಂರಕ್ಷಣೆಯಾಗಿದೆ

ಪಾರಿಸ್—ಬ್ರಿಟಿಷರ ಈ ಅಭಿಪ್ರಾಯ ವನ್ನು ತಿಳಿದು ಫ್ರಾನ್ಸು ಚಿಂತಾಪರತೆಯನ್ನು ಕೊಡೆದಿದೆ ಜಗತ್ತಿನ ಶಾಂತಿಗೆ ಬೇಕಾದ ಖಂಡಿತ ನಾತಂಗಳನ್ನು ಬ್ರಿಟನ್ನು ನಂಬಿಯಿ ತೆಂದು ಅಲ್ಲಿ ಅಭಿಪ್ರಾಯವಾಗಿದೆ ಇನ್ನು ನೂರೆಂಬರ್ಗಿನಲ್ಲಿ ಹಿಟ್ಲರನ ಕಡೆಗೆ ಜಗತ್ತಿನ ಕಣ್ಣುಗಳೂ ಕಿವಿಗಳೂ ನೀಡಿಕೊಂಡಿವೆ ಈ ಎಚ್ಚರಿಕೆಯು ಜರ್ಮನಿಗಿದೆಯಾದರೆ ಅದು ಶಾಂತಿಯನ್ನೆ ಸಾಧಿಸುವುದು ಶಾಂತಿಗೂ ಫ್ರಾನ್ಸಿಗೂ ಬೇಕಾದ ಭರವಸೆಯ ನ್ನು ಬ್ರಿಟನ್ನು ಕೊಟ್ಟಿದೆ ಎಂದಾಯಿತು

ಪ್ರಾಹಾ—ಸುಡೆಟನರನ್ನು ಗಡಿನಾಡಿ ನಲ್ಲಿ ಝೆಕ್ಕ ಕೊಮ್ಯುನಿಸ್ಟರ ಉದ್ರೇಕಗೊಳಿಸ ತ್ತಾರೆ ಅವರನ್ನು ಇನ್ನು ತಡೆಯುವುದು ಅಸಾಧ್ಯ ಪರಿಣಾಮಗಳಿಗೆ ಅವರು ಕಾರಣ ರಲ್ಲ ಎಂದು ಅವರ ಮುಖಂಡನು ಝೆಕ್ಕ ಮಂತ್ರಿಗಳಿಗೆ ತಿಳಿಸಿರುವರು ಅದರೆ ಸುಡೆಟನ ರೇ ಒಳಗಿಂದೊಳಗೆ ಬೇಕಾದಷ್ಟು ಚಳವಳ ಮಾಡಬೇಕೆಂದು ಬರೆದ ನಾನಾ ಪತ್ರಗಳು ಝೆಕ್ಕ ಸರಕಾರದ ವಶವಾಗಿವೆ

ಬರ್ಲಿನ್—ಬ್ರಿಟಿಷರ ಮಾತುಗಳನ್ನು ಬೇಕೆಂದೇ ಪ್ರಕಟಿಸದೆಯೂ ಟೀಕಿಸದೆಯೂ, ಝೆಕ್ಕರು ಇನ್ನೂ ಅತ್ಯಾಚಾರ ಮಾಡುತ್ತಿದ್ದಾರೆಂದೇ ಬರ್ಲಿನ್ ಪತ್ರಗಳಲ್ಲಿವೆ

ಪ್ರಾಹಾ—ಹಿಟ್ಲರನ ಭಾಷಣದಲ್ಲಿ—ಸುಡೆಟನ್ ಜರ್ಮನರು ಎಲ್ಲಿ ವೋಟು ಕೇಳಿಯಬೇಕಾಗಿ ಒತ್ತಿ ಪ್ರೋತ್ಸಾಹಿಸಿ, ಅವರಿದ್ದ ವ್ಯಾಂಕ್ಯವು ಪುನಃ ಜರ್ಮನಿಗೆ ಸೇರುವಂತಾಗಬೇಕೆಂದು ಸೂಚಿಸಲಾದೀತೆಂದು ಮುನ್ಸೂಚಿಯಾಗಿದೆ ಸುಡೆಟನರು ಇದನ್ನು ಆಧರಿಸಿಯೇ ಚಳವಳ ನಡೆಸುತ್ತಿರುವರು

ಜಿನೀವಾ—ಬ್ರಿಟಿಷರ ಮಾತಿನಿಂದ ಸ್ವಲ್ಪ ಶಾಂತಿಮುಖವಾಗಿ ವಿದ್ಯಮಾನಗಳು ತೋರು ತ್ತವೆ. ರಷ್ಯವೂ ಝೆಕ್ಕರಿಗೆ ಖಂಡಿತ ಸಹಾಯ ಮಾಡುವ ಭರವಸೆ ಕೊಟ್ಟಂತೆ ತಿಳಿದುಬಂದಿದೆ.

ಜರ್ಮನ್—ಸ್ವಿಟ್ಸರ್ಲೆಂಡಿನ ಸರಕಾರವು ಗಡಿನಾಡಿನಲ್ಲಿ ವಿಶೇಷ ಭದ್ರತೆ ನೋಡಿದೆ. ವಲ್ಲಗನಿಗಳಲ್ಲಿ ಸಿಡಿಮದ್ದು ತುಂಬಿಸಲಾಗಿದೆ ಯೋರೇ ಆ ದಾರಿಯಾಗಿ ಬರುವಂತಾದರೆ, ಗನಗಳನ್ನು ಉಡಾಯಿಸಲಾದೀತು. ಎಂದರೆ ಯಾವ ಪರದೇಶೀಯರೂ ಮತ್ತೆ ಸ್ವಿಟ್ಸರ್ಲೆಂಡಿ ನೊಳಗೆ ಬರುವ ಹಾಗಿ ಉಳಿಯದು.

ನೂರೆಂಬರ್ಗ್—ಜರ್ಮನಿಯು ಐಕ್ಯ ವನ್ನು ನೋಡಿ ಹರ್ಷಚಿತ್ತನಾಗಿದ್ದೇನೆ, ಈ ಸಂತೋಷವು ಇನ್ನೂ ಸಿಗದ ಜರ್ಮನರು ಹೊರ ಗಿದ್ದಾರೆ. ಅವರ ಕಡೆಗೆ ನನ್ನ ಹೃದಯವು, ಅವರ ಹೃದಯವು ನನ್ನ ಕಡೆಗೆ ಧಾವಿಸುವಂತೆ ಧಾವಿಸುತ್ತದೆ—ಇನ್ಸೇ ತಾ. ೧೫ರಲ್ಲಿ ಹಿಟ್ಲರನ ಭಾಷಣ

ಸೊಯೊಸ್—ಕಳೆದ ಯುದ್ಧದಲ್ಲಿ ಬಲಿ ಕೊಟ್ಟಿದು ಕಡಮೆಯೆ? ಇನ್ನೊಮ್ಮೆ ಯೂ ಅಷ್ಟೇ ಅಧಿಕ ಬಲಿದಾನದಿಂದ ತನ್ನ ಭಾಗ್ಯವನ್ನು ಕಾವಾದಿಕೊಳ್ಳಲು ಫ್ರಾನ್ಸು ಸದಾ ಸಿದ್ಧವೇ ಇಲ್ಲವೆನ್ನುವರಾರು? ನಮ್ಮಲ್ಲಿ ಹೊರತೋರಿಕೆಗೆ ಕಾಣುವ ಭೇದಗಳನ್ನು ಎಣಿಸಿ, ಯಾರೂ ವರರು ತಮ್ಮ ಆಯುಕ್ತ ವಾದ ಮಂಡಿಟಿಕ್ಕೆ ತೊಡಗದಿರಲಿ ಕರ್ತವ್ಯ ವೊ ಕರಿನಕಾಲವು ಕರೆದಾಗ, ನಮ್ಮ ದೇಶವೆಲ್ಲ ಒಂದೇಯಾಗುವುದೆಂದು, ಇದುವರೆಗೆ ಎಷ್ಟೋ ಸಲ ಹಿಂದೆ ಸಿದ್ಧಾಂತವಾದುದಿಲ್ಲವೆ? — ಎಂದು ಸ್ಪೆಂಚ್ ಮಂತ್ರಿಗಳ ಭಾಷಣ

ವೊಶಿಂಗ್‌ಟನ್—ಯುನೈಟೆಡ್ ಸ್ಟೇಟ್ಸಿನ ಅತ್ಲಾಂಟಿಕ್ ನೌಕಾಬಲವೆಲ್ಲ ಕೆನಡದ ಬಳಿಯ ಸಾಗರದಲ್ಲಿ ನೆಲೆಸಿಲ್ಲುವುದೆಂದು ವ್ಯಕ್ತವಾಗಿದೆ ಇದು ಬ್ರಿಟಿಷ ವಸಾಹತು ಗಳಿಗೆ ಬಲ ಯುರೋಪೀಯ ರಾಜ್ಯಗಳು ಈ ಸೂಚನೆಯ ಅರ್ಥ ತಿಳಿಯಲಿ

ಕಾಯ್ರೋ—ನೀಲನದಿಯ ನೆರೆಯ ನೆವನದಿಂದಾಗಿ, ಇಜಿಪ್ತದ ಸೇನೆಯೆಲ್ಲ ನೀಲ ನದೀದಂಡೆಗಳ ಬಳಿ ತಿಪಿರ ಕಟ್ಟಿಕೊಂಡಿದೆ.

ಹೊಲ್ಲೆಂಡು—ಗಡಿನಾಡಿಗಳೆಲ್ಲ ಬಲವರಿಸಿ ಭದ್ರವಾದ ಕ್ಷಾವಲು ಇರಿಸಿದೆ ಡಿ ಸೇನೆಗಳ ರಜಾ ರದ್ದುಮಾಡಲಾಗಿದೆ ಡ್ಯೂನ್ ನದಿಯ ಇಕ್ಕಡೆಗಳಲ್ಲೂ ಮಹಾ ಭರಂಗಿಗಳೇ ನೊದಲಾದುವು ಸಿದ್ಧವಾಗಿವೆ ತಾ ೧೫ರ ವರೆಗೆ ಸೇನೆಗಳೆಲ್ಲ ಈ ಕಡೆಗೆ ಬರುವಂತಾಗ ಬೇಕಾಗಿ ಅಪ್ಪಣೆ

ವಾರ್ಸೋ—ಪೋಲೆಂಡಿನಲ್ಲಿ ಈ ಜಗಳ ವು ಯುದ್ಧದಿಂದಲ್ಲದೆ ಎಂದಾರೆಗೆ ಹೊಂದ ದೆಂದೂ ಜರ್ಮನಿಯ ಸದ್ಯಕ್ಕೆ ಯುದ್ಧ ಮಾಡ ದೆಂದೂ, ಪತ್ರಿಕಾಭಿಪ್ರಾಯವಿದೆ

ರೋಮ್—ಇತ್ಯರ್ಥವಾದೀತ ಶಾಂತಿ ಭಂಗವಾಗದ ಎಂದೂ ಯುದ್ಧವಾದಲ್ಲಿ ಬ್ರಿಟನ್ನು ಜರ್ಮನಿಗೆ ವಿರುದ್ಧವಾಗಿ ನಿಲ್ಲುವುದು ಸ್ಪಷ್ಟವೆಂದೂ ಇಟಲಿಯ ಪತ್ರಿಕೆಗಳ ತಿಳಿಸಿವೆ

ಬರ್ಲಿನ — ಎರಡು ಸಾವಿರ ಜನರು ಪುನಃ ತಾ ೧೫ರಲ್ಲಿ ಸಾರ್ ಕಡೆಗೆ ತೆರಳಿ ಅಲ್ಲಿ ಕೋವಿಗಳನ್ನು ಬಲವದಿಸುವರೆ ನ್ಯಾಯಕ್ಕಾಗಿ ದ್ದಾರೆ

ಬಿಟಿಷ ಮಂತ್ರಿಮಂಡಲದ ಅಭಿಪ್ರಾಯ ವು ಇಲ್ಲಿ ಮೊದಲೇ ತಿಳಿದಿಸಯಿಂದೂ, ಯುದ್ಧ ನೂಲಕವಾಗಿ ಸುಡೆಟನರ ಇತ್ಯರ್ಥವಾಗುವ ಪ್ರಸಂಗವು ಜರ್ಮನಿಯ ಹೊರಗೆ ನಡೆದು ದಲ್ಲದೆ ಜರ್ಮನಿಯಲ್ಲಲ್ಲವೆಂದೂ ಪ್ರಕಟವಾಗಿದೆ

ಬೇಗಂ ಅನ್ಸಾರಿಯವರ ದಾನ

ಭಾರತದಿಂದ ಚೀನಕ್ಕೆ ತೆರಳಿದ ವೈದ ಕೀಯ ಮಂಡಲಕ್ಕೆ, ಡಾ! ಅನ್ಸಾರಿಯವರ ಧರ್ಮಪತ್ನಿಯವರಾದ ಬೇಗಂ ಅನ್ಸಾರಿಯವರು ತನ್ನ ಗಂಡನ ಶಸ್ತ್ರಕ್ರಿಯೆ ಸಾಮಗ್ರಿಗಳೆಲ್ಲ ವನ್ನೂ ದಾನಮಾಡಿರುವರು.

ಜರ್ಮನಿಯ ರಕ್ಷಣೋಪಾಯಗಳು.

ಇದೀ ರಾಷ್ಟ್ರವೇ ಒಂದು ಚಕ್ರವ್ಯೂಹದಂತಿದೆ

ಯುದ್ಧವು ಸಂಭವಿಸಿದರೆ ಸ್ವರಕ್ಷಣಾರ್ಥ ವಾಗಿ ಜರ್ಮನಿಯು ಕೈಕೊಂಡಿದ್ದ ಕೆಲಸವು ಈಗ ಪೂರ್ತಿಯಸ್ಪೆದಿರುವುದು "ಇದೀ ರಾಜ್ಯ ವೇ ಒಂದು ಕೋಟೆಯಂತಿರುವುದು. ಯಾವ ಬಗೆಯ ದಾಳಿಯನ್ನೂ ಪ್ರತಿಭಟಿಸಲು ನಮ ಗೀಗ ಶಕ್ಯವಿದೆ" ಎಂಬುದಾಗಿ ಜರ್ಮನಿಯ ಯುದ್ಧ ವಿಚಕ್ಷಣರು ಅನ್ನುತ್ತಿರುವರು

ಜರ್ಮನಿಯ ಈ ರಕ್ಷಣೆಯ ಸಿದ್ಧತೆಗಳು ಬಹಳ ವಿಚಕ್ಷಣತೆಯಿಂದ ಮಾಡಲ್ಪಟ್ಟಿರುವು ವಲ್ಲದೆ, ಅವುಗಳನ್ನು ಛೇದಿಸಿ ಒಳಗೆ ನುಗ್ಗಲು ಸರ್ವಸಾಧಾರಣವಾಗಿ ಅಸಾಧ್ಯವೇ ಸರಿ ಮಂದೆ ಎಂದಾದರೂ ಯುದ್ಧವು ಸಂಭವಿಸಿ ದರೆ, ತಾವು ಹಿಂದಿನಂತೆ ವರರಾಷ್ಟ್ರಗಳನ್ನು ನಂಗ್ಗಿ ಯುದ್ಧ ಮಾಡುವಂತಿಲ್ಲವೆಂದೂ, ತಮ್ಮ ರಾಜ್ಯದೊಳಗೇ ಇದ್ದು ಶತ್ರುಗಳನ್ನು ಓಡಿಸುವೆ ವೆಂದೂ ಜರ್ಮನರು ಅನ್ನುತ್ತಿರುವರು

ಇದು ಬರಿಯ ಆಡಂಬರದ ನಾತಲ್ಲದೆ ಮತ್ತೇನಿಲ್ಲ ರಕ್ಷಣೆಯ ಸಿದ್ಧತೆಗಳ ಯಾವ ರೀತಿಯಲ್ಲಿ ನೂಡಲ್ಪಟ್ಟಿರುವುವೆಂದರೆ ಅತ್ಯಲ್ಪ ಸೈನಿಕರಿಂದ ಒಂದು ವ್ಯದೇಶವನ್ನು ರಕ್ಷಿಸಲು ಸಾಧ್ಯವಿರುವುದು ಆದುದರಿಂದ ಅಗಕ್ಷ ಬಿದ್ದರೆ ಹೆಚ್ಚಿನ ಸೈನಿಕರನ್ನು ವರರಾಷ್ಟ್ರಗಳಿಗೆ ಕಳುಹಿಸಲು ಸಾಧ್ಯವಿದೆ

ಐದು 'ಭದ್ರಕೇಂದ್ರ'ಗಳನ್ನು ನಿರ್ಮಿಸಲಾಗಿದೆ ದೇಶದ ಪ್ರಮುಖ ನದೇಶಗಳ ನ್ನಿವು ಆವರಿಸಿದ್ದು, ಅವುಗಳನ್ನ ಕಾಪಾಡಲು ಅನುಕೂಲವಿದೆ ಈ ನದೇಶಗಳ ಇರಿಂದ ೧೫೦ ಮೈಲುಗಳಷ್ಟು ವಿಸ್ತಾರವಿದ್ದು ಚಕ್ರ ವ್ಯೂಹದಂತೆ ದುರ್ಭೇದ್ಯವಾಗಿದೆ

ಇವುಗಳ ಸುತ್ತೂ ಮೊದಲು ಒದು ಮುಳ್ಳಿನ ಬೇಲಿಯು ಇರವುದ ಇದರಒಳಗೆ ಕಂದಕಗಳಿದ್ದವೆ ಈ ಕಂದಕಗಳನ್ನು 'ಟೇಂಕ್ ಡ್ರೇಪುಗಳು' ಕಾಯ ತ್ತವೆ ನಂತರ ದಾರಿ ಗುರುಹಿದ್ದ ಅನೇಕಾನೇಕ ಬಿರಿಗಳು ಇವೆ ಸೈನಿಕರಿಗೆ ನಿವಾಸ್ಯನುಕೂಲವಾಗುವಂತೆ ನೆಲ ಮನೆಗಳಿದ್ದು ಆ ನೆಲಮನೆಗಳಲ್ಲಿ ಆಹಾರ ಸಾಮಾನಿಗಳು ಜಾಸ್ತಿ ಸಂಗ್ರಹವಿವೆ ಸಿಡಿಮದ್ದಿನ ಕೆಚೆಗಳನ್ನು ಸೇದಿಯಿಲ್ಲೇ ಇದ್ದು ಅವುಗಳ ಸುತ್ತೂ ಕಾವಲಿವೆ ಅಂದರೆ ಈ ಎಲ್ಲಾ ನೆಲವ ನೆಗಳಿಗೆ ಒಂದೇ ದ್ವಾರವಿದ್ದು ಅದಕ್ಕೆ ಹೋಗಲು ಪತ್ರ ಸೈನಿಕರ ಒಂದೆಡೆಯಿಂದ ಇನ್ನೊಂದೆಡೆಗೆ ಸುಲಭದಲ್ಲಿ ಚಲಿಸಲು ಸುರಂಗ ಮಾರ್ಗಗಳಿವೆ ಪ್ರತಿಯೊಂದು ಸಿಡಿ ಮದ್ದಿನ ಕೋಣೆಯು ಕೊಂಕ್ರೀಟಿನಿಂದ ತಯಾರಿಸಲ್ಪಟ್ಟಿದೆ ಮಾತ್ರವಲ್ಲ ಈ ಸುರಂಗ ಗಳಲ್ಲಿ ವೈಟ್ಟಾರ ಗಳೇ ಮೊದಲ ಡವಾಕನ ಗಳ ಚಲಾವಣೆಗೂ ಅನುಕೂಲವಿವೆ ವುದ

ಮುಖ್ಯ ಕೇಂದ್ರಗಳ ಈ ರೀತಿಯಲ್ಲಿ ವಿಭಾಗಿಸಲ್ಪಟ್ಟಿವೆ ಬುಧ ವಿಸಿಯಾ ಮತ್ತ ಪೋಲ್ ಇಗೆ ಇದಿರಾಗಿರ ಕೊನಿಗ್ಸ್‌ಬರ್ಗಿ ನಿಂದ ಎಂಗರಬರ್ಗಿನ ತನಕದ ಪ್ರದೇಶವೇ ಪೂರ್ವ ಪ್ರಕೃಕೇಂದ್ರ ರಾಯ್ನ ನದಿಯ ಸಶ್ಚಿ ಮಕ್ಕಿರುವ ಪ್ರದೇಶವೆಲ್ಲವೂ, ಫ್ರಾನಿಗೆ ಇದಿ ರಾಗಿರ ವ ಪ್ರಕ್ಕದ ಹೆಚ್ಚಿನ ಭಾಗವೂ ಸ್ಟುಟ್ಗಾರ್ಡ್ ಬೆಲ್ಜಿಯಮ್, ಹೊಲ್ಲಂಡ್ ಡೆನ್ಮಾರ್ಕ ಮತ್ತ ಬೆದೇರಿಯದ ಹೆಚ್ಚಿನ ಭಾಗಗಳೂ ಸ್ಟಿಕ್ಕಸೊವಾಕಿ ಗಡಿನಾಡಿನ ಪೂರ್ವಭಾಗವೂ ಸ್ಯಾಲೇಸಿಯವೂ ಪೂರ್ವದ ಸ್ಟಿಂಕಸೆವಾಕಿನ ವತ್ತು ಪೊಲೀಶ್ ಗಡಿನಾಡಿನಲ್ಲಿ ಸೇರಿಕೊಂಡಿರುವ ಭಾಗವೂ ಉತ್ತರದಲ್ಲಿ ಪೊಲೀಶ್ ಬಾಲ್ಟಿಕ್ಕಿನ ತನಕದ ಪ್ರದೇಶವೂ ಉತ್ತರ ಸಮುದ್ರದಲ್ಲಿರುವ ದ್ವೀಪಗಳೂ ಈಗ "ಭದ್ರ ಕೇಂದ್ರ"ಗಳೆಂದು ಸಾರಲ್ಪಟ್ಟಿರುವುವು

ಇದೇ ರೀತಿಯಲ್ಲಿ ಒಸ್ಟ್ರಿಯದ ಸತ್ರಲೂ ಕೋಟೆಕೊತ್ತಲಗಳನ್ನು ಕಟ್ಟಲು ಸಿದ್ಧತೆಗಳು ಮಾಡಲ್ಪಡುತ್ತಿವೆ!

ಜರ್ಮನ್ಯ ಯುದ್ಧ ವಿಚಕ್ಷಣರು ಈ ತನ್ನ ರಕ್ಷಣೋಪಾಯಗಳಲ್ಲಿ ಕುರಿತು ಬಹಳ ಅಭಿಮಾನಯುಕ್ತರಾಗಿರುವರು. ಇವುಗಳನ್ನು ತಯಾರಿಸಲು ಖರ್ಚು ಕಡಿಮೆ ತಾಗಿದುದಲ್ಲದೆ, ಫ್ರಾನ್ಸಿನ 'ಮೆಜಿನೋಟ್' ಪಂಕ್ತಿಯಷ್ಟೇ ಇವೂ ದುರ್ಭೇದ್ಯವಾಗಿರುವುದೆಂದು ಹೇಳುತ್ತಿರುವರು

ಫ್ರಾನ್ಸಿನವರು ತಯಾರಿಸಿದಂತೆ ಜರ್ಮನರು ಕೋಟೆಕೊತ್ತಲಗಳಲ್ಲದ್ದೇ ಒಂದು ಸಾಲನ್ನು ತಯಾರಿಸಿಲ್ಲ ಕಳೆದ ಮಹಾ ಯುದ್ಧದ ಸಮಯದಲ್ಲಿ ಬಹಳ ಜವಯುಕ್ತಕಾರಿಯೆಂದು ಕಂಡ ಯುದ್ಧೋಪಾಯಕ್ಕೆ ಅನುಕೂಲವಾಗುವಂತೆ, ಇವುಗಳನ್ನು ನಿರ್ಮಿಸಲಾಗಿದೆ

ಅವರ ಯೋಚನೆಯಂತೆ ಸೈನಿಕರನ್ನು ಒಂದೇ ಕಡೆಯಲ್ಲಿ ಇರಿಸುವುದಕ್ಕಿಂತ್ತ, ಅವ ರನ್ನು ಒಂದು ಕಡೆಯಿಂದ ಇನ್ನೊಂದೆಡೆ ವೇಗವಾಗಿ ಒಯ್ಯು, ಉಪಯೋಗಿಸಿ ಕೊಳ್ಳಲು ಸಾಧ್ಯವಿದೆ

ಯಾವ ಕಡೆಯಿಂದಲೂ ಯಾವ ತರದ ದಾಳಿಯನ್ನೂ ಪ್ರತಿಭಟಿಸಿ, ಶತ್ರುಗಳನ್ನ ಹಿಮ್ಮೆಟ್ಟಲು ಮಾಡಲಾಗುವಂತೆ ತಾವು ಈ "ಭದ್ರ ಕೇಂದ್ರ"ಗಳನ್ನು ನಿರ್ಮಿಸಿರುವೆವೆಂದು ಜರ್ಮನಿಯ ಯುದ್ಧ ವಿಚಕ್ಷಣರು ಹೆಮ್ಮೆಯಿಂದ ಅನ್ನುತ್ತಿರುವರು

ಪಾಸ್ಪೋರ್ಟು ನಿರಾಕರಿಸಲ್ಪಟ್ಟಿತು

ಚೀನಕ್ಕೆ ತೆರಳಿದ ಕೊಂಗ್ರೆಸ್ ವೈದಕೀಯ ಮಂಡಲದೊಡನೆ ಹೋಗಲು ಕಲ್ಕತ್ತದ ಡಾಕ್ಟರರಲ್ಲೊಬ್ಬರಾದ ಡಾ ಎಸ್. ಸೆನ್ ಎಂ ಬವರಿಗೆ ಪಾಸ್ಪೋರ್ಟು ದೊರಕುದಿಲ್ಲ ಚೀನವು ಬಿಟಿಷರೊಡನೆ ಸ್ನೇಹದಿಂದಿರುತ್ತಿರಲು, ಡಾ. ಸೇನರು ಚೀನಿಯರಿಗೆ ವೈದಕೀಯ ಸಹಾಯವನ್ನೊದಗಿಸಲಿಕ್ಕಲ್ಲದೆ ಬಿಟಿಷರ ಕುರಿತು ಯಾವ ತರದ ಅಪವ್ಯಾಚಾರ ನಡೆಸಲು ಹೋಗುವರಲ್ಲವೆಂದ ಮೇಲೆ, ಅವರಿಗೆ ಪಾಸ್ಪೋರ್ಟು ವಿಷಯವಾಗಿ ಸರಕಾರದವರು ತಮ್ಮ ನಿರಾಕರಿಸಲ್ಪಟ್ಟತೆಂಬ ದು ಆಶ್ಚರ್ಯದ ನಿರ್ಧಾರವನ್ನು ಬದಲಾಯಿಸ ಬರೆದ ಸಧೀಕ್ಷಿಸಬಹುದೆ?

ಎಚ್ ಜಿ ವೆಲ್ಸರ ಪುಸ್ತಕವನ್ನು ಸುಟ್ಟರು

ಎಚ್ ಜಿ ವೆಲ್ಸರಿ ದರೆ ಪಂಚವಿಖ್ಯಾತ ರಾದ ಬಿಜ್ಞಾ ಗ ಧಕರ್ತರು ಇವರು O ಗಳ H ಗಳು ಎ ಬೊಂದು ಗ ಧರನ್ನು ಇದರಲ್ಲಿ ತೆಗ್ಗುರಾದ ಗ ಹಸ್ಯದ ಕುಂತೆ ಕೆಲವು ಅರೋಪಣೆಗಳಿರುವುವೆಂಬ ಕಾರಣದಿಂದಾಗಿ ಸಲ್ಯಾನರ ಲಂಡನ್ನಲ್ಲಿ ಇತ್ತೀಚೆಗೊಂದು ಸಭೆಯನ್ನೇರ್ಪಡಿಸಲಾಗಿತ್ತು. ಆ ಒಂದು ನೆರವಣಿಗೆಯ ಸಭೆಯಲ್ಲಿ ಮೊನ್ನೆ ತಾನೆ ಅವರು ಸಭೆ ಸೇರಿ ಆ ಪುಸ್ತಕದ ಒಂದು ಪ್ರತಿಯನ್ನು ಬಹಿರಂಗವಾಗಿ ಸುಟ್ಟುಬಿಟ್ಟರು

ಈ ಕುರಿತು ಪ್ರತಿಸಲಾಗಿ ಎಚ್ ಜಿ ವೆಲ್ಸ್ ತಾನು ಮುಹಮ್ಮದನ ಕುರಿತು ಅಸಂಬದ್ಧವಾದ ದೇನನ್ನೂ ಬರೆದಿಲ್ಲವೆಂದೂ ಪ್ರಪಚದ ಪ್ರಗತಿಗೆ ಇಸ್ಲಾಂ ಧರ್ಮದಿಂದುಂಟಾದ ಪರಿಣಾಮಗಳು ಕ ಬಾ ಆಗರವುದೆಂದೂ ತಾನ ಒಲ್ಲೆನೆ ಯಾವದಾದರೊಂದು ವಾಕ್ಯವನ್ನು ಸಂದರ್ಭಾನ್ವಿತವಾಗಿ ತಿಳಿದು ಕೊಳ್ಳದೆ ಪಕ್ಕೇಕಿಸಿ ಅರ್ಥಮಾಡುವುದುಚಿತ ವಲ್ಲವೆಂದೂ ಅಭಿಪ್ರಾಯಪಟ್ಟಿರುವರು

ಆದ್ಯಪ್ರವಾದಿಶಾಸ್ತ್ರ ಲಂಡನ್ನಿಂದರೆ ರಂಗೂನಲ್ಲ ಎಚ್ ಜಿ ವೆಲ್ಸರಿಂದರೆ ಜರ್ಮನಿಯ ಭೌದರಲ್ಲನಾದರೆ ಸಕ್ಕತವೇ ಸರಿ

ಮುಂದಿನ ವಾರದಿಂದ

ಪ್ರಸಿದ್ಧ ಕನ್ನಡ ಸಾಹಿತಿಗಳಾದ

ಶ್ರೀ ಕೋಟ

ಶಿವರಾಮ ಕಾರಂತರ

ಉಪಕ್ಷ್ಯಾಸಗಳು

ಆರಂಭವಾಗುವುದು / ಓದಲು ಮರೆಯದಿರಿ

ಹಿಟ್ಲರನಿಗೆ— ★ ಬ್ರಿಟಿಷ್——ಪ್ರೆಂಚ್——ಗದರಿಕೆ!

"ಜರ್ಮನರ ರಕ್ಷಣೆಗಾಗಿ ಎಲ್ಲಾ ಸಿದ್ಧತೆಗಳಾಗಿವೆ.— ಜರ್ಮನಿಯ ಯಾವ ಯುದ್ಧಕ್ಕೂ ಸಿದ್ಧವಿದೆ."—ಹಿಟ್ಲರ್.

ಇನ್ನೊಂದು ಮಹಾಯುದ್ಧವೆ?

ಝೆಕೊಸ್ಲೊವೆಕಿಯಾದಲ್ಲಿರುವ ಜರ್ಮನ್ ಅಲ್ಪಸಂಖ್ಯಾಕರ ಕುರಿತು ವಿವಾದವೆದ್ದಿತ್ತಷ್ಟೆ. ಜರ್ಮನಿಯ ನೂರೆಂಬರ್ಗ್ ಎಂಬಲ್ಲಿ ನೊಸ್ಸೆ ಯುದ್ಧಭ್ಯಾಸದ ಮಹಾ ಪ್ರದರ್ಶನವೊಂದು ನಡೆಯಿತು. ಹಿಟ್ಲರನ ಪ್ರಚಂಡ ಭಾಷಣವು ಅಲಿ ನಡೆಯಿತು. ಆದರೆ ಜರ್ಮನಿಯು ಸುದಾಟನ್ ಪ್ರದೇಶಗಳಿಗಾಗಿ ಯುದ್ಧರಂಗಕ್ಕೆ ಇಳಿಯುವ ಹಾಗೆ ಹಿಟ್ಲರನ ಭಾಷಣದಿಂದ ತೋರಿ ಬರಲಿಲ್ಲ.

ಈ ಭಾಷಣದಲ್ಲಿ ಹಿಟ್ಲರನು ತನ್ನ ನಾಜಿ ಸಕ್ಷದ ಎಳೆ ಇತ್ಯಾದಿಗಳ ಕುರಿತೆ ಹೆಚ್ಚಳ ದೀರ್ಘವಾಗಿ ಮಾತನಾಡಿದನ "ಜಗತ್ತಿನ ಎಲ್ಲಾ ಕಡೆಗಳಲ್ಲಿರುವ ಜರ್ಮನ್ ರಾಷ್ಟ್ರೀಯ ಜನರ ಐಕ್ಯತೆ ಮತ್ತು ಹಿತಸಾಧನೆಯುವುದೆ ನಾಝಿ ತತ್ವಳದ ಉದ್ದೇಶ ಇದಕ್ಕಾಗಿಯೆ ಎಲ್ಲಾ ತಾ ೧೦ರಲ್ಲಿ ಆಸ್ಟ್ರಿಯಾವನ್ನು ನನ್ನೊಡನೆ ಕೂಡಿಸಿಕೊಂಡೆ"

"ಬೊಲ್ಶೆವಿಸ್ಟರೂ ಡೆಮೊಕ್ರೇಟರು (ಪ್ರಜಾಸತಾತ್ಮಕರು) ವತ್ತ ಅಂತರಾಷ್ಟ್ರೀಯ ಡೊನೆಚಕ್ರೇಟರೂ ಇವರ ಒಂದು ಮಹಾಪಸ್ತ ತಮ್ಮ ವಿರೋಧಿಗಳ ದೊಡೆ ಕೇಡರ ವಜಾ ಸತ್ತಾತ್ಮಕ ನೀತಿಯನ್ನ ಅನುತ್ಪಾದುತ್ತಿರುವುದಾದರೂ, ಬಾಂಬುಗಳನ್ನೆ ಉಪಯೋಗಿಸಿ, ಅನೇಕ ಜನಾಂಗಗಳನ್ನು ತಮ್ಮ ಆಧೀನದಲ್ಲಿ ಟ್ಟಿರುವರು ನನಗೆ ವೇಕಾದ ಮೂಲಭೂತ ಹಕ್ಕುಗಳನ್ನೇ ಕೊಡಲು ಅವರು ಸಿದ್ಧರಿಲ್ಲ

ಝೆಕೊಸ್ಲೊವೆಕಿಯಾದಲ್ಲಿ ಜರ್ಮನ್ ಅಲ್ಪಸಂಖ್ಯಾಕರಿಗೆ ಅಧಿಕ ಸಂಖ್ಯಾಕರಿಂದ ತುಚ್ಛ ನರ್ವ ನೆಯು ದೊರಕುತ್ತಿದೆ. (ಇದು ಹಿಟ್ಲರನ ಸುಳ್ಳು) ಈ ಜನರು ಗುಲಾಮರಂತಿರುವುದು, ಜರ್ಮನಿಯು ಎಂದಿಗೂ ಸಹಿಸದು, ಬ್ರಿಟನ್ ಮತ್ತು ಫ್ರಾನ್ಸ್, ತಮ್ಮ ಜಗತ್ತಿನ ಯಾನತ್ತು ಕಡೆಯಲ್ಲಿ ತಮ್ಮ ಹಿತ್ತಲಕ್ಕಿದ್ದ ಸಾಧನೆ ನಾಶು ವುದರಲ್ಲಿ ಒಂದು ಅರ್ಥವಿದೆ ಎನ್ನುವ ಮೆಯ, ನಷ್ಟವಾದರೂ ಆಗಲಿ, ನಾನು ಜರ್ಮನರ ರಕ್ಷಣೆಯನ್ನು ಮಾಡುವೆನು".

ಸುಡಟನ್ ಪ್ರದೇಶಗಳ ಕುರಿತು ಮೆರ್ ಸರಕಾರದೊಡನೆ ನಾತುಕತೆಗಳು ನಡೆಯುತ್ತಿದ್ದ ಹಾಗೆ ಟಟ್ಲರನು ಝೆಕ್ ಗರಿನಾಗಿನಲ್ಲಿ ವಿಶೇಷ ತರದ ಯುದ್ಧ ಸಿದ್ಧತೆಗಳನ್ನು ಮಾಡಿದ್ದನು. ಆತನ ಅವಸರದ ಕಾರ್ಯಗಳಾವಗಳನ್ನು ನೋಡಿ ಬ್ರಿಟನು ತನ್ನ ಇತ್ಯರ ನರಿಗಿನ ಘೋರ ನೆಯನ್ನು ಬದಲಾಯಿಸಿಬಿಟ್ಟು ಝೆಕೊಸ್ಲೊವೆಕಿಯಾದಲ್ಲಿ ಹಿಟ್ಲರನು ಇಳಿಯಬಿಟ್ಟರೆ, ಅನಂತರ ತಕ್ಕ ಬುದ್ಧಿಸಾರ ಹೇಳಿಕೊಡಲು ತಾವೂ ರಷ್ಯ, ಫ್ರಾನ್ಸ್‌ಗಳೊಡನೆ ಸೇರುವೆವೆಂದು ಹೇಳಿಬಿಟ್ಟಿದ್ದರು. ಇದರಿಂದ ಬರೀ ಟೊಳ್ಳು ಗದರಿಕೆಗಳನ್ನು ಹೊರಡಿಸಿ ಪ್ರಿದ್ಧ ಹಿಟ್ಲರನು ಸ್ವಲ್ಪ ಭಯಗ್ರಸ್ತನಾದುದರಿಂದಲೆ, "ನಾನು ಝೆಕ್ ಗಡಿನಾಡಿನಲ್ಲಿ ಯುದ್ಧ ಸಿದ್ಧತೆಗಳನ್ನು ಮಾಡಿಲ್ಲ ಆ ನಾಡು ಝೆಕ್ ನಾಯಕ ಡಾ। ಬೆನ್ನಿಸ್ಸರು ಸುಳ್ಳು ಆರೋಪ!"

ನಂತರ ತನ್ನ ಸಂಗ್ರಾಮ ಬಲಿ, ಇತ್ಯಾದಿಗಳ ಕುರಿತು ಹಿಟ್ಲರನು ಉದ್ದ ಉದ್ದ ಉದ್ದಾರಗಳನ್ನು ಹೊರಡಿಸಿದನು ಜರ್ಮನಿಯೂ ಕೆಡವಯುದ್ಧಕ್ಕಾಗಿ ಮಹಾ ಸಿದ್ಧತೆಗಳನ್ನು ಮಾಡಿರುವುದಾಗಿ ತಿಳಿಸಿ ಬಿಟ್ಟನು

ಝೆಕೊಸ್ಲೊವೆಕಿಯಾದ ಸರಕಾರವು ನಿಜಕ್ಕೂ ಸಂಘಟನ್ ಜರ್ಮನ್ ವರ್ಗದವರಿಗೆ ಯೋಗ್ಯರೀತಿಯ ವರ್ತನೆಯನ್ನು ಕೊಡಲು ಸಿದ್ಧವಿದ್ದಿತ, ಸಿದ್ಧವಿದೆ ಹಿಟ್ಲರನು ಆ ಕುರಿತು,

ಸುಳ್ಳು ಆರೋಪಗಳನ್ನು ಹೊರಡಿಸಿ, ಒಂದು ಮಯಾಸ್ಪ ಸೈನ ಯುಂಟುನ್ ಡಿರುವನ ಸುದಾಟನ್ ಪ್ರದೇಶವನ್ನು ಜರ್ಮನಿಯೊಡನೆ ಕೂಡಿಸುವಂತೆ ಮಾತ ತೆಗೆಯುವಂತಾಗಿದೆ ಈ ಕಾರಣದಿಂದಲೆ ಹಿಟ್ಲರನು ಝೆಕ್ ಸರಕಾರದ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ, ಜಗಳಕ್ಕೆ ಒಂದು ಕಾರಣವನ್ನು ಹುಡುಕುತ್ತಿರುವನು ಸಂವಾಹಿನ್ಯರಲ್ಲಿ ಗುಪ್ತಪುಲಿಸರ ಮೂಲಕ ಸ್ಥಳೀಯ ಪ್ರಜಾರವನ್ನು ನಡೆಯಿಸುತ್ತಿರುವನು.

ಹಿಟ್ಲರನ ಈ ಭಾಷಣದಿಂದ ಝೆಕ್ ಪ್ರಕರಣದಿಂದ ಉಂಟಾದ ಬಿಕ್ಕಟ್ಟಿನ ಪರಿಸ್ಥಿತಿಯು ನಿವಾರಣೆಯಾಗಲಿಲ್ಲ ಅದು ಇದ್ದ ಹಾಗೆಯೆಯಿದೆ. ಅವನ ಮೇಲಿನ ಭಾಷಣದಿಂದಾಗಿ ಸ್ಥಿತಿಯು ಇನ್ನೂ ಕೆಟ್ಟಿರುವುದೆಂದು ಸುದಾಟನ್ನರಿಗೂ, ಝೆಕ್ಕರಿಗೂ ಮುಂದಕ್ಕೆ ಯಾವ ತರದ ಸಂಧಾನಗಳಾಗಲಾರವೆಂದು ಹೇಳುವಂತಾಗಿದೆ ಬ್ರಿಟನ್, ಫ್ರಾನ್ಸ್ ಇತ್ಯಾದಿ ಮಹಾಪ್ರಭುತ್ವದ ಜನಾಂಗೆಗಳು ಹಿಟ್ಲರನ ಮೇಲೆ ಬಹಳವಾಗಿ ರೇಗಿ, ಆತನನ್ನು ಪ್ರತಿಭಟಿಸಲು ಯುದ್ಧಕ್ಕಾಗಿ ಸರ್ವ ಸಿದ್ಧರಾಗಿರುವರು. ಇಂದಿನ ಸ್ಥಿತಿಯು ೧೯೧೪ರಲ್ಲಿ ಉಂಟಾದ ಸ್ಥಿತಿಯಂತಿದೆ. ಹಿಟ್ಲರನು ಅಧಿಕಾರ ಮದದಿಂದ ಭ್ರಮಿತನಾಗಿರುವನು. ಬ್ರಿಟಿಷ್ ಸರಕಾರದ ಮಂತ್ರಿಮಂಡಲವು ಅನ್ಯಾಯವು ಮಂತ್ರಿಮಂಡಲವು ಒಂದಲ್ಲ ಕುಂಟುತೋಗಿ, ಮುರಿಯಿತು. ಗವರ್ನರರಿಗೆ ರಾಜೀನಾಮೆ ಕಳಿಸಿದೆ. ಕೊಂಗ್ರೆಸು ಇಲ್ಲಿ ಮಂತ್ರಿಕೂಟ ರಚಿಸುವುದು, ಅಂತೂ ಹನ್ನೊಂದರಲ್ಲಿ ಎಂಟು ಪ್ರಾಂತ್ಯಗಳಲ್ಲಾಯಿತು. ಇನ್ನು ಮಿಂಧದ ನೂತು ಅರ್ಧಕ್ಕರ್ಧ ನಂತಿದೆ. ಇದುವರೆಗೆ ಗಾಂಧಿಗೆ ಬಂದ ಸ್ವಪಾದಂತೆ,—೧೧ ಪ್ರಾಂತ್ಯಗಳಲ್ಲಿ ೭೫ ಮಾತ್ರ ಕೊಂಗ್ರೆಸ್ ಮಂತ್ರಿಗಳಿದ್ದರು. ಅದುಕಾರಣ ಮುಸ್ಲಿಮ್ ಲೀಗ್ ಮೊದಲಾದವರ ಸಲಹೆಯಿತ್ತು. ಇನ್ನು ಅದು ಸರಿಯೊಗಿ, ಮುಸ್ಲಿಮರೂ ಕೊಂಗ್ರೆಸ್ಸೂ ಒಂದಾಗಬಹುದೇನೋ!

ಭಿಕ್ಷುಕರ ಉದ್ಧಾರಕ್ಕಾಗಿ ಸೋಡ್ತಿ ಹೈದರಾಬಾದಿನ ಮುಸಿಸಿಪಾಲಿಟಿಯ ಯೋಜನೆ

ಹೈದರಾಬಾದಿನ ಮುನಿಸಿಪಾಲಿಟಿಯವರು ತಮ್ಮ ದೇಶದಲ್ಲಿರುವ ಭಿಕ್ಷುಕರ ಮತ್ತು ಅಂಗಹೀನರ ಸಹಾಯ ನುತ್ತು ಉದ್ಧಾರಕ್ಕಾಗಿ ಹತ್ತು ಲಕ್ಷ ರೂಪಾಯಿಗಳ ಒಂದು ಸೋಡ್ತಿಯನ್ನು ನಿರ್ಮಾಡಿಸಲಿರುವರು. ಆದರಿ ಇದಿರಿಲ್ಲಿ ಅರ್ಧಾಂಶ ನೂತ್ತ ಸದ್ಗಿ ಕೆಲಸಕ್ಕಾಗಿ ಉಪಯೋಗಿಸಲ್ಪಡುವುದು

ಸೋಡ್ತಿ ನಿರ್ಮಾಡಿನ ಕುರಿತು ಸಭೆಯಲ್ಲಿ ತೀವ್ರ ಚರ್ಚೆನಡೆದಿತ್ತು ಕೆಲವು ಸದಸ್ಯರು ಇದು ಕೂಡದು, ಅನ್ಯಾಯವಾಗುತ್ತದೆ ಎಂದು ವಾದಿಸಿದ್ದರು.

ಫ್ರಾಂಕೊ ಗೊಂಬೆಯರಸನನ್ನು ತರುವನು

ಬ್ರಿಟಿಷರಿಂದ ಧನಸಹಾಯ ಪಡೆಯುವ ಯುಕ್ತಿ!

ಹಿಂದೊಮ್ಮೆ ತನ್ನ ಸಿಂಹಾಸನವನ್ನು ಕಳಿಕೊಂಡು ದೇಶಭ್ರಷ್ಟರಾಗಿ ಇಲೆವಾಡುತ್ತಿರುವ ಸ್ಪೇನಿನ ಮಾಜಿಅರಸರಾದ "ಆಲ್ಫೊನ್ಸೊಭಿಸರ" ವರನ್ನು ಪುನಃ ತನ್ನ ದೇಶದ ಸಿಂಹಾಸನದ ಮೇಲೆ ಕುಳ್ರಿಸುವ ಪ್ರಯತ್ನಗಳನ್ನು ಜನರಲ್ ಫ್ರಾಂಕೊವು ಮಾಡುತ್ತಿರುವನೆಂದು ಡೈಲಿ ಹೆರಾಲ್ಡ್ ಎಂಬ ಪತ್ರಿಕೆಯ ಅನ್ನುತ್ತಿದೆ

ಆದರೆ ಇಟೆಲಿಯ ಅರಸನಂತೆ ಆಲ್ಫೊನ್ಸೊರವರದೂ ಹೆಸರಿಗೆ ಮಾತ್ರ ಅರಸರಾಗಿದ್ದು, ಮುಸಲೇನಿಯಂತೆ ತಾನು ಸರ್ವಾಧಿಕಾರವನ್ನು ನಡೆಸುವ ತಂಗಬೇಕೆಂದು ಫ್ರಾಂಕೊವಿಗ್ಛತರ್ತ'

ಈ ಕುರಿತು ಕೌಂಟ್ ಲೂಯ್ಸ್‌ಸ್ಫೊಡಾ ಗೊಂಡಾ ಎಂಬವರು ಆಲ್ಫೊನ್ಸೊರೊಡನೆ ಮಾತ ಕತೆಗಳನ್ನು ನಡೆಸುತ್ತಿರುವರು ಆಲ್ಫೊನ್ಸೊರವರು ಸಿಂಹಾಸನವನ್ನು ಸ್ವೀಕರಿಸಿದರೆ, ಇಗ್ಲಾಂಡಿನಲ್ಲಿರುವ ಅವ ಮಿತ್ರರನೇಕರಿಂದ ತಗುಗೆ ಕು ವಾ ಧನ ಸಹಾಯವಾಗಬಹುದೆಂದು ಫ್ರಾಂಕೋವಿನ ಅಭಿವ್ಯಾಯವಾಗಿರುವುದು

ಈ ಕುರಿತು ಪರ್ಯಾಲೋಚಿಸಿ, ತಮ್ಮ ಸೇನಾ ನಾಯಕರಿಗೆ ಯುದ್ಧ ಸಿದ್ಧತೆ ಸ್ಥವಸ್ಥೆಯಾಗಬೇಕಾಗಿ ಅಪ್ಪಣೆ ಮಾಡಿರುವುದು ರಷ್ಯಾದಲ್ಲೂ ಹಾಗೆ, ಫ್ರಾನ್ಸಿನಲ್ಲೂ ಹಾಗೆ ಮುಸಲೆನಿಯು ಹಿಟ್ಲರೆಸೊಡನಿರುವನೆಂದು ಈ ವರೆಗೆ ಹೇಳಿಕೊಂಡಿದ್ದರೂ ಈಗ ಯಾವುದೊ ಕಾರಣಗಳಿಂದ ಸುಮ್ಮನಿರುವನು ಬಹುಶಃ ಚೆಂಬರ್‌ಲೀನರು ಆತನನ್ನು ವಲಿಸಿಕೊಂಡಿರಬಹುದು ಬ್ರಿಟಿಷ ಸಾಮ್ರಾಜ್ಯದ ದೇಶಗಳೆಲ್ಲಾ ಬ್ರಿಟನ್ನಿನೊಡನೆ ತಮ್ಮ ಸಹಾನುಭೂತಿಯನ್ನು ಸೂಚಿಸಿರುವವು ಕೆನಡಾ, ಏಸ್ಟ್ರೇಲಿಯ ಇತ್ಯಾದಿ ಸಾಮ್ರಾಜ್ಯದ ದೇಶಗಳು ಯುದ್ಧಕ್ಕೆ ಸಿದ್ಧರಾಗಿರುವರು.... ಹಿಂದೂದೇಶಕ್ಕೆ ಈ ಅವಸರದಲ್ಲಿ ಸ್ವರಾಜ್ಯ-ಸ್ವಾತಂತ್ರ್ಯ ಲಭಿಸುವುವೆ ಎಂದು ನೋಡಬೇಕು.

ಈ ಎಲ್ಲಾ ಸಂಭ್ರಮಗಳೆದುರಲ್ಲಿ ಇನ್ನೊಂದು ಮಹಾಯುದ್ಧವು ಅತೀ ಸಮೀಪದಲ್ಲಿರುವ ದೆಂದು ಹೇಳಬೇಕಾಗಿದೆ. ಯುದ್ಧವಾಗುವುದಾದರೆ ಅದು ಇನ್ನು ಕೆಲವೇ ದಿವಸಗಳಲ್ಲಿ ಸ್ಫೋಟಗೊಳ್ಳುವುದು.

ಬೂವರ ಯುದ್ಧದ ಸರಿಯಾಳುಗಳಿಗೆ ವಿಷಪ್ರಯೋಗ ಮಾಡಲಾಗಿತ್ತು.

ಬ್ರಿಟಿಷರ ಮೆಲೆ ಆರೋಪಣೆ.

ಮಿಸೆಸ್ ಸಾರಾ ಸಿನ್ಹಾನ್ ಎಂಬಾಕೆಯು ಬೂವರ ಯುದ್ಧದ ಕುರಿತು ಒಂದು ಪುಸ್ತಕವನ್ನು ವ್ಯಕಟಿಸಿರುವಳು. ಯುದ್ಧದ ಸಮಯದಲ್ಲಿ ಆಕೆಯು ರಣ್ಣಭೂಮಿಯಲ್ಲಿಯೇ ಇದ್ದುದರಿಂದ, ತಾನು ಕಂಡುದನ್ನು ಆಕೆಯು ಬರೆದಿರುವಳು. ಬ್ರಿಟಿಷರು ನಡೆಸಿದ ಅತ್ಯಾಚಾರಗಳ ಕುರಿತು ಅದರಲ್ಲಿ ವಿಶ್ಲೇಷಿಸಲ್ಪಟ್ಟಿದೆ

ಬ್ರಿಟಿಷರು ಮಕ್ಕಳನ್ನೂ ಸ್ತ್ರೀಯರನ್ನೂ ಏನೊನುಷರೀತಿಯಲ್ಲಿ ಪೀಡಿಸುತ್ತಿದ್ದರು ಆ ಕಾರದಲ್ಲಿ ವಿಟ್ಟಿಯೋಲ್ (ಮೈಲಕುತ್ತಿನ ಜಾತಿಯ ಒಂದು ಬಗೆಯ ವಿಷ) ಎಂಬ ವಿಷವನ್ನೂ ಗಾಜಿನ ಪುಡಿಯನ್ನೂ ಬೆರಸಿ ಸೆರೆಯಾಳುಗಳಿಗೆ ಕೊಟ್ಟು ಕೊಂದಿದ್ದರು ಸ್ಪಾತ್ರವಲ್ಲ ಅವರು ಅದಷ್ಟು ಬೇಗನೆ ಸಾಯಬೇಕೆಂದು ಮೈಲತುತ್ತೂ ಅದರಲ್ಲಿ ಬೆರಕೆ ಮಾಡಲ್ಪಡುತ್ತಿತ್ತು.

ಮನುಷ್ಯರನ್ನು ಈ ಬಗೆಯ ಹಿಂಸಾಮಯ ಮರಣಕ್ಕೆ ಗುರಿಮಾಡುತ್ತಿರಲು, ಸ್ಪಾಣಿಗಳ ಸಂರಿಸ್ಥಿತಿಯಾದರೂ ಬಹಳ ಕೋಚನೀಯವಾಗಿರುವುದು

ಕರಾಳರಾದ ಸೈನಿಕರು ಕುರಿಮಂದೆಗಳನ್ನು ಒಟ್ಟು ಗೂಡಿಸಿ ಸುತ್ತಲೂ ಹುಲ್ಲುಕಡ್ಡಿಗಳನ್ನು ರಾತಿ ಹಾಕಿ, ಅವುಗಳನ್ನು ಸುಟ್ಟು ಕೊಂದುದಿದೆ ಬೂವರ್ ಕುದುರೆಗಳ ನಡುವೆ ಬೊಂಬುಗಳನ್ನು ಬಿಸುಟು, ಅವುಗಳನ್ನು ಸಿಡಿದು ಬಿಟ್ಟುದಿದೆ ಎಂಬುದಾಗಿ ಬ್ರಿಟಿಷರು ಬೂವರ ಯುದ್ಧದಲ್ಲಿ ನಡೆಸಿದ ಅತ್ಯಾಚಾರವೆಲ್ಲವನ್ನೂ ಸಿನ್ಹಾನಳು ಬಯಲಿಗೆಳೆದಿರುವಳು.

ಇದು ಬ್ರಿಟಿಷರಲ್ಲಿ ಅಸಮಾಧಾನವನ್ನುಂಟುಮಾಡಿರುತ್ತದೆ. ಸಿನ್ಹಾನಳಿಗೆ ಬೆದರಿಕೆಯನ್ನು ಕಟ್ಟು ತುಂಬಾ ಪತಗಳು ಬರುತ್ತವೆಯಂತೆ ಆದರೆ ಆಕೆಯು ಬೆದರದೆ, ತಾನು ಸತ್ಯವಾದುದನ್ನೇ ಬರೆದಿರುವೆನೆಂದೆ, ಇನ್ನೂ ಕೆಲವು ವಿಷಯಗಳ ಕುರಿತು ಬರೆಯಲು ಅಸಹ್ಯ ಕಂಡುದರಿಂದ ಬಿಟ್ಟಿರುವೆನೆಂದೂ ವಾದಿಸುತ್ತಿರುವಳು

ಜಾತೀಯ ದ್ವೇಷೋಪಶಮನಕ್ಕಾಗಿ!

ಶಾಂತಿದಳದ ಏರ್ಪಾಡು

ವಾಷ್ಟಿಂಗ್ಟನ್ನಿನಲ್ಲಿರುವ 'ಜನತಾ' ಮಂದಿರದಲ್ಲಿ ಜರಗಿದ ಅಧಿವೇಶನದಲ್ಲಿ ಜಾತಿಯ ದ್ವೇಷೋಪಶಮನ ಕಾರ್ಯವನ್ನು ಕೈಕೊಂಡು ಹಿಂದೂ ಮುಸ್ಲಿಮರೊಳಗೆ ಐಕ್ಯವನ್ನು ಸ್ಥಾಪಿಸುವ ಸುದುದ್ದೇಶದಿಂದ ಎರಡು 'ಶಾಂತಿದಳ'ಗಳನ್ನು ಸಿರ್ಮಿಸಲಾಗಿದೆ ಈ ದಳಗಳನ್ನು ವಿರಚಿಸಲು ೧೫ ಮಂದಿಯಿಂದೊಡಗೂಡಿದ ಒಂದು ಸಮಿತಿಯು ಮಾಡಲಾಗಿರುವುದು ಈ ದಳದವರು ಊರ ಬೀದಿ ಬೀದಿ ಸ್ಥಳಗಳನ್ನು ಸಂದರ್ಶಿಸಿ ಅಲ್ಲಿಯ ಜನರೊಳಗಿ ಜಾತೀಯ ದ್ವೇಷಭಾವಾದಿಗಳನ್ನು ಉದ್ದ ಶಮನಗೊಳಿಸಲು ಪ್ರಯತ್ನಿಸುವರು.

ತ್ರಿಪುರ ಕೊಂಗ್ರೆಸ್ ಅಧಿವೇಶನಕ್ಕಾಗಿ

ಮಿಶ್ರರು ಮಂತ್ರಿಮಂಡಲದಿಂದ ಹೊರ ಬರುವರು

ಮಹಾಕೋಸಲದಲ್ಲಿ ಜರಗಲಿರುವ ಕೊಂಗ್ರೆಸ್ ಅಧಿವೇಶನವು ಪೂರ್ಣ ಯಶಸ್ವಿಯಾಗಿ ನಡೆಯುವಂತೆ ಪ್ರಯತ್ನಿಸುವುದಕ್ಕಾಗಿ, ನುದ್ಧವ್ಯಾಂತದ ಸ್ಥಾನಿಕ ಆತ್ಮ ಸರಕಾರದ ಮಂತ್ರಿಗಳಾದ ಮಾನ್ಯ ಡಿ. ಪಿ ಮಿಶ್ರರು ಕಮ್ಮ ಹುದ್ದೆಗೆ ರಾಜಿನಾಮೆಯನ್ನು ಕೊಡಲಿರುವರು.

ಕಳೆದ ಜುಲಾಯಿ ತಿಂಗಳಲ್ಲಿ, ತ್ರಿಪುರ ಕೊಂಗ್ರೆಸಿನ ಕೆಲಸವೆಲ್ಲವೂ ಯಶಸ್ವಿಯಾಗಿ ನಡೆಯುವಂತೆ ತಾನು ಪ್ರಯತ್ನಿಸುವೆನೆಂದು ಮಾನ್ಯ ಮಿಶ್ರರು ಗಾಂಧಿಜಿಯವರಿಗೆ ಭರವಸೆಯನ್ನಿತ್ತುದುದರಿಂದ, ತನ್ನೆ ಪ್ರಕೃತದ ಹುದ್ದೆಗೆ ತಿಲಾಂಜಲಿಯನ್ನಿತ್ತು ಅವರು ಮಹಾ ಕೋಸಲ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷಸ್ಥಾನವನ್ನು ವಹಿಸಿ, ಕಾರ್ಯವನ್ನು ನಿರ್ವಹಿಸುವರೆಂದು ತೋರಿ ಬರುತ್ತದೆ.

ಪ್ರಭುಪೌರ್ಣಿ

ಕಾರ್ಯಾಲಯ: [illegible]

ಯುರೋಪಿನಲ್ಲಿ ಅನಿಶ್ಚಿತತೆಯು ತಾರಕಕ್ಕೆ

ಇಂದಿನ ಪರಿಸ್ಥಿತಿ ಬಗ್ಗೆ ಆಗಾಗ ಮುರೋಪ್ಯರು ತಾವೇ ಗಳಿಗೆಯನ್ನೂ ಕಳೆದ ಪ್ರಮುಖರನ್ನು ಅತಿ ಶುತ್ತಾಹಲದಿಂದ ಕೇಳುತ್ತಿದ್ದಾರಿಷ್ಟು. ನೂರಿಬರ್ಗಿನಲ್ಲಿ ಭಾಷಣವಿತ್ತು. ವಾಯಿಗಳ ಉತ್ಸಾಹ ಕೊನೆಯ ದಿನವಾದ ಗಾನೆಯು ಕಾರ್ಯಕ್ರಮದ ವಾಯಿಗಳ ಮುಂದಣ ಕಾರ್ಯಕ್ರಮವು ಹೊರಬೀಳುವ ಕಾರಣ, ಶಾಂತಿ ನೆಲೆಸುವುದೋ ಶಾಂತಿಭಂಗವೋ ಅಂದೇ ಆಗು ಎಲ್ಲರ ಭಾವನೆಯಾಗಿತ್ತು. ಮಿಳ್ಳ ಪ್ರಭಲ್ಲಿ ಸೂಚಿಸುವಂತೆ, ದಿನದಿನಕ್ಕೆ ಉತ್ತೇಜ್ಯವಾಗಿಯೆ ಬರುತ್ತಿದ್ದ ರಣದುರ್ಗಿಯ ಸುವ ಶಾಂತಸಜ್ಜನಗಳಿಂದಲೋ ಬೆನ ನೆತ್ತ ಂದಲೋ ತಣ್ಣಯುವುದಾಗಿ, ಮಾರಿಯು ಪೂ ಕಾರಿಯಾಗಿ ಯಾರು ಎದ್ದು ನಿಲ್ಲುವರೋ ಂದೂ, ಅಥವಾ ಶಾಂತಿ ಉದುರಿದಂದ ಯಾರು ರಾಧಿಸುವರೋ ಎಂದೂ ಸರ್ವರು ಪ್ರತೀಕ್ಷಿ ಸುತ್ತಿದ್ದರು. ಕೆಲ ನುಂತ್ರಿಗಳು ಏಳು ತಾಸು ಳ ವರೆಗೆ ತಮ್ಮ ಗೋದಿಯೋಗಳ ಬಳಿಯಲ್ಲೇ ಜನಗಳಿಗಾಕ್ಕಾದುಕೂತಿದ್ದರು.

ಹಿಟ್ಲರನು ಭಾಷಣಮಾಡಿದುದೇನೆಂದು? ಾಷಣ ದೀರ್ಘವಿದೆ ನಿಜ: ಅಗತ್ಯ ಸಂದರ್ಭ ಮಾತುಗಳು ಕಡಿಮೆ. ದಿಕ್ಚೇಟರರ ಾಷಣಗಳು ವೈಜಾಸತ್ಯೆಯಿರುವ ರಾಷ್ಟ್ರಗಳ ನ ಮುಖಂಡರ ಭಾಷಣಗಳಂತಲ್ಲ. "ಝೆಕ್ಕ ನ್ನು ಬಲಾತ್ಕರಿಸುವ ಜರ್ಮನ ರೀತಿ ಸರಿಯೆಂದು ನಿಸುವ ಪ್ರಜಾಸತ್ತೆಯನ್ನಿ ದೂಷಿಸಿ, ಈ ಸರಕಾರಗಳೇ ಹೊಲಸೆನ್ನುವನು. ಜನತೆ ನ್ನು ಮರುಳುಮಾಡುವುದಷ್ಟೆ ಈ ಸರಕಾರ ಳ ರೀತಿ. ಜೆಸ್ಲಿಯೆ ಎಂಬಂತೆ ಓಸ್ಟಿಯ ನ್ನು ಸೇರಿಸಿಕೊಂಡ ಜರ್ಮನಿಯು 'ಚದರ ತ್ತಿಗೆ ಗಿಳಿ ಜನರಿಂದ ಕಿಕ್ಕಿರಿದು ಅಸಹ ಕ್ಲೇಶದಲ್ಲಿದೆ; ಅದರೂ 'ನೇಟಿವ್' ಣ್ಯರಲ್ಲಿ ವಾತ್ಸಲ್ಯವುಳ್ಳವರೆಂದು ಅವರಿಗಾಗಿ ಲ್ಪರಿತ್ಯಜಿಸುವವರ ಸ್ವಾರ್ಥದಿಂದ ಜರ್ಮನ ರಿಗೆ ಈ ಅವಸ್ಥೆಯೆಂದೂ ಹಿಟ್ಲರನ ವಿಮರ್ಶೆ. ಬ್ರಿಟಿಷರಂಗೂ ಫ್ರೆಂಚರಿಗೂ ಅನರವರ ವಸಾಹತುಗಳ ಮೇಲೆ ಯಾರಾದರೂ ದೌಡು ನಡೆಸುತ್ತಿದ್ದರೆ, ಆಗತಾನೆ, ಈಗ ಜರ್ಮನರು ಅನುಭವಿಸುವ ಕ್ಲೇಶಗಳು ಅನುಭವಕ್ಕೆ ಬರುತ್ತಿದ್ದುವು." ಆದರೆ, ಹಾಗೇನು ಇಲ್ಲವಷ್ಟೆ. ಜರ್ಮನಿಗೂ ಜಾಗೆಯ ಸಂಬಂಧವುಳ್ಳ ಕ್ಷೇತ್ರಗಳೂ ವಿದ್ಯಮಾನಗಳೂ ಇವೆ; ಅವನ್ನು ಸಂಪೂರ್ಣ ಶಕ್ತಿಯಿಂದ ಇದಿರಿಸಬೇಕಾಗಿದೆ ಹಿಟ್ಲರನಿಗೆ. 'ಇನ್ನೊಂದು 'ಅರಬ ಪೆಲೆಸ್ತೀನ್' ಉಂಟಾಗುವಂತಿಲ್ಲ. ಝೆಕ್ಕರ ರಾಜ್ಯದಲ್ಲಿರುವ ಜರ್ಮನರು ಪೆಲೆಸ್ತೀನ್‌ದಲ್ಲಿರುವ ಅರಬರಂತೆ ನಿಸ್ಸಹಾಯಕರೂ ಅಲ್ಲ, ಅವರ ಗೊಡವೆ ಇಟ್ಟುಕೊಳ್ಳುವವರೂ ಇದ್ದಾರೆ. (ಇರಾಕಿನ ಯುವಕರು ಜರ್ಮನಿಯಲ್ಲಿರುವ ಕಾರಣ, ಹಿಟ್ಲರ ವರ್ಷಗಳು ಅವರಿಗಾಗಿರಬೇಕು.) ಅದೊಂದು ಪೆಲೆಸ್ತೀನ್ ಸಾಕು, ಮತ್ತೊಂದು ಬೇಡ. ಪುನರುದ್ಧಾರಹೊಂದಿರುವ ದೇಶಗಳಿಂದರೆ—ಇಟೆಲಿ ಮತ್ತು ಜರ್ಮನಿ, ಇವೆಂಡೇ! ಅವನ್ನು ಯಾರೂ ಮೆಚ್ಚದಿರಬಹುದು, ಹಾಗೆಂದು ಅವನ್ನು ನಿರ್ನಾಮಗೊಳಿಸುವುದಕ್ಕೆ ಯಾರಿಂದಲೂ ಸಾಧ್ಯವಾಗದು! ಇಷ್ಟೇ ಸಾರ. ಮುಗಿಯಿತು.

ಭಾಷಣ ಮುಗಿಯುತ್ತಾದರೂ, ಇನ್ನೂ ಳು ಹತ್ತೆಗಳ ವರೆಗೆ, ಸೈನ್ಯಗಳ ಯುದ್ಧ ವಿದ್ಯಾ ವ್ಯಸನ ತುಂಬಾ ಪ್ರದರ್ಶಿತವಾಗುವುದು. ಝೆಕ್ಕರೂ ಸುಡೆಟನ್ ಜರ್ಮನರೂ ತಮ್ಮ ಸೈನ್ಯಾಕಾಗ್ರತೆಯನ್ನು ಮುಂದಿಡತೊಡಗಿದರು. ಸರ್ಕಾರು ಬಿಡಿಸಿ ಎಲ್ಲಿಯೋ ಒಂತಾಗಿಬಹುದು. ಆದರೆ ಜರ್ಮನ ದನರ ಮೋಟು ನಡೆದು ಅನ್ಯರಿಗೆ ಸ್ವರಾಷ್ಟ್ರ ಕೊಡಬೇಕೆಂದಾಗಲಿ, ಆ ಮೋಟುಗಳ ಮುಖ್ಯರ ಅವರು ಈಗ ನೆಲೆ ನಿಂತಿರುವ ಪ್ರದೇಶವೆಲ್ಲ ಜರ್ಮನಗೆ ಸೇರುವಂತಾಗಲಿ ಬೇಕೆಂದಾಗಲಿ, ಹಿಟ್ಲರನ ಸೂಚನೆಗಳ ಅರ್ಥ ವಾದರೆ, ಯುದ್ಧವೇ ಗತಿ. ಸುಡೆಟನರು ಝೆಕ್ಕ್ಗಳಿಂದ ವರ್ತಿಸುವ ಇಚ್ಛೆಯುಳ್ಳವರಾದರೆ, ಶುತ್ತಮ. ಆದರೆ ಅವರನ್ನು ಹಾಗೆ ಇರಲು ಬಿಡುವರೇ! ಶುತ್ತಳ ಗಡಿನಾಡು ಸೈನ್ಯ ಮಯವಾಗಿದೆ; ಜರ್ಮನರ ಯುದ್ಧಬಲದ ವಿಷಯ ಅಂಕೆಸಂಖ್ಯೆಗಳ ಮೂಲಕ ಜೆನ್ನಾಗಿ ಸಾರಲಾಗಿದೆ; ವೋಟು ಎತ್ತಿ ನೋಡಬಹುದಲ್ಲ ಎನ್ನಲಾಗಿದೆ. ವಿತೂರಿಗಳ ಮೂಲಕ ಕುಹಕ ವ್ಞನ್ನೆಬ್ಬಿಸುವವರೂ ತುಂಬ ಇದ್ದಾರೆ. ಹೀಗಿರುವಾಗ, ಪ್ರತಿ ರಾಷ್ಟ್ರವೂ ಯುದ್ಧಸನ್ನದ್ಧವಾಗಿಯೆ ಇರಬೇಕಾಗಿ ಬಂದಿದೆ. ತಲೆಗೆಟ್ಟು ಮತಿ ವಿಭ್ರಮವಾದಂತೆ ಎಲ್ಲ ರಾಷ್ಟ್ರಗಳು ಅಲ್ಲಿ ಉದ್ಭಿಗ್ನರಾಗಿರುವಾಗ ಶಾಂತಚಿತ್ತದಿಂದ ಶಾಂತಿಗಾಗಿ ವ್ಯಯಿಸುವುದೇ ಕಷ್ಟ; ಅಂತಹ ವ್ಯಯ ತ್ಪಗಳಿಂದಲೇ ಯುದ್ಧಕ್ಕೆ ಪ್ರಾರಂಭವಾಗಲೂ ಬಹುದು.

ಯುದ್ಧವು ಯಾರಿಗೂ ಬೇಡ, ನಿಜ. ಆದರೆ, ಯಾರಿಂದಲಾದರೂ ಉಂಟಾದರೆ? ಅದು ಹಬ್ಬುವುದು. ಪಾರಿಸಿನಲ್ಲಿ ಈ ಭಾಷಣವು ಭಯೋತ್ಪಾದಕನೆಂದೂ, ಆಗಲೆ ಫ್ರೆಂಚ್ ವಸಾಹತುಗಳ ಸೈನ್ಯಗಳು ಸಿದ್ಧವಿವೆಯೆಂದೂ ಆದರೆ ಕೂಡಲೆ ಯುದ್ಧವಾಗದೆಂದೂ ಅಭಿಪ್ರಾಯ. ಹಿಟ್ಲರನ ಭಾಷಣದಲ್ಲಿ ಖಂಡಿತ ನುಡಿಗಳೇ ಬೇರೆ ಬರುತ್ತಿದ್ದುವು; ಬ್ರಿಟಿಷರ ರಾಜಕೀಯ ಮುಸ್ಸಿನದನ ನಿಶ್ಚಿತ ವಾಕ್ಯಗಳಿಂದ ಆ ನುಡಿಗಳು ಮಾಯವಾದುವೆಂದೂ ಅಲ್ಲಿ ಹೇಳುತ್ತಾರೆ. ರೋಮಿನಲ್ಲಿ—ಹಿಟ್ಲರನ ಸಮಾಧಾನ ನುಡಿದ ಕಾರಣ, ಅಷ್ಟು ಕಾಲದ ನೋವನ್ನು ಹೇಗೆ ಸೈರಿಸಲಾಯಿತೋ ಎನ್ನುತ್ತಾರೆ. ಹಂಗೇರಿ--ಇದು ತೀರ ಸಂಧಿಕಾಲವೆನ್ನುತ್ತದೆ. ರುಮಾನಿಯವು ಬ್ರಿಟಿಷರ ಬೆಂಬಲಕ್ಕಿದೆ. ರಷ್ಯ ಮೌನವಾಗಿದೆ! ಬೆಲ್ಜಿಯಮ್ ಭದ್ರತೆ ಮುಗಿಸಿಕೂತಿದೆ! ಇಜಿಪ್ತಿನ ಯುದ್ಧಮಂತ್ರಿ ಲಂಡನಿಗೆ ಬಂದಿರುವನು!

ಇನ್ನೂ ಝೆಕ್ಕರನ್ನು ಬೆದರಿಸಿ, ಶಾಂತಿ ಸಾಧಕರನ್ನು ತಿರಸ್ಕರಿಸಿ, ಇನ್ನೂ ಉದ್ದಾಣ ಕ್ರಿಯೆಗೆ ತೊಡಗಿದ ಜರ್ಮನಿಯನ್ನು, ಮಿಕ್ಕ ವ್ರಜಾಸತ್ತೆಯ ರಾಜ್ಯಗಳು ವೀಚ್ಚುವ ತಾಗಿಲ್ಲ. '೭೦೦೦ ಝೆಕ್ಕರು ಮೂರುವರೆ ಮಿಲ್ಲಿಯ ಜರ್ಮನರನ್ನು ಹಿಂಸಿಸುವರು.' ಎಂದಾದಿದ ಹಿಟ್ಲರ ವಚನವನ್ನು ಓದಿ, ಲಂಡನಿನ ಟೈಮ್ಸ್ 'ಜರ್ಮನಿಯಂತಹ ಪ್ರಬಲ ರಾಜ್ಯದ ಪ್ರತಿನಿಧಿಯು ಇಂತಹ 'ನೊನ್ಸೆನ್ಸ್' ಆಡುವುದು ವಶ್ಚಿತ್ಯವೆಳೆದ!' ಎಂದು ಬರೆದಿದೆ. 'ಜರ್ಮನಿಯ ಸೈನ್ಯಬಲದ ಛಾಯೆಯಲ್ಲಿ ಶಾಂತಿಗಾಗಿ ಸಂಭಾಷಣೆಗಳು ಸೇಗಾಗುವುವು?'

ಸದ್ಯಕ್ಕೆ ಯುದ್ಧಭಯ ತೊಲಗಿತು. ನಿಜ. 'ಜರ್ಮನ್ ಧ್ವಜದ ಹಿಮ್ಮ ಕನ್ನು ಉಗ್ರಾಣಗಳನ್ನು ಹಿಂದಕ್ಕೆಳೆದಿಯಾದರೂ, ಫಕ್ಕನೆ ಅವನ್ನು ಚಾಚಿ, ತನಗೆ ಬೇಕಾದುದನ್ನು ಕೊಳ್ಳಿಹೊಡೆಯದಿರದು' ಎಂದೇ ಫ್ರೆಂಚರ ಮಾತು. ಝೆಕ್ಕರು ಇದುವರೆಗೆ ಕೊಟ್ಟಿರುವುದಕ್ಕಿಂತ (ಸೂಚಿತವಾದಂತೆ) ಇನ್ನೇನೂ ಕೊಡುವಂತಿಲ್ಲ, ಎಂದು ಝೆಕ್ಕ ರಾಯಭಾರಿಯು ನುತ. ವೋಟಿನ ಮೂಲಕ ಸಿರ್ಧಾರವಾಗುವರೆ ಬಿಡುವ ಬದಲಾಗಿ, ಯುದ್ಧವಾಗಲಿ ಎಂದು ಝೆಕ್ಕ ಜನತೆಯ ಅಭಿಪ್ರಾಯ. ಒಕ್ಟೋಬರ್ ಗಣನೀ ತಾರೀಕ್ಕೇ. ಈಗ ವಿಶೇಷ ಕಠಿನ ಸಂಧಿಕಾಲವೆಂದು ಝೆಕ್ಕ ಪತ್ರಗಳು ತಿಳಿಸಿವೆ. ಎಂದರೆ, ಈ ಪಂಥಟಮಯ ವಿಹ್ವಲತೆಯು ಅದುವರೆಗೆ ಯುರೋಪನ್ನು ಬಾಧಿಸುವ ಹಾಗೆ ಹಿಟ್ಲರ ಭಾಷಣದ ಪರಿಣಾಮವಾಗುತ್ತದೆ.

ಅತಿ ಸಂತಾಪಕರ ವಾರ್ತೆ.

ಮದ್ರಾಸಿನಿಂದ ಪ್ರಕಟವಾಗುತ್ತಿರುವ 'ಸಂಡೇ ಟೈಮ್ಸ್' ಪತ್ರಿಕಾ ಸಂಪಾದಕರಾಗಿ ಇದೀ ದೇಶದಲ್ಲಿ ಇಂಗ್ಲಿಷ್ ಪತ್ರಿಕೆಗಳನ್ನು ಓದುತ್ತಿರುವವರಿಗೆಲ್ಲ ಇವೊತ್ತೇ ವರ್ಷಗ ಹಿಂದೆ ಸುಪರಿಚಿತರಾಗಿದ್ದ ಶ್ರೀ ಎಮ್. ಎಸ್. ಕಾಮತ್, ಇವರು ಕಾ. ಗುರಿನೆಯು ಸ್ವಾಯಂಕ್ಕಾಲ ಜ್ವರಬಾಧೆಯಿಂದ ಸ್ವರ್ಗಸ್ಥರಾದರೆಂಬ ವಾರ್ತೆ ನಮಗೆ ತಲುಪಿದೆ. ಶ್ರೀ. ಕಾಮತರು ನಮ್ಮ ಜಿಲ್ಲೆಯಲ್ಲಿ ಮುಂಚೇಶ್ವರದೊಂದು ಪುರಾತನ ಗೌಡಸಾರಸ್ವತ ಮನೆತನಕ್ಕೆ ಸೇರಿದವರಾಗಿದ್ದು, ಸ್ವಾತಂತ್ರ್ಯಾಭಿಲಾಷಿಗಳೂ ಧರ್ಮಭೀತಿಯಿಂದ ದುಡಿಯತಕ್ಕವರೂ, ವೈಹಿತಚಿಂತಕರೂ ಆಗಿದ್ದರೆಂದೂ, ವೈವಭಕ್ತಿ ಧರ್ಮಶ್ರದ್ಧೆ ವಿಶ್ವಾಸಗಳಲ್ಲಿ ಧರೆಂದೂ ಅವರ ಪ್ರತಿ ಸಾವಧಾನಿಕ ಪತ್ರಿಕೆಯನ್ನೋದಿದರೆ ವ್ಯಕ್ತವಾಗುವುದು. ಬಹಳ ವರ್ಷಮುಂದಿಂದ ತನ್ನಪತ್ರಿಕೆಯನ್ನು ಶಾಶ್ವತವಿರಿಸಲು ಸ್ವಕಂಕ್ಯವಾಪ್ತ ಮುದ್ರಣಾಲಯ ಮೊದಲಾದುವನ್ನು ಸಂಘಮೂಲಕ ಸಂಸ್ಥಾಪಿಸಿ, ಅತಿ ಸುಲಭವಾಗಿ ಸಚಿತ್ರ ಪತ್ರಿಕೆಯ ಧ್ವಾರಾ ೨೯೦೦೦ಕ್ಕೂ ಮಿಗಿ ಪ್ರತಿಗಳು ಮಾರಾಟವಾಗುವಂತೆ ಮಾಡಿದ್ದರು. ಬರೀ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಸರ್ವತೋಮುಖವಾದವ್ಯಪಾರ ಮಾಡುತ್ತಿದ್ದರು. ಇತ್ತೀಚೆಗೆ ಹಿಂದುಸ್ಥಾನವೆಂಬ ತಮಿಳುವಾರವತ್ರಿಕೆಯನ್ನು ಹೊರಡಿಸಿದ್ದರು. ಅಚ್ಚು ಕೂಂಗ್ರೆಸ್ ಸೂತ್ರಗಳನ್ನು ಬಹಳವಾಗಿ ಪ್ರಚಾರ ಮಾಡಿದರು.

ಇವರ ಆತ್ಮಕ್ಕೆ ಶಾಂತಿಯಿರಲಿ.

'ಹಿಂದೀ' ಸೈನ್ಯಕ್ಕೆ ಬ್ರಿಟಿಷ್ ಸರಕಾರದ ಸಹಾಯ

ಯುರೋಪಿನ ವಿದ್ಯಮಾನಗಳ ದೆಸೆಯಿಂದಲೋ, ಇಲ್ಲಿನ ಚಳವಳಿದ ಫಲವಾಗಿಯೋ ಅಥವಾ ಸ್ವತಃ ವೈಸ್ರಾಯರೇ ಒತ್ತಿ ಹೇಳಿದುದರಿಂದಲೋ – ಹಿಂದೀ ಸೈನ್ಯದ ಮೂಲ ಖರ್ಚು ಗಳಿಗಾಗಿ ಏದು ಮಿಲ್ಲಿಯ ಪವನುಗಳನ್ನೂ, ಸುಧಾರಣೆಯ ಖರ್ಚಿಗಾಗಿ ಎರಡು ಮಿಲ್ಲಿಯದ ವರೆಗೆ ಖರ್ಚನ್ನೂ ಸೆಂಕ್ಷನು ಮಾಡಿಯದೆ. ಇಲ್ಲಿಂದ ನಾಲ್ಕು ದಂಡುಗಳ ಭಾರವನ್ನೂ ಬ್ರಿಟಿಷ ಸರಕಾರವೇ ಹೊರಲೂ ಒಪ್ಪಿರುವುದು ಮಾತ್ರವಲ್ಲದೆ, ಇಲ್ಲಿ ಉಳಿಯುವ ಸೇನೆಗಳು ದೇಶರಕ್ಷಣೆಗೆ ಸಾಕಷ್ಟು ರೀತಿಯಲ್ಲಿ ಆಕ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗುವಂತೆಯೂ ವಿವಾರವಾಗಿದೆ. ಆದರೆ ಇಂಡಿಯಾ ಸರಕಾರದ ಬಜೆಟಿನಲ್ಲಿ 'ಸೈನ್ಯದ ಖರ್ಚು' ಕಡಮೆಯಾಗುವಂತಿಲ್ಲವಂತೆ. ಅದೀಗ ಖಂ ಕೋಟಿಯಿಂದ ಅಕಕ್ಕೆ ಇಳಿದಿದೆ!

ಯುದ್ಧದ ಪ್ರಸ್ತಾಪೆಗಳು ನಡೆದಾಗ, ಇಲ್ಲಿ ಯಾರೂ ಆ ವಿಷಯ ಮಾತೆತ್ತಿ, 'ಇಂಡಿಯಾ ಯುದ್ಧದ ಹೊರಗೆ'—'ಇಂಡಿಯಾ ಬ್ರಿಟಿಷರ ಬೆಂಬಲಕ್ಕಿಲ್ಲ'—'ವಿರೋಧಿಗಳಿಗೆ ಸಹಾಯ' ಇತ್ಯಾದಿ ನೂತೆತ್ತುವುದು ಸಾಮ್ಯವಲ್ಲ. ವಾಗ್ಜಾಲತೆಗೆ ಮಿತಿ ಇರಬೇಕೆಂದೂ ಎಂಸೆಂಬ್ಲಿಯಲ್ಲಿ ಕಿಳಿಸಲಾಗಿದೆ.

ಕಿಸಾನರಿಗೆ ಕೊಂಗ್ರೆಸಿನ ಪುಶ್ಲೆ? ಸಹಜಾನಂದರಿಗೆ ಮಂತ್ರಿ ಪದವಿ.

ಧರ್ಮಾಂಗದಲ್ಲಿ ನಡೆದ ಥಾನಾ ಕೊಂಗ್ರೆಸ್ ಕಮಿಟಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಕೂಟದಲ್ಲಿ, ಕಿಸಾನಪ್ರತಿನಿಧಿಗಳಿಂದು ಮೇರೆಯುನ ಎಮ್. ಎಲ್. ಎ.ಗಳೆಲ್ಲರೂ ತಮ್ಮ ಸ್ಥಾನಕ್ಕೆ ರಾಜಿನಾಮೆಕೊಟ್ಟು, ಕೊಂಗ್ರೆಸ್ ಹರಿಯೊಳಗಳಿಗೆ ಇದಿರಾಗಿ ಚುನಾವಣೆಗೆ ನಿಂತು, ತಮಗೆ ನಿಜವಾಗಿಯೂ ಕಿಸಾನರ ಬೆಂಬಲವಿರುವುದೆಂದು ತೋರ್ಪಡಿಸಬೇಕೆಂದು ಒಂದು ನಿರ್ಣಯವಾಗಿರುವುದು.

ಒಕ್ಕಲುತನ ಮಸೂದೆಯನ್ನು ವಿರೋಧಿಸಿದ, ಬಿಹಾರ ನ್ಯಾಯವಿಧಾಯಕ ಸಭೆಯ ಆ ಮುಂದ ಸದಸ್ಯರನ್ನು ತಮ್ಮ ಸ್ಥಾನಕ್ಕೆ ಕೂತಲೆ ರಾಜಿನಾಮೆಕೊಟ್ಟು ಪುನಃ ಚುನಾವಣೆಗೆ ನಿಲ್ಲುವಂತೆ ಕೇಳಿಕೊಳ್ಳಬೇಕಾಗಿ ಶ್ರೀ ಧರ್ಮಿ ಧರರು ಎಂದಿರುವರು. ಅವರು ಕೊಂಗ್ರೆಸ್ ಹುರಿಯಾಳನ್ನು ಸೋಲಿಸಿ ಪುನಃ ಮೆಂಬರರಾಗಿ ಚುನಾಯಿತರಾದರೆ, ಮಾನ್ಯ ಶ್ರೀ ಕೃಷ್ಣಸಿಂಹರು ನಿನ್ನ ಕ್ಷರಾಗಿ, ಸರಕಾರದ ಸೂತ್ರಗಳನ್ನು ಸ್ವಾಮಿ ಸಹಜಾನಂದರಿಗೆ ಒಪ್ಪಿಸಲೇಬೇಕೆಂದೂ ಅವರು

'ಹದಿಮೂರು' ಇಬ್ಬರ ಪ್ರಾಣಗಳನ್ನು ಹೀರಿತು.

ಸಿರಾಜಗಂಜ್ ಎಂಬಲ್ಲಿ ಜೋಧನಸಿಂಗ ನೆಂಬೊಬ್ಬ ಸಬ್ ಇನ್ಸ್‌ಪೆಕ್ಟರರು. ಇವರು ತುಂಬಾ ಮೂಢಶ್ರದ್ಧೆಯುಳ್ಳವರು. ಕೆಲವು ಸಂಖ್ಯೆಗಳು ತನಗೆ ಹಾನಿಕರವೆಂದು ಅವರ ನಂಬುಗೆಯಾಗಿತ್ತು. ಒಂದು ದಿನ ಕೇಂಪಿನಿಂದ ಹಿಂದಿರುಗಿದೊಡನೆ, ತಾನು ಬಂದುದನ್ನು ಬರೆದಿಡಲು ಡ್ಯಾಯರಿಯನ್ನು ತೆರೆದರು. ಅದರಲ್ಲಿ ಈ ನೊದಲೇ ಹದಿನೆರಡು ನರದಿಗಳಿದ್ದುವು. ಅನಂದ್ಯ ಹದಮೂರನೆಯಾದುದರಿಂದ ಅವರಿಗೆ ಕುಂಬಾ ವ್ಯಸನವುಂಟಾಯ್ತು. ಕಾರಣ,—೩-೧೩-೨೩ ಮತ್ತು ೪-೧೦-೨೪ರನ್ನು ಅವರು ತನಗೆ ದುರದೃಷ್ಟವನ್ನುಂಟುಮಾಡುವ ಸಂಖ್ಯೆಗಳೆಂದು ವರಿಗಣಿಸುತ್ತಿದ್ದರು. ಆದುದರಿಂದ ಎನೂ ಬರೆಯದೆ ಡ್ಯಾಯರಿಯನ್ನವರು ಪುನಃ ಕಳುಹಿದರು.

ಮರುದಿನ ಅವರು ನಾಲ್ಕು ನರದಿಗಳನ್ನು ಬರೆದಿಟ್ಟರು. ಹೆಡ್ ಕಾನ್‌ಸ್ಟೆಬಲನು ತನಗೆ ಡ್ಯಾಯರಿಯನ್ನು ಮಧ್ಯಾಹ್ನತ್ರಯಲ್ಲಿ ಕೊಟ್ಟುದರಿಂದ ವರದಿಯನ್ನು ಬರೆಯಲು ವಿಳಂಬವಾಯಿತೆಂಬುದು ಮೊದಲನೆಯದು. ಉಳಿದ ಮೂರರಲ್ಲಿ ಅದೇ ಹೆಡ್‌ಕಾನ್‌ಸ್ಟೆಬಲನುಕೆಲವು ಚಿಲ್ಲರೆ ಕಳವುಗಳ ವಿಷಯ ಬರೆದ ವರದಿಯೆ ಕಾರಿತು ಟೀಕೆಯುದ್ದಕು.

ಸಬ್ ಇನ್ಸ್‌ಪೆಕ್ಟರರ ಮೂಢ ಭೀತಿಯ ಕಾರಿತು ಸಾಬಿಸಿ, ಹೆಡ್‌ಕೊನ್‌ಸ್ಟೆಬಲನು ತನ್ನ ತಪ್ಪನ್ನು ತಾನು ಸರಪಡಿಸಿಕೊಂಡೆನೆಂದು ಹೇಳಿದನು.

ಬಳಿಕ ಸಬ್ ಇನ್ಸ್‌ಪೆಕ್ಟರರು ಇತರ ತೆನ್ನು ಕೆಲಸಗಳಲ್ಲಿ ನಿರತರಾಗಿರಲು, ಹೆಡ್‌ಕಾನ್‌ಸ್ಟೆಬಲನು ನೇರವಾಗಿ ಇನ್ಸ್‌ಪೆಕ್ಟರರ ಮನೆಗೆ ಹೋಗಿ, ತಾನು ಅವರನ್ನು ಕೊಲ್ಲಲಿರುವೆನಾದುದರಿಂದ, ಒಕೆಯೂ ನೀನೆಯವರಿಗೊಂದು ತುತಿಯನ್ನು ಬಿಡುವಂತೆ ಹೇಳಿ, ಹತ್ತು ರೂ. ಪಾಯಿಯ ನೋಟೊಂದನ್ನು ಇನ್ಸ್‌ಪೆಕ್ಟರರ ಮಡದಿಯ ಕೈಯಲ್ಲಿ ಕೊಟ್ಟನು.

ಅನಂತರ ಸಂತಸ್ತನಾದ ಆ ಕೊನ್‌ಸ್ಟೆಬಲನು ಸೈಕಿಲಿಗೆ ಒಂದು ಒದ್ದು ಬಂದೊಳನ್ನೂ ಲಗ ತೋಟಿಗಳನ್ನು ಕಡಿದೊಯ್ದನು.

ಇಬ್ಬರಲ್ಲಿ ಇನ್‌ಸ್ಪೆಕ್ಟರರ ಮಡದಿಯು ಮತಿಯನ್ನೆಬ್ಬಿಸಿ ಒಂದು ಪತ್ರವನ್ನು ಕಳುಹಿದ್ದಳು ಆ ಪತ್ರವು ಇನ್‌ಸ್ಪೆಕ್ಟರರ ಹಸ್ತಗತವಾಗುತ್ತಿರುವಾಗಲೆ, ಕಾನ್‌ಸ್ಟೆಬಲನು ಒಳನುಗ್ಗಿ ಅವರ ಹೃದಯಕ್ಕೆ ಗುರಿಯಿಟ್ಟು ಗುಂಡುಹಾರಿಸಿದನು. ನಂತರ ಇನ್ನೊಂದನ್ನು ಹಾರಿಸಿ, ತಾನೂ ಆತ್ಮಹತ್ಯೆ ಮಾಡಿಕೊಂಡನು.

ಓದಭಾರದೆ?

ಮಹಾತ್ಮಾಜಿಯವರ 'ಹಿಂದ್ ಸ್ವರಾಜ್ಯ' ಈಗಿನ ಜನಜೀವನದಲ್ಲಿ ಜನಮನದಲ್ಲಿ ಕ್ರಾಂತಿಯನ್ನುಂಟು ಮಾಡಿರುವ ಚಿಕ್ಕವಹಿ ನಾಳಿನ ಮುಮ್ಮೆಟ್ಟಿನ್ನು ಇಡಲು ವಿವೇಕಸೂಚನೆಯ ಪ್ರಸ್ತಾಪ ಒಪ್ಪಲಿ, ಒಪ್ಪದಿರಲಿ, ಎಲ್ಲ ಸಮಾಜಗಳ ಎಲ್ಲ ಮತಗಳ ಚಿಂತನಶೀಲರು ಮೆದುಳನ್ನೆ ಚಳವಳಿಸಿಕೊಳ್ಳುವಂತಹ ಸೂತ್ರಗಳುಳ್ಳ ಶಾಸ್ತ್ರ ಓದಬಾರದೆ ಎನ್ನುವುದಕ್ಕಾಗಿಯೆ ಇಲ್ಲಿ ಅದನ್ನು ಕುರಿತುಮಹಾಮಹನೀಯರ ಅಭಿಪ್ರಾಯಗಳನ್ನು' ವಿಮರ್ಶಾಪೂರ್ವಕ ಬರೆವೆವು.... ಆಗಾಗ ಬರೆವೆವು. ಮೂಲ ಪ್ರತಿ ಪ್ರಕಟವಾಗಿ ೫೦ ವರ್ಷಗಳಾಯಿತು; ಈಗ ಆದರಲ್ಲಿ ಸಾರಿದ್ದ ತತ್ವಗಳು ಆದರಣೀಯವಾಗುತ್ತ ಬರುತ್ತ ಅವೆ ಜಗತ್ತು ಅವನ್ನು ಗ್ರಹಿಸಿಕೊಳ್ಳಲು ಯತ್ನಿಸುತ್ತದೆ

ನೈತಿಕ ಕತ್ತಲಗಳನ್ನ ಮೂಲೆನಾಲಾಗಿಸಿ ದುರ ಪರಿಣಾಮವಾಗಿ, ಹಿಂದಣಿಂದ ಅಭ್ಯಾಸ ಮಾತಿ ಬಂದ ಅನೈತಿಕ ಸಾರ್ವಜನಿಕ ದರ ಫಲವಾಗಿ ಈಗ?

ಹಾಗೆಂದು ಈ ಸುಧಾರಣೆ ಎಂಬುದು ಗಣವಾಗದ ರೋಗವೆ? ಮಾನವಕೋಟಿಗೆ ಇವೆಂದ ಸ್ವಾಧೀನ ಮಾತ್ರ ಸಂಭೋಜವೆ? ಹೀಗೆ ನಂಬಿರ ವನಗ ಇದ್ದಾರೆ ಇತರರು, ಅಮೃತ ಸಂಜೀವನವನ್ನು ಹೊಲವು ಪಾಕಗಳಲ್ಲಿ ರಚಿಸಿರ ರ, ಆದರೆ ಇವುಗಳಲ್ಲಿ ಮಧಾರ್ಥ ಜರಾಮರ್ಜನೆಯ ದ್ರವ್ಯಗಳೇ ಇಲ್ಲ! ಸುಧಾರಣೆಯೆಂಬುದು ಗುಣಪಡಿಸಲಾರದ ರೋಗವೇನೂ ಅಲ್ಲವೆ ದೇ ಗಾಂಧಿಜಿಯವರು ಅದು ಒರಿದರು. ಅವರ ಚಿಕಿತ್ಸಕನು ವನ್ನೂ ಸೂಚಿಸಿದರು.

ಈ ಚಿಕಿತ್ಸೆಯನ್ನು ಕೈಕೊಳ್ಳುವ ಯೋಗ್ಯ ತೆಯೂ ಸಿದ್ಧತೆಯೂ ಭಾರತ ರ್ಷದಲ್ಲಿ ಇವೆ ಎಂದರಿತು, ಅವರು ತಮ್ಮ ಸಂಚಿಕೆಗಳನ್ನ ಮತ್ತಸ್ಸು ಏನರವಾಗಿ ಬರೆದ ಚಿಕಿತ್ಸೆಯ ಪ್ರತ್ಯಕ್ಷ ವ್ಯವಹಾರ ಜ್ಞಾನ ಹೊರೆವಂತೆ ಜನತೆಗೆ ಅನುಕೂಲತೆಗಳನ್ನ ಒದಗಿಸಿಕೊಟ್ಟರು ಆದರೂ ಯುವಕರಿಬ್ಬೇ ಮಂದಿ ಈ ಚಿಕಿತ್ಸೆಗೆ ಒಲಿದಿಲ್ಲ ಇನ್ನೂ ಆ ಸುಧಾರಣಾರೋಗಗ್ರಸ್ಥರಾಗಿರುವರೆಂದು ಅಭಿವ್ಯಾಜಗಳ ವ್ಯಕ್ತವಾಗುತ್ತಲಿವ ಪಾಶ್ಚಾತ್ಯರೋ ಸಿಕ್ಕಿಬೀಳುವಂತೆ ನೆಂದು ಕಸದ ಗೂಡಿಗೆ ಒಡ್ಡಿದ ಆ ಸುಧಾರಣಾ ಕಸದ ರಾಶಿಯನ್ನು ಅತ್ಯಮೂಲ್ಯವಾದ ದಿವ್ಯ ವಸ್ತುಗಳೆಂದು ನವ್ಯಲ್ಲಿ ಇನ್ನೂ ಇನ್ನೂ ಅಂಗೀಕರಿಸುವವರಿದ್ದಾರಂತೆ, ಅಲ್ಲವೆ? ವಿಶ್ವಶಾಲ್ಯ ವಿದ್ಯಾಭ್ಯಾಸದ ದುಪ್ಪಲವು ಇನ್ನೆಂಥದಾದೀತು? ಭೂಲೋಕದಲ್ಲೆಲ್ಲ ಇಂದಿಗೆ ಪಾಶ್ಚಾಲೋಚನೆಗೆ ಕರ್ಕಶವಾಗಿ ತೋರಿರುವ ಸಮಸ್ಯೆಗಳಿಲ್ಲಿ? ಭಾರತವರ್ಷದ ನುಡಿಯಂತೆ ಸಮಸ್ಯೆಗೂ ಕಿನವಾಗಿರುವ ಮತ್ತೊಂದು ಸಮಸ್ಯೆ ಭೂಲೋಕದಲ್ಲೇ ಇಲ್ಲವೆನ್ನೆಬೇಕು ಸನಾತನ ನೈತಿಕ ಸೂತ್ರಗಳನ್ನು ಅವಲಂಬಿಸಿಯೇ ಬರೆದ ಮಹಾತ್ಮಾಜಿಯವರ ಚಿಕಿತ್ಸೆಯನ್ನು ಕೈಕೊಳ್ಳುವುದೇಂದರೇ ಭಾರತವರ್ಷದ ಮೆತ್ತ ಭೂಲೋಕದ ಎಲ್ಲ ಸಮಸ್ಯೆಗಳು ಇತ್ಯರ್ಥವಾದವು ಇದರಿಂದಲೇ ಹಿಂದ್‌ಸ್ವರಾಜ್ಯ' ನ್ನು ಕತ್ತಜ್ಞತೆಸಿಗಳು ಚರ್ಚಿಸುತ್ತಿದ್ದಾರೆ ಅವರ ಚರ್ಚಾಭಾವನೆಗಳನ್ನು ಮುಂದಣ ಲೇಖಗಳಲ್ಲಿ ಓದಿಕೊಳ್ಳಬೇಕಾಗಿದೆ ಕೆಲವರು ವಿರದ್ಧಭಾವದಿಂದ ತರ್ಕಿಸಿದುದನ್ನು ಇನ್ನಿತರ ಉತ್ತರ ಭಾಗದಲ್ಲಿ ಕಿದ್ದಿರುವರು ಪಾಶ್ಚಾತ್ಯ ಸುಧಾರಣೆಯ ಅನುಲ ಇಳಿಯುವಂತೆ ಬರೆದ ಹಿಂದ್‌ಸ್ವರಾಜ್ಯದಲ್ಲಿನ ಮಾತುಗಳನ್ನು ಅನರೊಳಗೇ ಅಷ್ಟೆ ಲ್ಲಾನಿಗಳಾದರೂ ಹಿಲ್ಲರ ವೃದಪ್ಪಿದಿರೆ, ಅವುಗಳವ್ಯಾಪ್ತಿಯ ವ್ಯಾಪ್ತಿಯನ್ನು ಎಸ್ಟಿರಬೇಕೆಂಬ ಅಂದುಬರುವುದು

ಇದರಿಂದ ಸ್ಪಾರ್ತಿ ರ ಹೃದಯವೇ ಬದಲಾಯಿತೆ, ಎಂದು ಒಳಿಕ ಯುರೋಪಿನಲ್ಲಿ ಹಿ ಸಾತ್ಮರ ಹೃದಯಗಳನ್ನು ಇದ್ದು ಕಿಡಿದೇ ಯೆ ರೋ ನ ಜನತಾಸಾಮಾ ರರು ಮೊದಲಾಗಿ ತನ್ನ ಹೃದಯ ಪರಿವರ್ತನೆಯ ಕಡೆಗೆ ಲಕ್ಷ್ಯ ಕೊಡಬೇಕಲ್ಲವೆ? ಅವರಿಗೂ ಈ ವಹಿಯೇ ಸಹಾಯಕವಾದೀತೆ

ನೋಹನದಂತೆ ಕರುಣೆಯಿಂದ ಗಾಂಧಿಯ ಜನ್ಮದಿನದ ಪರ್ಧ ತ್ಯಾಗ್ನಿಯ ಕಾಲಕ್ಕೆ ಇದೇ ತಾ ೨೭ (ಹಿಂದೂ ಸಂಚಾಂಗದ ಪ್ರಕಾರ) ರಲ್ಲಿ, ಅವರ ಜೀವನಧ್ಯೇಯಗಳ ಕಡೆಗೆ ಭಾರತವಾಸಿಯರ ಗುಸನ್ನ ಹರಿಯುವಂತಾದರೆ, ಆದರಿಂದಾಗತಕ್ಕ ಅಭ್ಯುತ್ಥಾನ ಅಂತಿಯ ಉತ್ಸವದ ಅತ್ಯಾದರಣಗಳನ್ನು ನರೆವಾಡುವನ್ನು ಸಾಂಗವಾದೀತು

ಭಾರತವರ್ಷವು ತನ್ನ ಜೀವನತತ್ವವನ್ನು ಸ್ವಪಂಚಕ್ಕೆ ಸಾರುವಂತಾಗಲಿ!

A P

ಭಾರತವರ್ಷವೂ ಭೂಲೋಕವೂ

ಈಗ ಸುಧಾರಣೆ ಎಂಬುದು ಯಾವುದೋ ಅದಕ್ಕೆ ಆ ಹೆಸರು ಒನ್ನವೆಂದು ಯಾರೂ ೫೦ ವರ್ಷಗಳ ಹಿಂದೆ ಕೇಳಿದ್ದರೆ, ನಮ್ಮಲ್ಲಿ ಎಷ್ಟು ಮಂದಿ ನಂಬುತ್ತಿದ್ದರು. ಆ ಎಚ್ಚರಿಕೆ ಆಗ ಕೂಟ್ಟಿದನ್ನು ಎಷ್ಟು ಮಂದಿ ತಾನೆ ಈಗ ಗ್ರಹಿಸಿಕೊಂಡರು? ಇದ್ದಂತೆಯೆ ಮುಂದರಿದ್ದಲ್ಲಿ ತನ್ನ ಅತ್ಯಾಚಾರವನ್ನು ದಡಕ್ಕನಿಸಿ ಸುಧಾರಣೆಮಾಡಿಕೊಳ್ಳುವುದು ಪಾಪವೆಂದು ಈಗ ಭವಿಷ್ಯ ನುಡಿದ ನರನ್ನು ಯಾರು ಅಲಿಸಿದರು?

ವಿಜ್ಞಾನದ ಪ್ರಭಾವ ಬಳ್ಳಿದಂತೆ ಮದೋನತವಾಗಿದ ಯುರೋಪು ಅಮೇರಿಕಗಳು ಸರ್ವನಾಶೋನ್ಮುಖವಾಗಿಯೂ ವೈಯಕ್ತಿಕವಾಗಿ ಯೂ ಇರುವ ಆದ್ಯ ಕರ್ತವ್ಯಗಳನ್ನೂ ಅವುಗಳ ಬೇರಿಂದ ಬೆಳೆದ ಆಕ್ಷೀಯ ಮತ್ತು ವಾಸ್ತವಿಕ ಹೆಚ್ಚಳವನ್ನೂ ತಿಳಿದುನೆ? ಪಾಶ್ಚಾತ್ಯ ಸುಧಾರಣೆಯ ಅಮಲು ಸೌರ್ವಾತ್ಯರಿಗೆ ನಡವಳಿಗೇರಿದ್ದಿತು. ಯೌರೂ ಅನರಂತೆ ಧೀರರೆಂದು ಗಳಹಿದರೋ ಅವರನ್ನೆ ಇಲ್ಲಿನವರು ಹಿಂಬಾಲಿಸಿ ಸಹಾನುಭೂತಿ ತೋರಿಸುತ್ತಿದ್ದರು. ಜಾವಾನು ವಾಶ್ಚಾತ್ಯ ಸುಧಾರಣೆಗೆ ತಲೆಬಾಗಿತು. ನರಣಾನು ಫಲಗಳನ್ನು ಈಗ ಭುಜ್ಜುತ್ತಲಿದೆ, ಯುರೋಪು ಖಂಡವೇ ಈ ಫಲಗಳನ್ನ ಬಡಿಸುವ ಭೋಜನಶಾಲೆಯಾಗಿದೆ.

ಆ ಸುಧಾರಣೆಯು ಅಧನುನರ್ಗದ್ದೆಂದು, ಹೇಳಿದವರಿದ್ದರು (ಬೆಡೆಸ್ ಬ್ಲಾವಟ್ಸ್ಕಿ) ಈಗ ಜೀವಿತ ಹಿಂದಿಯ ರಲ್ಲಿ ಮಹಾತ್ಮರೆನಿಸಿ, ಜಗತ್ತಿನ ಗಣನೀಯರೊಳಗೆಗೆ ಮೇಲಾಗಿರುವ, ಆ ಮತ್ತಸುಧಾರಣೆಯ ಸವಿಕಿಡಿದವರು 'ಇದು ನಾಮಮಾತ್ರ ಸುಧಾರಣೆ' ಎಂದರು. 'ಬ್ರಿಟಿಷರ ವೆದಡಳನದಿಂದಲ್ಲ' ಈಗಣ ಸುಧಾರಣೆಯ ದಳನದಿಂದ ಭಾರತವಾಸಿಯರು ದಡಳಾಗುತ್ತಾರೆ' ಎಂದು ಗಾಂಧಿಜೀ ಎಂದರು. ಬ್ಲಾವಟ್ಸ್ಕಿಯವರು ಸೂಚಿಸಿದ ಚಿಕಿತ್ಸೆಯನ್ನು ಅವರ ಶಿಷ್ಯವರ್ಗವೆನ್ನುನವರಲ್ಲೇ ಎಸೆಪ್ಟೀ ನುಂದಿ ಅಂಗೀಕರಿಸಲಿಲ್ಲ' ಇಪ್ಪತ್ತು ವರ್ಷ, ಅವರು ಒಂದೇ (ನವನೆ, ಚಿಕಿತ್ಸಾಲಯ ತೆರೆದೇ ಧರ್ಮಾರ್ಥ ಚಿಕಿತ್ಸೆಯನ್ನು ಭಾಷಣ ಗ್ರಂಥಗಳ ರೂಪವಾಗಿ ಕೊಡುತ್ತಿಲಿದ್ದರು ಗಾಂಧಿಜಿಯನರು 'ಹಿಂದ್ ಸ್ವರಾಜ್ಯ'ವನ್ನು ೧೯೦೯ ರಲ್ಲಿ ಪ್ರಕಟಿಸಿದಾಗ, ಜನತೆಗೆ ರೀತಿ ಸೂಚಿಸಿದಾಗ, ಅವರನ್ನು 'ಪ್ರಿಯ ಸ್ನೇಹಿತ' ರೆಂದವರಲ್ಲಿಯೂ ಎಷ್ಟೋ ನುಂದಿ, (ಅನರೂ ಯಾರೆಂದು ಆ ಗ್ರಂಥದಲ್ಲಿ ಸೂಚಿಸಲಾಗಿದೆ, ಗ್ರಂಥಕರ್ತನನ್ನು 'ಹುಚ್ಚ'ನೆಂದೇ ಕರೆದುದಿಲ್ಲವೆ?

೧೯೦೯ರಲ್ಲಿ ಕಡಿಕನು ಇನ್ನೂ ಮಿದ್ದು ಪಾನ ಮಾಡುತ್ತಲೇ ಇದ್ದನ ಪಾಶ್ಚಾತ್ಯ ಸುಧಾರಣೆಯ ಧಳಕು ಸೌರ್ವಾತ್ಯರಿಗೆ ಅಷ್ಟು ಮೋಹಕವಾಗಿಯೇ ಇತ್ತು ಮಹಾಯುದ್ಧ ಪುಟಿಯಿತು ಬ್ಲಾವಟ್ಸ್ಕಿಯನ್ನುನವರೂ ಗಾಂಧಿಜಿಯವರೂ ಹಿಂದೆ ನುಡಿದ ಭವಿಷ್ಯ ವಾಸ್ತ ನತೆ ಪ ಪ ಮಾ ಣ ವಾ ಯಿತು. ಯುದ್ಧಗಳ ಹೆಸರೇ ಇನ್ನು ಇರಬಾರದೆಂದು ಆಗ ಯುದ್ಧವಾದುದೆ! ಆದರೆ, ಅದೇ ಸುಧಾರಣೆ ಅಮಲು ಹತ್ತಿದವರೇ ಸರ್ವಾತ್ಮ ದ ಒನ್ನಂದದ ಒಕ್ಕಣೆ ಬರೆದವರಾದುದರಿಂದ, ಅದೂ ನರ್ಮಾಣಮಾಡಿಸಿದ ಭವಿಷ್ಯವು ಆ ಧದೇ ಆಗದೆ ನ ತ್ಪೈಧದಾದೀತು? ಶಾಂತಿ ನೈಕೇತನದ ಬೀಜವನ್ನು ಸೆಟ್ಟರಂತೆ ನೆಟ್ಟುದು ವಿಸೃಷ್ಟ

ನೋಟೀಸು

ಕೆನರಾ ಬೇಂಕ್ ಲಿಮಿಟೆಡ್, ಕಾರ್ಕಳ.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಲಿಂಕಿನಿಂದ ಜೀನ್ಯಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನಾಗಲೀ, ಅದರ ಬಡ್ಡಿಯ ನ್ನಾಗಲೀ ವ್ಯಾಪ್ತಿಗೆ ಕೊಡದೆ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸನು, ಅವರು ಇಲ್ಲವಾಗಿ, ಹುಡುಕಿಗೆ ಬಂದುದರಿಂದ ಕಾಣದ ಇದೇ ಬರುವ ತಾ 8 10-38ನೇ ಶನಿವಾರ ದಿನ ಮಧ್ಯಾಹ್ನ ಸಂಜೆ 12ಕ್ಕೆ ಸರಿಯಾಗಿ ಸದರಿ ಬೇಂಕ್ ಆಫೀಸಿನಲ್ಲಿ ಅವರು ಅಡವಿಟ್ಟ 'ನಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಏವೇಜನ್ನು ಬೇಂಕಿಗೆ ಸಲ್ಲುತಕ್ಕ ಸಾಲಗಳಿಗೆ ವಜಾ ಮಾಡೋಣಾದೀತು.

ಲೋ ನಂ	ಹೆಸರು	ಸಾಲದ ಮೊ	ಬಡ್ಡಿ
179/36	ಜಗನ್ನಾಥ ಮಯ್ಯಾ	ರೂ. 35/	
12/36 (ನಂ 2)	ಕೃಷ್ಣರಾವ್.ನಾಗಪ್ಪ	20/	

Office of the Bank Karkal 12-9-1938 } C. Manjunath Kamath Agent.

ಎಲ್ಲ ಧರ್ಮಶಾಸನಗಳಿಗೂ ಇದೇ ನೀತಿ ಸೂತ್ರ ಅನ್ವಯಿಸುವುದು ಹಾಗಾದರೆ ಮಾತ್ರ ಮಠಗಳು ಮತ್ತು ದೇವಾಲಯಗಳ ಪಾವಿತ್ರ್ಯ ಳ್ಳೇಕಗಳು ನಿರಸೇರುವವು.

ಮಠಗಳು

ಶ್ರೀ ಟಿ. ಎಸ್. ಎಸ್. ರಾಜನ್(ಮಂತ್ರಿ) ರವರ ಅಭಿಪ್ರಾಯಗಳು.

[ಮಂತ್ರಿಗಳು ಪ್ರಖ್ಯಾತವಾದ ಅಹೋಬಲ ಮಠವನ್ನು ನೋಡಲು ತೆರಳಿದರು. ದಾರಿಯಲ್ಲಿ ಅವರು ಬಡುಕಿದ್ದೇ ಕಷ್ಟವಾಯಿತು ಇರಲು ದಾಟಿದ್ದ ಕ್ಷಣವೇ ಸುತ್ತಲ ದಿನ್ಸಿಯಿಂದ ಏಂದೊಂದು ಉರುಳಿಬಿತ್ತು! ನಂರವು ವೈಪ್ಲ ಗಳಿಗೆ ದೊಡ್ಡ ಯಾತ್ರಾಸ್ಥಳ. ಸುತ್ತಲೂ ಕಾಡು. ಜತೆ ಹಳೆಯದಾಗಿದೆ]

ಇಲ್ಲಿಗೆ ಬೌರಿದ್ದರೆ ಚೆನ್ನಾಗುತಿತ್ತು. ನ್ನು ಮನೆತನದವರು ನೂರು ತಲಾಂತರ ಂದಲ್ಲೂ ಈ ಮಠದ ಸೇವೆ ಮಾಡಿದವರು ಂದೇ ಬಂದನು. ಅಹೋಬಲ ಎಂದರೆ ನ್ನು ಮೆಹಕ್ಕದ್ದೆಂದೇ ಭಾವಿಸಿದ್ದನು, ಇಲ್ಲಿ ೀವಾಲಯದ ಬದಲಾಗಿ ಕಾಡಾಗಿದೆ ಇದನ್ನು ಂಡರೆ ಹೇಳಕೂಡದನ್ನು ಹಾಳಿನಿಸುತ್ತದೆ

ಪುರಾತನ ಕಲೆಯು ಭಿನ್ನಭಿನ್ನವಾಗಿ ಿಸಿದ್ದು ಹೊಸಾಗಿ ಬಿದ್ದಿದೆ ವರತತ್ವವೆಲ್ಲಿ ಂದೊಣಗಿ ಹೋದುದರ ಲಕ್ಷಣವಿದು. ಂತಹ ಪರಿಮಾರ್ಥ ಜ್ಞಾನದ ಬಲದಿಂದ ಂತಹ ಮಠಗಳು ಕುಂಬಾಗಿದ್ದುವು! ಭಗ ಂತನಲ್ಲಿರುನ ವಿಶ್ವಾಸದ ಜೀವಂತ ನರ್ಮಾಣ ಳಾಗಿ ಅವು ಇದ್ದುವು

ಆದರೂ ದಾರಿದ್ರ್ಯ ದೈನತೆಗಳ ಭಾರ ಲ್ಲಿ ಹಿಂದುಗಳು ನುರಿದುಬಿದ್ದಿರುನರಾದರೂ ಂದೂಮತವು ಖಂಡಿತವಾಗಿಯೂ ಬಾಳು ದು. ಏಕೆಂದರೆ, ಹಿಂದುಗಳಿ೦ ನಲ್ಲಿ ಭಕ್ತಿ ರ್ಮಗಳೂ ಇರುವುವು

ಸಭ್ಯತೆಯ ಮಠವನ್ನ ಹೀಗೆ ಹಾಳುಗೆಡಲು ಡಬಾರದಿತ್ತು ಹೆತ್ತ ತಾಯಿಯಿದು. ಇಲ್ಲಿಂ ಲೇ ಎಲ್ಲ ಬಲವು ತುಂಬಿದುದು

ಆಗಾಗಲಾದರೂ ಶಿಲ್ಪಿಗಳ ನುರದ ನ್ಹಿನುಗಳು ಬಂದಿದ್ದರೆ, ಇದೆಲ್ಲ ಹೀಗಾಗು ಕ್ಕೇ! ಈಗಲೂ ನುರಕ್ಕೆ ತುಂಬ ಅವಾಯ ದ್ದೇ ಇದೆಯಲ್ಲವೆ?

ನುರದ ಆಯಾವು ಇಲ್ಲಿ ದ ನುಂಟಾಗಿ ಪ್ಪು, ಹಾಗೆಂದು ನ ಬನ್ನೆ ಹಾಳುಗೆಡಹು ದೆ! ಹಿಂದಣ ರೀತಿ ಈಗ ನುರ್ನು ೀರ್ದೋದ್ಧಾರ ನುಡುವರೆ ಹತ್ತ ಸ್ಸುವಿ ಳೆ ಆಯವು ಆಯುಸ್ಸೂ ಸಾಕಾಗದು

ಸರಕಾರವೇನೆನ್ನುವುದು?

ಜನತೆಗಾಗಿ ಉಂಟಾದ ಈ ಮಠಗಳ ಾಗ್ರತೆಯನ್ನು ಸರಕಾರವು ನೋಡಿಕೊಳ್ಳುವ ತ್ತಿಗಿದೆ ಜನರ ಸಾಮಾನ್ಯ ಜೀವನದ ಸೌಕರ್ಯ ಳನ್ನು ಹೇಗೋ ಹಾಗೆಯೇ ಧಾರ್ಮಿಕ ಜೀ ನದ ಸೌಕರ್ಯಗಳನ್ನೂ ಸರಕಾರವು ಕಾಪಾಡ ೀಕಲ್ಲವೆ?

ವರಕೀಯರ ಅರಸುತನದಲ್ಲಿ, ಜನರ ರ್ಮದ ವಿಷಯ ಕೈಯಿಕ್ಕುವುದು ಸರಿಯೆನಿ ಲಿಲ್ಲ, ಈಗ ಜನರದೇ ಆಗಿರುವ ಸರಕಾರವು ನರ ಹಕ್ಕುಗಳನ್ನು ಉಳಿಸಿಕೊಡದಿದ್ದರೆ ೀಗಾಗುವುದು?

ವ ಠಗಳ ಸ್ವಾಮಿಗಳ ಅಧಿಕಾರ, ಮುತ್ತ ಧಿಕಾರಗಳನ್ನು ಸರಕಾರವು ವಿಚಾರಿಸ ತ್ತಿಲ್ಲ ುರದ ಆಡಳಿತವು ಮಾತ್ರ ಪರಿಯಾಗಿಲ್ಲದಿರು ಲ್ಲಿ ಅದನ್ನು ಅಗತ್ಯನಾಗಿಯೂ ಸರಿವಡಿಸು ತ್ತಿದು ಸರಕಾರದ ಮುಖ್ಯ ಕರ್ತವ್ಯಗಳಲ್ಲಿ ಂದಾಗಿದೆ

ಮಠಗಳ ಸ್ಥಿತಿ ವಿದ್ಯುನ್ಮಾನಗಳು. ಕತ್ತಲು ುಳ್ಳ ಗಲಿಬಿಲಿಗೊಂದಿವೆ. ಮಠಗಳು ಡೆಸಬೇಕಾದುದನ್ನು ನಡೆಸಲು ಹಿಂತೆಗೆದಲ್ಲಿ ರಕಾರವು ಅದು ನಡೆಯುವಂತೆ ಮಾಡಬೇಕಾ ದೆ.

ಮಠಗಳ ಹಣದಲ್ಲಿ ಒಂದೇ ಕಾಸನ್ನಾದರೂ ರಕಾರವು 'ಹಾಳುಮಾಡದು. ಮಠಗಳ ಂತಕಾರ್ಯಗಳಿಗೇ ಅದನ್ನು ಖರ್ಚುಮಾಡುವುದು. ಇದೆಲ್ಲ ನಮ್ಮದು, ನನಗೆ ಬೇಕಾದಂತೆ ನಾವು ಡೆಯುತ್ತೇವೆ ಎಂಬ ಧಿಪತಿಗಳು ಸಲ್ಲದು

ಕಾರ್ಕಳ ಪ.ಪಂ. ವ್ಯಾಪ್ತಿಯಲ್ಲಿ ಬರುವ ಸಂತೆಗಳ ಬಗ್ಗೆ ಮಾಹಿತಿ

ಸಂ.	ದಿನ	ಶುಕ್ಲ	ಕೃಷ್ಣ	ಸಂತೆ	ನಕ್ಷತ್ರ	ಸಂತೆಗಳ
17	ಶನಿ	೨೨	೦೭	ನಲ್ಲಗೆರಾ	೨೬॥	೧
18	ರವಿ	೨೩	೦೮	ಶಿವಪ್ಪಾಡಿ	೨೩॥	೨
19	ಸೋಮ	೨೪	೦೯	ಪುಲವರ್ಕ	೧೯।	೩
20	ಮಂಜ	೨೫	೧೦	ಪುಷ್ಯಾ	೦೫॥	೪
21	ಬುಧ	೨೬	೧೧	ಆಶ್ಲೇಷಾ	೧೨	೫
22	ಗುರು	೨೭	೩೦॥	ಮಘಾ	೧೮	೬
23	ಶುಕ್ರ	೨೮	೪೮॥	ಹುಬ್ಬಾ	೨೫॥	೭

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾಭ್ಯಾಸಕ್ಕೆ ಕಾವಾದುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಮಕ್ಕೆ ಶಿಳತಗಳಿಗೂ ಅಮೃತ. ಬೆಲೆ: 0–4–0, 0–2–0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0–4–

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ.
ಬೆಲೆ: 0-8-0, 0-4-0

ಸುಕುಮಾರತೈಲ

ಬಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿಕ ಮುಂತಾದ ಸಮಸ್ತ ನೇತ್ರ ತಿರೋವ್ಯಾಧಿಗಳಿಗೂ ಸಂಜೀವನ. ಬೆಲೆ: 1–0–0

ಪ್ರೊಪ್ರೈಟರ್:
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

THE PIE-MONEY BANK LTD.

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars–K. R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇನರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಕೆಂಗಸರ ಆಕರ್ಷಯಗುತ್ತದೆ. ಬಹಳ ಬಡತನದಲಿ ಶೀಘ್ರ ಮಕ್ಕಳಾಗುವುದರಿಂದ ಮಾಬಾಸಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರವಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದ ಸುಲಭವಾಗುವ ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ಕದಗೆಂದಕ್ಕೆಏನು ಮಾಡಿದರೂ ಸುಖವಾಗುವುದಿಲ್ಲ. ಬೆಲೆಯೂ ಪೂರಾ ಒಂದಾರವರಿಗೆ ಔಷಧ ಬೇಡಾ. ಮುಟ್ಟು ಸರಿಯಿಲ್ಲವೆಂದು ಡಾ. ವೈದ್ಯ ಎಲ್. ಬಿ. ಎಸ್. ಕಳಿಸಿದಾಗಿನಿಂದ, ಇಂದೇ ಈ ಚೂರ್ಣವಿಂದ ಧೃಢ ಕರದ ಅಂಶಯವು ಆಗದು. ಗರ್ಭಧಾರಣೆಯೂ ಆಗುವುದಿಲ್ಲ. ಪೂರಾ ಗುಣಕಾರಿ ಡಬ್ಬಿಯ ಕ್ರಯ ರೂ. ೨½–೪ ಪಿ. ಪಿ. ಆಗಿ ಕ.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ವಿರಾಜಪೇಟೆ, (S. U.C.)

ಡೋಂಗರೆ'ಜ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ತೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—14—0	—
,, ದುಯಂ ,, ,,	1—12—0	—
,, ಅವ್ವಲ್ ಸುಗ್ಗಿ ,,	1—10—0	—
,, ದುಯಂ ,, ,,	1—9—0	—
ಅಕ್ಕಿ ಅವ್ವಲ್ ಗುಡ್ಡು ,,	4—11 0	—
,, ದುಯಂ ,, ,,	4—7—0	—
,, ಆವ್ವಲ್ ಸುಗ್ಗಿ ,,	4—4—0	—
,, ದುಯಂ ,, ,,	4—0—0	—
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	42—0—0
,, ಸಿಪ್ಪೆ ಇದ್ದದು ,,	37—0—0	45—0—0
ಕೊಬ್ಬರಿ ಆಫೀಸು ಖಂಡಿಗೆ	46—0—0	47—0—0
,, ದರ್ಬದಸಂದಿ ,,	—	—
ತೆಂಗಿನ ಎಣ್ಣೆ ಮಣಕ್ಕೆ	3—8—0	—
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—4—0	4—0—0
ಗೇರುಬೀಜ ಮುಡಿಗೆ	4—5—0	4—6—0
ಕಬ್ಬಿನ ಬೆಲ್ಲ ಖಂಡಿಗೆ	50—0—0	55—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	16—4—0	18—0—0

ಮದನಕಾಮೇಶ್ವರ ಲೇಹ.



ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20-ತೊಲೆಗಳ ಡಬ್ಬಿ ರೂ. 1–4–0 (ವಿ.ಪಿ.ಖರ್ಚು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೆಪಿ.
P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೊ
ಮತ್ತು
ಬ್ರಿಲ್ಲೆಂಟಾನ್

ಉಪಯೋಗಿಸಿರಿ.

ಕೆ. ವೆಂಕಟೇಶ ಖಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಹಿಂಸೆಯು ಮನುಷ್ಯನ ಯಶಸ್ಸಿಗುಣವಲ್ಲ

ಪ್ರಯತ್ನಪಟ್ಟರೆ

ಮನುಷ್ಯನು ಅಹಿಂಸೆಯ ಪ್ರತಿಮೂರ್ತಿಯಾಗಬಹುದು

ಮನುಷ್ಯರು ಮನುಷ್ಯರಾಗಿರುವ ತನಕ ಪ್ರಪಂಚದ ಯುದ್ಧಸಂಗ್ರಾಮಗಳನ್ನು ತಡೆಯುವುದು ಯಾರಿಗೂ ಸಾಧ್ಯವಿಲ್ಲ. ಯಾಕಂದರೆ ಯುದ್ಧ ಸಂಗ್ರಾಮಗಳ ಮೂಲವಾಗಿರುವ ಹಿಂಸಾಭಾವವು ಅವನ ಹುಟ್ಟುಗುಣವಾಗಿರುವುದು. ಮನುಷ್ಯನು ತನ್ನ ಅಸ್ತಿತ್ವವನ್ನೂ ವೆಚ್ಚವನ್ನೂ ಕಾಪಾಡಿಕೊಳ್ಳಬೇಕಾದರೆ ಪರಸ್ಪರ ಹೋರಾಟವು ನಡೆಯಲೇಬೇಕು ಹಿಂಸೆಯು ಮನುಷ್ಯನ ರಕ್ತದಲ್ಲಿ ಸಮರಸವಾಗಿ ಕೂಡಿದೆ ಎಂದು ಸುಶಿಕ್ಷಿತರೂ ನಾಗರಿಕರೂ ಎಂದೆನಿಸಿಕೊಳ್ಳುವವರು ಕೂಡ ಹೇಳುತ್ತಿರುವುದನ್ನು ನಾವು ಕೇಳುತ್ತೇವೆ

ಆದರೆ ಇದು ಸರಿಯಲ್ಲ

ಆದರೆ ಅವರು ಹೀಗನ್ನುತ್ತಿರುವುದು ಮಾತ್ರ ಸರಿಯಾಗಿರುವುದಿಲ್ಲ ರಕ್ತದ ಭಾಯೆಯನ್ನು ಕೂಡ ಕಾಣದ ಜನರು ಪ್ರಪಂಚದಲ್ಲಿ ಇರುತ್ತಾರೆ. ಪ್ರಪಂಚದ ಶಾಂತಿಯನ್ನೂ ನೆಮ್ಮದಿಯನ್ನೂ ಭಂಗಮಾಡುವ ಯಾವ ಹಿಂಸಾ ಪ್ರವೃತ್ತಿ ಇದೆಯೋ ಅದನ್ನು ಸಮೂಲ ನಾಶಮಾಡಿಕೊಂಡು ಭೂಲೋಕದಲ್ಲಿ ಶಾಂತಿಯ ಸ್ವರ್ಗಸುಖವನ್ನು ಅನುಭವಿಸುವ ಮನುಷ್ಯ ಜಾತಿಗಳು ಇರುತ್ತವೆ ಅವುಗಳನ್ನು ನಾವು ಅನಾಗರಿಕವೆಂದು ಕರೆಯಬಹುದಾದರೂ, ಅವು ನಮಗಿಂತ ನಾಗರಿಕತೆಯಲ್ಲಿ ಎಷ್ಟೋ ಮುಂದಾಗಿರುವವು.

ಪಶುತ್ವವನ್ನು ಬಿಟ್ಟು ಮಾನುಷ್ಯನು ಮನುಷ್ಯತ್ವವನ್ನು ಸಂಪಾದಿಸಿದರೆಯೇ ಅವನು ವಾಸ್ತವವಾಗಿ ಮನುಷ್ಯರೆಂದೆನಿಸಿಕೊಳ್ಳುತ್ತಾನೆ ಹಿಂಸೆಯು ಸತ್ತುಗಳಲ್ಲಿ ತೋರಿಬರುವ ಗುಣ ಅದನ್ನು ಬಿಟ್ಟಾಗ ಮನುಷ್ಯನು ನಾಗರಿಕ ಸಭ್ಯ, ಸುಸಂಸ್ಕೃತ ಎನ್ನಿಸಿಕೊಳ್ಳುತ್ತಾನೆ ಹಾಗಾದರೆ ಅಹಿಂಸೆಯು ಪ್ರತಿಮೂರ್ತಿಗಳಾಗಿರುವ ಮನುಷ್ಯಜಾತಿಗಳು ನಾಗರಿಕವಲ್ಲದಿದ್ದರೆ, ಮತ್ತೇನಾಗಬಹುದು?

ಆರಣ್ಯಕ ಮತ್ತು ಜೂನಿ

ವಾಶ್ಚಾತ್ಯ/ಪಾಶ್ಚಾತ್ಯರ ಬೆಳಕು ಹರಿಯದ ಇನ್ನೂ ಕತ್ತಲೆಯಲ್ಲಿ ಇರುವ ನ್ಯೂಗಿನಿಯ ಪರ್ವತಪ್ರಾಂತ್ಯಗಳಲ್ಲಿ 'ಆರಣೇಶ' ಮತ್ತು 'ಜೂನಿ ಎಂಬ ಎರಡು ಮನುಷ್ಯಜಾತಿಗಳು ವಾಸವಾಗಿವೆ ಈ ಜಾತಿಗಳು ಅಹಿಂಸೆಯ ಪ್ರತಿಪಾದಕರಾಗಿರುವುದರಿಂದ ಅದರೂ ಅವನ್ನು ಪ್ರಸ್ತುತ ನಾಗರಿಕವೆಂದು ಜನರು ಕರೆಯುತ್ತಿದ್ದಾರೆ. ಇದು ಮನುಷ್ಯ ಬುದ್ಧಿಯ ಒಂದು ಅದ್ಭುತವಾಗಿದೆ

ಈ ಎರಡು ಜಾತಿಗಳು ಯುದ್ಧ—ಸಂಗ್ರಾಮ ಎಂಬ ಶಬ್ದಗಳನ್ನು ಕೇಳಿಯೇ ಇಲ್ಲ ಈ ಜಾತಿಗಳು ಪರಸ್ಪರ ಸಹಕಾರದ ಕೂಟಗಳಂತೆ ಇರುತ್ತವೆ ಇವುಗಳ ಸಖ್ಯ ಜೀವನದ ಸತ್ಯಕತೆಗಳನ್ನು ಕೇಳಿ ನಾವೂ ಒಂದೊಂದು ಬುದ್ಧಿಯ ಪಾಠವನ್ನು ಕಲಿಯಬಹುದಾಗಿದೆ.

ಜೀವನದ ವ್ಯಾಖ್ಯೆ

ಈ ಜಾತಿಗಳು ತಮ್ಮ ಜೀವನದ ವ್ಯಾಖ್ಯೆಯನ್ನು ಹೀಗೆ ಮಾಡುತ್ತವೆ ಒಬ್ಬನು ಸಾಹಸಿ ಅಥವಾ ಧೈರ್ಯಶಾಲಿ ಎನ್ನಿಸಿಕೊಳ್ಳಬೇಕಾದರೆ ಇನ್ನೊಬ್ಬನೊಡನೆ ಹೋರಾಡಿಕೊಲ್ಲಬೇಕಾದ ಅಗತ್ಯವು ಇರುವುದಿಲ್ಲ ಕೊಲೆಗಡುಕರು ತಿರಸ್ಕಾರ ತಾತ್ಸಾರಗಳಿಗೆ ಪಾತ್ರರಾಗಿದ್ದಾರೆ ಕೊಲೆಗಡುಕರಿಗೂ ಯುದ್ಧದಲ್ಲಿ ಒಬ್ಬರನ್ನೊಬ್ಬರು ಕೊಲ್ಲುವವರಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ

ಹಿಂಸೆಯನ್ನು ಪರೀಕ್ಷಿಸಿ ನೋಡಿ, ಅದು ಪಶುಗುಣವೆಂದು ತಿಳಿದೇ ಅರಪೇಕ್ಷಮತ್ತ ಜೂನಿ ಜಾತಿಗಳು ಹಿಂಸೆಯಿಂದ ದೂರ ಸಂದು ನಿಂತಿವೆ ಸ್ವಭಾವದಿಂದ ಮನುಷ್ಯರು ಒಬ್ಬರ ಸ್ನೊಬ್ಬರು ರಕ್ತನನ್ನು ಇಚ್ಛಿಸುವುದಿಲ್ಲ ಎಂದು ಆಜಾತಿಗಳು ತಿಳಿದಿವೆ

ಅಹಿಂಸಾ ಪರಮೋಧರ್ಮ

ಆದ್ದರಿಂದ ಭಾರತೀಯರಂತೆ ನ್ಯೂಗಿನಿಯದಲ್ಲಿ ನೆಲಸಿರುವ ಈ ಜಾತಿಗಳೂ 'ಅಹಿಂಸಾ ಪರಮೋಧರ್ಮ' ಎನ್ನುತ್ತವೆ. ಹಿಂದುಳಿದ ಜಾತಿಗಳಲ್ಲಿ ಈ ಉಚ್ಚಸ್ಥ ಭಾವನೆಯ ವರಸುನಿಕಾಸವಾಗಿರುವುದು ಒಂದು ಆಶ್ಚರ್ಯದ ಸಂಗತಿಯಾಗಿದೆ ಈ ಜಾತಿಗಳಲ್ಲಿ ಈ ಭಾವನೆಯು ಹೇಗೆ ಬಂದಿತು ಸ್ವಾರ್ಥ ಪರಾರ್ಥಗಳೊಳಗೆ ಸಂಘರ್ಷವಾಗುವುದಿದ್ದಾಗ ಇವು ಯುದ್ಧ ಸಂಗ್ರಾಮಗಳಿಂದ ಹೇಗೆ ಬದ್ದು ಕಿಕೊಂಡವು, ಎಂಬುದು ತುಂಬ ಮನೋರಂಜಕ ಕತೆಯಾಗಿದೆ.

ತಪ್ಪುಗ್ರಹಿಕೆ.

ಹುಟ್ಟಿನಿಂದಾರಭ್ಯ ಹಿಂಸೆಯೇ ಮನುಷ್ಯರಲ್ಲಿ ಕಂಡುಬರುತ್ತದೆನ್ನುವುದು ತಪ್ಪುಗ್ರಹಿಕೆಯಾಗಿದೆ. ಹಾಗಿದ್ದರೆ ಮನುಷ್ಯನಿಗೂ ಪಶುವಿಗೂ ಯಾವ ವ್ಯತ್ಯಾಸವೂ ಇದ್ದಂತಾಗುವುದಿಲ್ಲ.

ಕೆಲವರು ಹೀಗೆ ಹೇಳುತ್ತಾರೆ ಸಣ್ಣ ಸಣ್ಣ ಮಕ್ಕಳು ಹಿಂಸಾವರವಾಗಿವೆ ಆದ ಮನುಷ್ಯರ ಹುಟ್ಟು ಗುಣ ಹುಟ್ಟುಗುಣದ ಮೇಲೆ ನಿಯಂತ್ರಣವನ್ನಿಡಬಹುದು ಅದರೆ ಅದನ್ನು ಸಂಪೂರ್ಣ ನಷ್ಟಮಾಡಲಿಕ್ಕೆ ಹೋದರೆ ಮನುಷ್ಯನ ಉನ್ನತಿಯೇ ಅಗಲಿಕ್ಕಿಲ್ಲ ಬಲೋದ್ಬೋಧನವು ಮನುಷ್ಯನ ಸಕಲ ಶಕ್ತಿಗಳನ್ನು ಕುಂದಿಸುತ್ತದೆ ಅವನು ಸಹಜದಾರಿಯನ್ನು ಬಿಟ್ಟು ಅಡ್ಡದಾರಿ ಹಿಡಿಯುವಂತೆ ಮಾಡುತ್ತದೆ

ಶುದ್ಧ ಭ್ರಮೆ

ಪರಂತು ಇದು ಭ್ರಮಾತ್ಮಕ ಮಾತು ಎಂಬಂತೆ ನವಿಗೆ ತೋರುವುದಿಲ್ಲವೆ? ಹಿಂಸೆಯು ಮನುಷ್ಯನ ಹುಟ್ಟುಗುಣವಾಗಿದ್ದರೆ, ಅದನ್ನು ನಷ್ಟಮಾಡಿದುದರಿಂದ ಮನುಷ್ಯಜಾತಿಗೆ ಕೇಡಿರುತ್ತಿದ್ದರೆ ನ್ಯೂಗಿನಿಯ ಆಜಾತಿಗಳು ಎಂದೇ ನಾಮಾವಶೇಷವಾಗಬೇಕಾಗಿದ್ದುವು ಅವು ಹಾಗೆ ಆಗಿಲ್ಲ ಅವು ಮನುಕಿತ ಉತ್ತಮ ಜೀವನವನ್ನು ನಡೆಯಿಸಿಕೊಂಡು ಬರುತ್ತಲಿವೆ ಆ ಜಾತಿಗಳಲ್ಲಿ ನೈತಿಕತ ಅಥವಾ ಸಾಮಾಜಿಕ ಯಾವ ತರದ ಲೋಪದೋಷಗಳೂ ಕಂಡುಬರುವುದಿಲ್ಲ

ಬಾಲ್ಯ ಶಿಕ್ಷಣ

ಬಾಲ್ಯ ಶಿಕ್ಷಣವು ಯಾವ ಪ್ರಕಾರ ಇರುತ್ತದೋ ಆ ವ್ಯಕ್ತಿಯ ಮುನುಷ್ಯ ಸ್ವಭಾವದಲ್ಲಿ ಪರಿವರ್ತನೆಗೂ ಪರಿವರ್ಧನೆಗೂ ಅಗುತ್ತವೆ ನ್ಯೂಗಿನಿಯದ ಆ ಜಾತಿಗಳು ತಮ್ಮ ಮಕ್ಕಳಿಗೆ ಬಾಲ್ಯದಿಂದ ಇತರರ ಹಕ್ಕು ಅಧಿಕಾರ ಸ್ಥಾನ ಮಾನಗಳನ್ನು ಆದರಿಸಲಿಕ್ಕೆ ಕಲಿಸಿಕೊಡುತ್ತವೆ ಮಕ್ಕಳು ಕ್ರೋಧದಿಂದ ತುಂಬಿ ಜಗಳವನ್ನಾರಂಭಿಸುವಾಗ ಅವುಗಳನ್ನು ಪ್ರಕೃತಿಸ್ಥಿತಿಗೆ ಇರಿಸಿಬಿಡುವುದು ಕೋಪವು ಪೂರ್ಣ ಇಳಿದು ಹೋಗುವ ತನಕ ಆ ಮಕ್ಕಳು ಪ್ರತ್ಯೇಕವಾಗಿಯೇ ಇರುವಂತೆ ಮಾಡಿಸಿಟ್ಟಿನ ಭರದಲ್ಲಿ ಮಕ್ಕಳು ನೆಲದ ಮೇಲೆ ಹೊರಳಾಡಬಹುದು, ತಮ್ಮ ಮೈ-ಬಟ್ಟೆಗಳನ್ನು ಕೆಸರುಮಾಡಿಕೊಳ್ಳಬಹುದು ಅದರಿಂದ ಆ ಮಕ್ಕಳಿಗೇ ಕಷ್ಟ ನಷ್ಟಗಳಾಗುವವಲ್ಲ ಇತರರಿಗೇನೂ ಇಲ್ಲ ಅಲ್ಲದೆ ಮಕ್ಕಳು ಹಾಗಾಗಿರುವದನ್ನು ಸಮಾಜವು ತಿರಸ್ಕಾರ ದೃಷ್ಟಿಯಿಂದ ಕಾಣುತ್ತದೆ ಮಕ್ಕಳ ಸಂಗಾತಿಗಳು ಕೂಡ ಅಂಥ ಮಕ್ಕಳನ್ನು ದೂರವಿರಿಸುತ್ತವೆ ಆದ್ದರಿಂದ ಯಾವ ಮಗುವೂ ಎಂಥ ಸಂದರ್ಭದಲ್ಲಿಯೂ ಸಿಟ್ಟಾಗುವುದಿಲ್ಲ. ಕ್ರೋಧವೇ ಜಗಳಕ್ಕೆ ಮೂಲವಾಗಿರುವುದು. ಕ್ರೋಧವಿಲ್ಲದಿದ್ದ ಮೇಲೆ ಲಡಾಯಿ ಜಗಳಗಳಾಗಲೀ, ಯುದ್ಧ ಸಂಗ್ರಾಮಗಳಾಗಲೀ ಆಗುವುದು ಹೇಗೆ.

ಹಿಂಸೆಯು ದುರ್ಬಲರ ಉಪಾಯ

ಈ ಜಾತಿಗಳು ಹಿಂಸೆಯನ್ನು ಎಳ್ಳಷ್ಟು ಮುಸ್ಸಿಸುವುದಿಲ್ಲ ತಮ್ಮನ್ನು ಧೈರ್ಯಶಾಲಿಗಳೂ ಸಾಹಸಿಗರೂ ಎಂದು ತಿಳಿಕೊಂಡಿರುವ ಈ ಜಾತಿಗಳು ಹಿಂಸೆಯನ್ನು ದುರ್ಬಲರ ಕಾರ್ಯಸಾಧನೆಯ ಉಪಾಯವೆಂದು ತಿಳಿಕೊಂಡಿದ್ದಾರೆ ಆದರ್ಶಪ್ರಜೆಯು ವಿನೀತ, ವಿನಮ್ರ ಮತ್ತು ಅಹಿಂಸೆಯ ಪ್ರತಿಮೂರ್ತಿಯಾಗಿರುತ್ತದೆಂಬುದು ಇವರ ಭಾವನೆಗಳಾಗಿದೆ

ಮಕ್ಕಳಿಗೆ ಶಿಸ್ತುಕ್ರಮಗಳನ್ನು ಕಲಿಸಲಿಕ್ಕೆ ಈ ಜಾತಿಗಳು ಹಿಂಸೆಯನ್ನು ಆಶ್ರಯಿಸುವುದಿಲ್ಲ ಮಕ್ಕಳು ಹಿಂಸಾ ಪ್ರವೃತ್ತವಾಗದಂತೆ ಹೆತ್ತವರು ಜಾಗ್ರತೆತೆಗೆದುಕೊಳ್ಳುತ್ತಾರೆ ಯಾವ ವಸ್ತುಗಳನ್ನು ಮಕ್ಕಳಿಗೆ ಕೊಡುವದರಿಂದ ಯಾವ ಹಾನಿಯೂ ಇರುವರಿಲ್ಲವೋ ಅಂಥದ್ದನ್ನೆಲ್ಲ ಮಕ್ಕಳಿಗೆ ಕೊಟ್ಟು ಅವರು ಸದಾಕಾಲ ಸಂತೃಪ್ತರೂ ಸಂತೃಪ್ತರೂ ಗಿರುವಂತೆ ಮಾಡುತ್ತಾರೆ ಹಾಸಿಯನ್ನುಂಟುಮಾಡುವ ವಸ್ತು ಒಡವೆಗಳು ದೃಷ್ಟಿಮಾತ್ರದ ಹಾಗೆ ನೋಡಿಕೊಳ್ಳುತ್ತಾರೆ ಮಕ್ಕಳ ಸಿಟ್ಟನ್ನು ಅಲಕ್ಷಿಸುವುದರಿಂದ, ಸಿಟ್ಟು ದುರ್ಬಲತೆಯು ಲಕ್ಷಣವೆಂದು ಹೇಳಿ ಕೊಡುತ್ತ ಇರುವುದರಿಂದ ಮಕ್ಕಳು ಸಿಟ್ಟು ಬರೊಡನೆ ಲಜ್ಜಿತರಾಗುತ್ತಾರೆ. ಸಮಾಜಕ್ಕ ಸೇರಿದವರ ವಕ್ಕಳ ಭಂಧು ಬಾಂಧವರೆಂದೂ ಮಕ್ಕಳನ್ನ ಪೀಡಿಸುವನರೆಂದೂ ಕಲಿಸಲಾಗುತ್ತದೆ ಹೀಗೆ ಬಾಲ್ಯ ಶಿಕ್ಷಣವು ನಡೆಯುವುದರಿಂದ ವಂದೆ ಆ ಮಕ್ಕಳು ಅಹಿಂಸೆಯ ಪ್ರತಿಮೂರ್ತಿಗಳಾಗಿ ಬಾಳುತ್ತಾರೆ

ಜೀವಸೋದ್ದೇಶ.

ಕಾವು ಬೆಳೆದು ಅಭಿವೃದ್ಧಿಗೆ ಬರಬೇಕೆಂಬುದು ಈ ಎರಡು ಜಾತಿಗಳ ಮಹತ್ವಾಕಾಂಕ್ಷೆಯಾಗಿರುವುದು. ಭೌತಿಕವಿಜ್ಞಾನಗಳಿಗಿಂತ ಪಾರಲೌಕಿಕ ಸಂಗತಿಗಳ ಕಡೆಗೆ ಜಾತಿಗಳ ಅಧಿಕ ಲಕ್ಷ್ಯವಿರುವುದು

ಜೂನಿಜಾತಿಯು ಜೀವನದ ಎಲ್ಲಾ ಅನುಕೂಲತೆಗಳನ್ನು ಪಡೆದು ಸಂಪನ್ನವಾಗಿರುವುದು, ಆದರೆ ಆರಪೇಕ್ಷಜಾತಿಯು ಬಹಳ ಬಡವಾಗಿದೆ. ಆದ್ದರಿಂದ ಈ ಎರಡು ಜಾತಿಗಳು ಹಿಂಸೆಯನ್ನು ಆಶ್ರಯಿಸಿದರೆ, ತಮ್ಮ ಕಾಲ ಮೇಲೆ ಅವು ಕೊಡಲಿ ಹೆರಡಕೊಂಡಂತಾಗುತ್ತದೆ. ಜೂನಿಜಾತಿಯು ಹಿಂಸೆಗೆ ಸ್ವಾನಕೊಟ್ಟರೆ ಅದರ ಸಂಪತ್ತೆಲ್ಲ ಹೋಗಿ ಅದು ಅವಸತಿಯೆನ್ನು ಹೊಂದುವೇ ಆಗುವುದು ಮತ್ತೆ ಅರಪೇಕ್ಷಜಾತಿಯು ಹಿಂಸೆಗೆ ತೊಡಗಿದರೆ ಅದರ ಉನ್ನತಿಯಾಗಲಿಕ್ಕೆ ಅವಕಾಶವೇ ಇರುವುದಿಲ್ಲ

ಆದ್ದರಿಂದ ತಮ್ಮ ಉತ್ತನ್ನು ಸ್ಥಿತಿಗತಿಗಳನ್ನು ಕಾದುಕೊಳ್ಳಲಿಕ್ಕಾಗಲೀ, ಉತ್ತಮ ಸ್ಥಿತಿಗತಿಗಳನ್ನು ಪಡೆಯಲಿಕ್ಕಾಗಲೀ ವ್ಯಕ್ತಿ ಮತ್ತು ಜಾತಿಗಳು ಅಹಿಂಸೆಯನ್ನೇ ತಮ್ಮ ಕಾರ್ಯ ಸಾಧನೆಯ ಉಪಾಯವನ್ನಾಗಿಟ್ಟುಕೊಳ್ಳಬೇಕೆಂಬುದು ಈ ಲೇಖನದಿಂದ ಸ್ಪಷ್ಟವಾಗುತ್ತದೆ

ಮಾತಾಡುವ ಅಂಕಸಂಖ್ಯೆಗಳು

ರೋಮ್: ನಂತ್ರಗಳ ಆಧೀನದಿಂದ ೧೯ನೆಯ ಯೆಹೂದಿ ಕಾರ್ಯೋಗಸ್ಥರನ್ನು ಸಿವೃತ್ತಪಡಿಸಲಾಗಿದೆ

ಮೆಕ್ಸಿಕೊ: ಇಲ್ಲಿನ ಎಣ್ಣೆಕಂಪೆನಿಗಳನ್ನು ಸರಕಾರವೇ ನೆಲೆದುಕೊಂಡಿದೆಯಷ್ಟೆ. ಹಿಂದೆ ಇವನ್ನು ನಡೆಸುತ್ತಿದ್ದ ಬ್ರಿಟಿಷ ಕಂಪೆನಿಗಳು ಇಮಿಲಿಯ ನವನುಗಳನ್ನ ಅಲ್ಲಿನ ಕೆಲಸಗಾರರಿಗೆ ಕೊಟ್ಟು ಬಿಡಬೇಕೆಂದೂ, ಅಲ್ಲಿಸಹ್ಯ ಕೋಟಿನ ತೀರ್ಮಾನವಾಗಿದೆ.

ವೆಲೆನ್ಸಿಯಾ: ಬ್ರಿಟಿಷರ ಒಂದು ಹಡಗದ ಮೇಲೆ ಫ್ರೆಂಕೋ ವಕ್ಷದ ವೈಮಾನಿಕರು ಸಿಡಿಗುಂಡು ಚೆಲ್ಲಿದರು ಹಡಗಕ್ಕೂ ಅದರಲ್ಲಿದ್ದ ಸರಕಿಗೂ ಬೆಂಕಿಹಿಡಿಯಿತು ಒಬ್ಬ ಕಲಾಸಿ ಸತ್ತನು.

ಬರ್ಗೊಸ್: ಫ್ರೆಂಕೋಪಕ್ಷವು ಸೆರೆಹಿಡಿದವರಲ್ಲಿ ಎಷ್ಟೋ ಮಂದಿ ಇಟಲಿಯಾನರೂ ಇರುವರು.

ಲಂಡನ್: ಹಿಂದಣ ರಷ್ಯದ ಝಾರರ ಸೋದರಿಯವನವರ ರಾಜವಂಶಿಕ ಮಕ್ಕಳು ಈಗ ಬ್ರಿಟಿಷರೆಂದು ರಿಜಸ್ಟರ ಮಾಡಿಕೊಂಡು ಬಾಳುವಂತಾಗಿದೆ

ಬಲೇರಿಯದ ರಾಜರು ಇಂಗ್ಲೆಂಡಿನ ಒಂದಿರುವನ ಸಂಸ್ಥಾನದ ಅಧಿಪತಿ

ಸಿಡ್ನೆ: ಇದ್ದಬಿದ್ದವಿಗಾರರ ಮಹಾ ಪುರ ಹಿಡಿದಿರುವರು ಸಂಬಳ ಸಾಲದ ಎಂಬುದೇ ಕಾರಣ

ಜಪಾನು: ಮಿಸಾ ಗಾರರ ಹಡ್ಡಯೆಂದು ಬೆಂಕಿಗೆ ಕುತ್ತಾದಿ ೫೦೦ ಜನರು ಮಡಿದಿರುವರು ೬೦೦ಕ್ಕೆ ವ ನೆಯಿಲ್ಲ

ಟೋಕಿಯೊ: ಜಪಾನಿನವರ ಅಂದಾಜನಂತೆ, ಆಗೋಸ್ತು ೨೭ರಿಂದ ಸೆಪ್ಟೆಂಬರು ೩ರೊಳಗೆ ಚೀನಿಯರಲ್ಲಿ ೨೫೦೦೦ ಸತ್ತಿರುವರಂತೆ

ಲಂಡನ್: ಉತ್ತರ ಸಮುದ್ರದಲ್ಲಿ, ಜರ್ಮನಿಗೆ ಉತ್ತರದಿಕ್ಕಿನಲ್ಲಿ, ಬ್ರಿಟಿಷ ನೌಕಾ ಸೈನ್ಯವು ಯುದ್ಧಾಭ್ಯಾಸ ಮಾಡುತ್ತಿರುವರು ವಾರ್ಷಿಕ ಸ್ಪರ್ಧೆಯ ಪ್ರದರ್ಶನ, ಅಷ್ಟೆ

ಶ್ರೀ ವಿಜಯಲಕ್ಷ್ಮಿಪಂಡಿತ ಇವರು ಮೊಕ್ಕೊಸ್ಲೊವಾಕಿಯದಿಂದ ನುರಿಳಿದ್ದು, ಇಲ್ಲಿನ ಸತ್ಕರ್ತರಿಗೆ ಇಂಡಿಯದ-ವಿಷಯವಾಗಿ ನಿಜಾಭಿಪ್ರಾಯಗಳನ್ನು ತಿಳಿಸಿರುವರು

ಮಿಯಾಮಿ: ಸ್ಪೆಯನದೇಶದ ಮಾಜಿ ಅರಸನ ಮಗ ಕೌಂಟ್ ಆಫ್ ಕಾಪಡೊಂಗಾ ಇವರು ರಕ್ಷಸ್ಸಾವವಾಗಿ ಇದೀ ಜೀವನವೆಲ್ಲ ಈ ದೇಗಕ್ಕೆ ಬಲಿಯಾಗಿದ್ದು ಈಗ ಸತ್ತರು. ಇವರು ಒಂದು ಮೋಟರು-ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದರು.



ಪ್ರಪಂಚವು ಕಲಿಯಬೇಕಾದ ಪಾಠ

ಕಳೆದ ಯುದ್ಧವು ನಡೆದು, ಬಾಸೆಲ್ ಒಪ್ಪಂದವಾಗಿ ೆಲ್ಲ ಮುಗಿದಂತಿತ್ತು. ಜಿ ಸಾಂಗ ಮಂಡಳ್ಳೂರು ಧ್ವನಿಯಾಯಿತು. ಜಿ ಗತ್ತಿನ ಎಲ್ಲಾ ಜನಾಂಗಗಳು ಶಾಂತಿಕ್ಷೇತ್ರಗಳಿಗೆ ಕಾರ್ಯನಿರ್ವಹಣೆಗಾಗಿ ನಿಯಮಗಳನ್ನು ಪ್ರ. ಆದರೆ ಜಗತ್ತಿನ ಶಾಂತಿಕ್ಷೇತ್ರದಲ್ಲಿ ಪ್ರಸಂಗಗಳು ಬಂದೊದಗಿದಾಗ ಎಲ್ಲರೂ ಮೌನವಾಗಿರು ಕಾಯುವವರಾದರು. ೪೦೦ ಮಿಲಿಯ ಜನರಿರುವ ಚೀನಾಕ್ಕೆ ೫೦ ಮಿಲಿಯ ಜನರಿರುವ ಜಪಾನಿ ಯರ ಅತಿಕ್ರಮವನ್ನು ತಡೆಯುವರೆ ಅಸಾಧ್ಯ ವಾಯಿತು. ಮಿಕ್ಕ ಪ್ರಭುತ್ವದ ಜನಾಂಗ ಗಳಿಗೆ ಚೀನಾದೇಶದ ಸಹಾಯಕ್ಕೆ ಹೋಗಲು ಅಸಾಧ್ಯವಾಗದೆ, ಯಾ ಬೇಡವಾಗಿದೆ. ಈಗ ಪ್ರಪಂಚಕ್ಕೆಲ್ಲವೆಕಿಯಾವು ಜರ್ಮನಿಯಿಂದ ಗದ ರಿಸಲಾಗುತ್ತದೆ. ಜರ್ಮನಿಯೊಡನೆ ಶಾಂತಿ ಇಂದಿರಲು ಆಸ್ಟ್ರಿಯಾವು ಶರಣಾಗೋಯಿತು.

ಝೆಕ್ಕೊಸ್ಲೊವೆಕಿಯಾದ ಪ್ರಕರಣದ ಕುರಿ ತೂ, ಸ್ಪೇಯಿನ್ ರಣರಂಗದಿಂದ ಬಹಿರ್ ಸೈ ನಿಕರನ್ನು ಹಿಂತೆಗೆಯುವ ಕುರಿತೂ ನಡೆವ ಮಾತುಕತ್ತೆ ಇತ್ಯಾದಿ ಸಂಧಾನ ವ್ಯವಹಾರವನ್ನು ನೋಡಿದರೆ, ಅವುಗಳು ಫಲದಾಯಕವಾಗುವ ವೆಂದು ಹೇಳಬರುವುದಿಲ್ಲ. ಹಿಂದೆ ಮೆಂಚ್ಯೂರಿ ಯಾದ ಕುರಿತು ಆದ ಅಮೇರಿಕಾದ ಪ್ರತಿ ಕೂಲಿಗಳಿಗೆ ವಿಧಿಯೊಪಿಯಾದ ಕುರಿತಾದ ಫ್ರಾನ್ಸು, ಬ್ರಿಟನುಗಳ ಪ್ರತಿಕೂಲಿಗಳಿಗೆ, ಸ್ಪೆ ಯಿನು ಆಸ್ಟ್ರಿಯಾ ಇತ್ಯಾದಿಗಳು ಕುರಿತಾದ ಪ್ರತಿ ಕೂಲಿಗಳು ಗಣ್ಯವಿಲ್ಲದೆನೆ ಬಿದ್ದುಹೋದವು ಈ ಜನಾಂಗಳೆಲ್ಲಾ ಬರಿ ಪ್ರತಿಕೂಲಿಯಲ್ಲಿ ಸಮಾಧಾನ ನಡುಗುವರಾದರು ಅವರು ಈ ಪ್ರತಿಕೂಲಿಗಳೊಂದಿಗೆ ಸಂಗ್ರಾಮಿಕ ಕಾರ್ಯ ಸಾಧನೆಯನ್ನು ಮಾಡುತ್ತಿದ್ದರೆ, ಆಗ ಏರೋಸ್ಪೇದ ಭಂಗವಾಗುತ್ತಿರುತ್ತಿದ್ದಿಲ್ಲ, ಆ ಸ್ಯಾಪಂಡದ ಶಾಂತಿಗೆ ಹಾನಿಬರುತ್ತಿದ್ದಿಲ್ಲಾ, ಈಗ ಪ್ರಸಂ ಗವು ಕಟ್ಟುಹೋಗಿರುವುದು

ಮಹಾತ್ಮಭುತ್ವದ ಜನಾಂಗಗಳ ಮೇ ಲಿನ ವರ್ತನೆಯಿಲ್ಲಿದುತ್ತಿದ್ದರೆ, ಜಗತ್ತಿನಲ್ಲಿ ಇರಬಹುದು ಕೊಲಾಹಲವೆ ಉಂಟಾಗುತ್ತಿರಲಿಲ್ಲ ಯುದ್ಧಮಾಡಲು ಆಗ ಸಿದ್ಧವಿಲ್ಲದ ಈ ಜನಾಂಗ ಗಳ ಈಗ ಯುದ್ಧಸನ್ನದ್ಧರಾಗಲು, ತಮ್ಮ ಶಕ್ತಿ ಯನ್ನು ವಿಂಗಿ ವ್ಯಯಿಸುತ್ತಿರುವರು, ದನಿಯು ತ್ತಿರುವರು ಪ್ರಜಾಸತ್ತಾತ್ಮಕ ಜನಾಂಗಗಳಾದ ಅಮೇರಿಕಾ ಬ್ರಿಟನು ಇತ್ಯಾದಿ ಜನಾಂಗಗಳ ಮೇಲಿನ ತರದ ಪ್ರಾಣತ್ಯಾಗಿ ನರ್ತನೆಯಿಂದ ಇಂದು ಅವರಿಗೆ ಸುಖವಿಲ್ಲದಾಗಿದೆ ಈಗ ಆ ರಾಷ್ಟ್ರಗಳ ಸರ್ವಶಕ್ತಿಯು ಹಣವು ಯುದ್ಧ ಸನ್ನಾಹತೆಯಲ್ಲಿ ವ್ಯಯಿಸಲಾಗುತ್ತಿದೆ ಈಗ ಆ ಜನಾಂಗ ಯುದ್ಧಾವ್ಯಾಸವನ್ನು ಮಾಡುತ್ತಾ ಶಾಂತಿಸಾಧಕರಾಗಿರುವರು ಆದರೆ ಅವರ ನಿರ್ಲಕ್ಷ್ಯದಿಂದ ಬೆಳೆದ ಸರ್ವಾಧಿಕಾರಿ ಹಿಟ್ಲರ್ ಮುಸಲೊನಿಯನ್ನು ಹದನುಮಾಡುವುದ ಈಗ ಸುಲಭವಾದ ಕೆಲಸವಲ್ಲ

ಜಪಾನ್ ವ್ಯವಹಾರದ ಕುರಿತು ಬಿಟಿಸನ ವರ್ತನೆ ಸರಿಯಾದುದೆಂದು ಹೇಳಬರುವುದಿಲ್ಲ ಅದು ಈಗಲೆ ರಷ್ಯ ಫ್ರಾನ್ಸು ಇತ್ಯಾದಿಗಳೊಡನೆ ಕೂಡಿ, ಮುಂದಿನ ಕಾರ್ಯಸಾಧನ ಮಾಡ ಬೇಕು

ಝೆಕ್ಕೊಸ್ಲೊವೆಕಿಯದಲ್ಲಿ ಸಂಧಾನ ವ್ಯವ ಹಾರಗಳು ನಡೆಯುತ್ತಿನ್ನೆ ಜರ್ಮನಿಯು ತನ್ನ ಗದಿನಾಡುಗಳಲ್ಲಿ ಅವಸರದ ಸಿದ್ಧತೆಗ ಳನ್ನು ಮಾಡುವುದನ್ನು ನೋಡಿದರೆ ಸಂಧಾನ ವ್ಯವಹಾರವು ಫಲದಾಯಕವಾಗದಿದ್ದರೆ, ಆಗ ಏರೋಸ್ಪದಲ್ಲಿ ಯುದ್ಧವು ಭೀಳುವುದು ಖಂಡಿ ತವೆಂದು ನಂಬಬೇಕಾಗಿದ್ದೆ. ತನ್ನ ಸತ್ಯ ವರೀ ಕ್ಷೆಯನ್ನು ಮಾಡಿಕೊಳ್ಳಲು ಜರ್ಮನಿಯು ಸಿದ್ಧವಿರುವಂತೆ ಕಾಣುತ್ತದೆ. ಲೋರ್ಡ್ ರನ್ಸಿ ಮೇನರ ಈ ಸಂಧಾನಯತ್ನಗಳು ಫಲದಾಯಕ ವಾಗುವೆವೆಂದು ನಂಬಿಕೆಯು ಜರ್ಮನಿಯಲ್ಲಿ ಇಲ್ಲದಿರುವುದರಿಂದಲೇ. ಜರ್ಮನಿಯು ತಕ್ಕರ ವರ್ತನೆಯುದಾಗರಬಹುದು. ಆದುದರಿಂದ ಝೆಕ್ಕೊಸ್ಲೊವೆಕಿಯಾದಲ್ಲಿ ಈಗ ನಡೆಯುತ್ತಿ ರುವ ಸಂಧಾನ ವ್ಯವಹಾರ ಎಲ್ಲಾ ನಿಷ್ಫಲವಾ ದರೆ, ಆಗ ಏರೋಸ್ಪದಲ್ಲಿ ಇನ್ನೊಂದು ಮಹಾ ಯುದ್ಧವು ಖಂಡಿತ.

ಪಾರ್ವಾಕ್ಯದಲ್ಲಿ, ಜಪಾನು ರಷ್ಯಾದೊ ಡನೆ ಒಂಭು ತರದ ಒಪ್ಪಂದವನ್ನು ಮಾಡಿ ತತ್ಕಾಲಿಕ ಉಪಶಮನ ಪಡೆದಿರುವುದು ನಿಜ. ಅದರಿಂದ ಅದಕ್ಕೆ ತನ್ನ ಸಂಪೂರ್ಣ ಶಕ್ತಿಯನ್ನು ಚೀನಾದಲ್ಲಿ ಉಪಯೋಗಿಸಲು ಸಾಧ್ಯವಾಗಿ ದ್ದರೂ, ಚೀನಾದಲ್ಲಿ ಜಪಾನಿಗೆ ಈಚೆಗೆ ಅಷ್ಟು ಮಹತ್ತರದ ವಿಜಯಗಳಾವವು ದೊರಕ ದುದು ಕಾಣಿಸುವುದಿಲ್ಲ. ಜಪಾನು ತನ್ನಲ್ಲಿ ಇರುವ ಸರ್ವಶ್ರೀಷ್ಠ ಬಲಗಳನ್ನು ಉಪಯೋ ಗಿಸಿದರೂ ಅದು ಚೀನಾದಲ್ಲಿ ವಿಜಯಯೋಗು ವುದೆಂದು ಹೇಳಬರುವುದಿಲ್ಲ, ಅಮೇರಿಕವು ಈಗ ಯುದ್ಧ ಸಿದ್ಧತಾ ಚಟುವಟಿಕೆಗಳನ್ನು ನಡೆಯಿಸುತ್ತದೆ ಬಹುಶಃ ಚೀನಿಯರ ಸಹಾಯಕ್ಕಾಗಿ ಪೌರ್ವಾತ್ಯದ ಯುದ್ಧರಂಗದಲ್ಲಿ ದುಮುಕುವ ಆಲೋಚನೆಯು ಅದಕ್ಕಿರುವುದ ರಿಂದಲೇ ಅದು ಹೀಗೆ ಮಾಡಿರಬಹುದು ಅಮೇರಿಕದ ಈ ಚಟುವಟಿಕೆಗಳಿಂದ ಜಪಾನು ಭಯಗ್ರಸ್ತವಾಗಿರುವುದು

ಓರಿಯಂಟ್'

ಚೀನಿ ಮತ್ತು ಹಿಂದೀ ಕೂಲಿಗಳ

'ಕಡಿಮೆ ಮಜೂರಿಗೆ ಗೇಯುವ ಚೀನಿ ಮತ್ತು ಹಿಂದೀ ಕೂಲಿಗಳು ನಮಗಿನ್ನು ಬೇಕಾ ಗಿಲ್ಲ' ಎಂದು ಸಿಲೋನಿನ ಡೆವೆಟೀಶನಿನ ಮುಂ ದಾಳುಗಳಾದ ಮಿಃ ಜಯತಿಲಕರು ಡೈಲಿ ಹೆರಾ ಲ್ಡ್ ಪತ್ರಿಕೆಯವರು ಸಂಧಿಸಿದಾಗ ಉದ್ಗಾರ ವೆತ್ತಿದರು ಸಿಲೋನಿನ ೬,೬೦೦೦೦೦ ಜನ ಸಂಖ್ಯೆಯಲ್ಲಿ ೪೦೦,೦೦೦ ಚೀನಿ ಮತ್ತು ಹಿಂದೀ ಕೆಲಸಗಾರರಂತೆ ಹೀಗಾಗಿ ಸಿಲೋನಿಗಳೇ ೫೦೦೦೦೦ ಮಂದಿ ನಿರುದ್ಯೋಗಿಗಳಾಗಿರುವ ರಂತೆ

ಝುಕ್ಕರ ದೃಢ ಶಾಂತಿ

ಪ್ರೆಸಿಡೆಂಟ್ ಬೇನೆಶ್ ಇವರ ಭಾಷಣದಿಂದ

[ಆಂತರರಾಷ್ಟ್ರೀಯ ಜನತೆಗೆ ಶಾಂತಿಮನಸ್ಸಿನಿಂದ ವಿಮರ್ಶಿಸುವುದಕ್ಕಾಗಿ ಇವರು ಭಾಷಣವನ್ನು ಮಾಡಿಯದಿಲ್ಲದೆ, ಅದು ರೇಡಿಯೋ ಮೂಲಕ ಸಮಸ್ತರೂ ಕೇಳುವಂತಾಯಿತು]

ಕಳೆದ ಮಹಾಯುದ್ಧಾನಂತರದಲ್ಲಿ ಇಂದಿನದೇ ಕರಿನ ಸಂಧಿಕಾಲ. ಆದೇ ಇಪ್ಪತ್ತು ವರ್ಷಗಳಲ್ಲಿ ಶಾಂತವಾಗಿ ಈ ರಾಜ್ಯವು ಅಭಿವೃದ್ಧಿಗೆ ಬಂದಿದೆ. ಪ್ರಜಾಸತ್ತೆ, ಸ್ವಾತಂತ್ರ್ಯ, ಸಾಂಪತ್ತಿಕ ಸುಸ್ಥಿತಿ, ಧಾರ್ಮಿಕ ಸಹನೆ, ಸಾಮಾಜಿಕ ನ್ಯಾಯ ಎಲ್ಲವೂ ಯಾವ ಕಂಟೆಯೂ ಇಲ್ಲದೆ ಸಾಧ್ಯವಾಗಿವೆ ಇತರ ಎಲ್ಲ ರಾಜ್ಯ ಗಳಲ್ಲಿ, ಇವೆಲ್ಲ ಸಾಧ್ಯವಾಗಬೇಕಾದರೆ ಅದ ನಾಹುತ ಅಪ್ಪಿತ್ಪಲ್ಲ. ಇಲ್ಲಿ ಯಾವ ಉಪ ದ್ರವವೂ ಇಲ್ಲದೆ, ನಿಷ್ಪಕ್ಷವಾಗಿ ಸಾಧ್ಯವಾಗಿದೆ

ಚೆಕ್ಕರು (ಝೆಕ್ಕರೆಂದು ನಾವು ಕರೆವವರು) ಸ್ಲೊವಾಕರು ಇತರ ಅಲ್ಪಸಂಖ್ಯಾತರೊಡನೆ ಸೇರಿ, ಪ್ರತಿಯೊಬ್ಬರೂ ಎಷ್ಟು ರಾಜಕೀಯ ಸ್ವಾತಂತ್ರ್ಯ ಪಡೆಯಬಹುದೋ ಅಷ್ಟನ್ನೂ ಕೊಟ್ಟೇ ಬಂದಿರುವೆವು ಇದಲ್ಲವೆ ಪ್ರಜಾ ಸತ್ತೆ ಎಂದರೆ?

ಎಲ್ಲ ಅಲ್ಪಸಂಖ್ಯಾತರೊಡನೆ ನಾವು ಇದೇ ಉದ್ದೇಶದಿಂದ ಸಂಭಾಷಣೆ ಕೊಡಗಿದ್ದೇವೆ ಹಾಗೆಯೆ 'ಸುಡೆಟೆನ್ ಜರ್ಮನ್'ರೊಡನೆಯೂ ಇವರು ಅಲ್ಪಸಂಖ್ಯಾತರಲ್ಲಿ ಪ್ರಮುಖ ಪಂಗಡ ಇವರಿಗಾಗಿ ನಾವು ಕೂಡಲಿರುವ ಹಕ್ಕುಗಳು ಇತರಿಗೇ ಮಾತ್ರವಲ್ಲ ಸಮಸ್ತ ಅಲ್ಪಸಂಖ್ಯಾತ ರಿಗೂ ಸಲ್ಲುವುವಾಗಿವೆ.

ಈ ರಿಯಾಯಿತಿಗಳು ಸಮಸ್ತರೂ ಅಂಗೀ ಕರಿಸಲು ಯೋಗ್ಯವಾಗಿದ್ದು ಈ ದೇಶಕ್ಕೆ ಆವರ ಭವಿಷತ್ಪೌತಿಗೂ ಅತಿ ಹಿತಕರವಿಗಳಾಗಿವೆ ಸಮಸ್ತರೂ ಇವನ್ನು ಸೂರ್ಜಿತವಿರಿಸುವಲ್ಲಿ ಸಹಕರಿಸಿದರೆ ಯಾವ ಬಗೆಯ ತೊಡಕೂ ಯಾ ರಿಗೂ ಉಂಟಾಗಲಾರದು ಪ್ರತ್ಯೇಕ ಕೇಂದ್ರ ವುದು, ಅದರಲ್ಲಿ ಅವರವರ ಸ್ವತಂತ್ರವಾಗಿರು ವಂತಾಗುವುದು

ಇದರಿಂದ ಯಾರೂ ಸಮಸ್ಯೆಯೊ ದು ಇಸ್ಪರ್ಧವಾಗುವುದ ಎಲ್ಲ ಜನಾಂಗ ಗಳೊಡನೆ ಸಾಮ್ಯವಾಗಿ ಸಹಾ ಜರ್ಮನ ಝೆಕ್ಕರಲ್ಲಿ ಬಲಕ್ಕೆ ಸಿದ್ಧವಾಗಿ ಎದ್ದು ನಿಂತಿದೆ]



ಅನೇಕ ಜನರಿಗೆ ಅವರ ಸಂಕಟದ ಕಾರಣಗಳು ತಿಳಿಯವು, ಇನ್ನನೇಕರಿಗೆ ಅವುಗಳು ತಿಳಿದಿದ್ದರೂ ಅದನ್ನು ಡಾಕ್ಟರೊಡನೆ ತಿಳಿಸಲು ನಾಚಿಕೆಗೊಳ್ಳುವರು ಇನ್ನೇರ್ವರಿಗೂ ಬೇಕಾದು ಮಹಾ ವರವಿರುವುದು

ಜೀವಾಮೃತ

ಅದು ಅಶಕ್ತತೆಯನ್ನು, ಅದರ ಕಾರಣಗಳು ಯಾವವೆ ಇರಲಿ ಹೋಗಗೊಳಿಸುತ್ತದೆ ನಿಮ್ಮ ದೇಹಕ್ಕೆ ಸಂಪೂರ್ಣ ಹೊಸ ಹುರುಪನ್ನು ಕೊಡುತ್ತದೆ. ಬಲ, ನವಚೇತನವನ್ನು ಕೊಡುತ್ತದೆ

ಅರಿಣಾಮಗಳು ಕೆಡುವ ಮೊದಲು, ಇದರ ಪರೀಕ್ಷೆಯನ್ನು ಮಾಡಿರಿ

ಎಲ್ಲಾ ದವಾಖಾನೆಗಳಲ್ಲಿ ದೊರಕುತ್ತದೆ

ಆಯುರ್ವೇದಾಶ್ರಮಂ, ಟಿ. ಪಿ ನಂಬ್ರ 287 ಮದ್ರಾಸು.

ಸ್ಟಾಕಿಸ್ಟರು –

ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

DIAMONDS! DIAMONDS

BEST BRILLIANCY!

K. R. K. SHET,

MANGALORE

ಮಂಗಳೂರಿನ ಸಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ ಸ್ವದೇಶದಿಮ್ಸಿಂದ ಬರುವ ವಜ್ರಗಳು: ಬಜಾರ ಧಾರಣೆಗಿಂತ ಎದು ಪರ್ಸೆಂಟಿಗೆ ಕಡಿಮೆಯಾಗದ ತೆ ನಮ್ಮಲ್ಲಿ ವಿಶ್ರಯಿಸಲ್ಪಡುತ್ತದೆ

ನಮ್ಮ ಒದ ಸ್ವಂತ ಪರೀಕ್ಷೆಯ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೆ ತಿಳಿದ ಒದುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ವಿಶ್ವದಲ್ಲಿರುವ ಪ್ರತಿಯೊಂದು ಅಣುವೂ ಉತ್ಸಾಂತಿಪೊಂದುತ್ತ ಪೂರ್ಣತೆಗೇರುವುದು ಪೂರ್ಣತೆಯೆಂದರೆ ವರಮಾತ್ಮನ ಸಮಾನತೆ, ವಿಶ್ವ ಮೊದಲಾಗಿ ಬೆಳವಣಿಗೆ, ಜನನದ ಹೋರಾಟ ಎರಡನೆದಾಗಿ ಯೋರಾಟ ಮಗಿದ ಇಂದ್ರಿಯಗಳ ಶಕ್ತಿಯನ್ನು ಸಂಚಯಿಸಿ ಸ್ವಾಯ ತ್ತಕ್ಕೆ ತರುವಿಕೆ ಮೂರನೆದಾಗಿ ಶಾಂತಜೀವನವನ್ನು ಕೈಕೊಂಡು ಕ್ರಮರಹಿತವಾದ ಪ್ರಕೃತಿಯಲ್ಲಿ ಕ್ರಮವನ್ನು ಸೃಜಿಸಿತರುವಿಕೆ ದೇವಾಸುರಯುದ್ಧಗಳು—ಅಕ್ರಮ ಅಧಮಳ ಅಸತ್ಯಗಳನ್ನು ಕ್ರಮ ಧರ್ಮ ಸತ್ಯಗಳು ಜಗ್ಗುಬಡಿದು ಗೆಲ್ಲಲು ನಡೆವ ಹೋರಾಟಗಳು ಈ ಹೋರಾಟ ಮುಗಿಯೊಡನೆ ಶಾಂತಿಸ್ಥಾಪನೆ ಕೊನೆಗೆ ಮನಃಪೂರ್ವಕವಾಗಿ ವಿನೇಕದಿಂದ ಮುಂದಣ ಪ್ರಗತಿಯನ್ನು ಯೋಚಿಸಿ, ಪೂರ್ಣತೆಹೊಂದಲು ಸಾಧನೆ.

ಈ ತ್ರಿಸೂತ್ರಿಯ ಮೂರು ತರಗತಿಗಳಲ್ಲಿ ಜಿಜ್ಞಾಸುವಿನ ಜೀವದ ವಿಶ್ವವು ಕೂಸಿನಂತೆ ತನ್ನ ಆಲೈಕೆಗಾಗಿ ವಿಹಾರಾಲೆಯ, ಜಗದಂಬೆಯ ಸನ್ನಿಧಾನ ಭವ ಬೆಳಕಿನಲ್ಲಿ ಅವಶ್ಯಕತೆಯಾಗಿ ನೂಂದಿಯಬೇಕೆಂದೇ ಕೂಸಿನ ಆಸೆ ಹೊರಾಟಕ್ಕಾರಂಭವಾಗಲು; ಕತ್ತಲ ಬೆಳಕುಗಳ ದೇವಾಸುರರ ಧರ್ಮಾಧರ್ಮಗಳ ಯುದ್ಧಗಳಾಗುವು ಅದಶಕ್ತಿಯು ಆಗ ಮಹಾಕಾಳಿಯೆನಿಸಿ ಅಸುರರನ್ನು ಕೊಂದು ಕೃಪೇಕಾಗುವುದು ಯುದ್ಧದಲ್ಲಿ ವಿಜಯ ಹೊಂದುತ್ತಲೇ ಶಕ್ತಿಯನ್ನು ಒಂದುಕೂಡಿಸಿ, ಕೈತ್ರಿಮತೆ ದ್ವಂದ್ವಾದಿಗಳನ್ನು ದೂರಗೆಳಿಸುವುದು ಆಗ ಮಹಾಶಕ್ತಿಯು ಮಹಾಲಕ್ಷ್ಮಿಯೆನಿಸುವಳು. ಯುದ್ಧವೇತದಲ್ಲಿ ನಿಂತ ಮೂರ್ತಿಯಲ್ಲ, ಕಮಲಾಸನೆ ಕಮಲವು ಶಾಂತಿ ಸಂಪನ್ನತೆ ಸಮೃದ್ಧಿಗಳನ್ನು ಸೂಚಿಸುವುದು. ಶಾಂತಿಯನ್ನೂ ಕ್ರಮವನ್ನೂ ರಕ್ಷಿಸುವ ವಿಷಾದು ಇದೇ ಹೀಗಿದ್ದಲ್ಲಿ ನಾಶಕ್ತಿ, ಮುಂದಣ ಅಭ್ಯುದಯಕ್ಕೆ ತಕ್ಕಂತಹ ನೂತನ ಯೋಜನೆಗಳನ್ನು ಹೂಡಬರುತ್ತದೆ ಇಲ್ಲಿಂದ ಮುಂದೆ ಸೃಗತಿಗೆ ವಾರ್ತಭವಾಗುವುದು.

ಮುನ್ನಡೆ ಯಾವ ದಿಕ್ಕಿಗೆ? ಇದರ ವಿಧಾನಗಳಾವುವು? ಆದರ್ಶನೆಲ್ಲಿದೆ? ಇವನ್ನು ತಿಳಿಯಬೇಕಾದರೆ, ಧಾರಾಳವಾಗಿ ಜ್ಞಾನಸಂಪಾದನೆಯಾಗತಕ್ಕದು ವಿವೇಕ, ಮುಂಜಾಗ್ರತೆ, ದೂರದರ್ಶಕತೆ ಎಲ್ಲವೂ ಬೇಕು. ಭೂತಕಾಲದ ವಿಮರ್ಶೆ, ಭವಿಷ್ಯತ್ತಿನ ಭಾವನೆ ಎರಡೂ ಇದ್ದಲ್ಲಿಮಾತ್ರ ವರ್ತಮಾನದಲ್ಲಿ ವರ್ತನವು ಸಾಧ್ಯ ಇದೇ ಮಹಾಸರಸ್ವತಿಯ ಅವಿರ್ಭಾವ ಅವಿ ಶಕ್ತಿಯ ಮತ್ತೊಂದು ರೂಪವಿದ ಕವಿ, ತತ್ವಜ್ಞಾನಿ ಅಳವಾಗಿ ದೃಢವಾಗಿ ತೋಡಿ ಒಲವಡಿಸಿ ಅಲ್ಲಿಂದ ಧೈರ್ಯದಿಂದ ಆದರ್ಶದ ಕಡೆಗೆ ನುರ್ನಡೆಯಲು ಉಪಕ್ರಮವಾಗಲೆನ್ನುವರು ಹೀಗೆ ಇವೇ ಮೂರು ಸ್ವಕಾರಗಳಿಂದ ಆದಿಶಕ್ತಿಯು ವಿಶ್ವವನ್ನು ಸಂಚಲನ ಕ್ರಮದಲ್ಲಿಟ್ಟು ಪೂರ್ಣತೆಯ ಕಡೆಗೆ ನಡೆಯಿಸಿ ಗುರಿಮುಟ್ಟಿಸುವುದ.

ಶಕ್ತಿಪೂಜೆ ಎಂದರೆ ನಮ್ಮ ಜನತೆಯು ಗಾಢವಾದ ಭಕ್ತಿಯಿಂದ, ಮುಕ್ತಿಯ ಕಡೆಗೆ ನಡೆವರೆ ಶಕ್ತಿಯನ್ನು ಸಂಪಾದಿಸಲೂ ರಾಜರ್ಷಿಗಳೂ ಬ್ರಹ್ಮರ್ಷಿಗಳೂ ಇದ್ದ ಈ ದೇಶದಲ್ಲಿ ಧರ್ಮಸಂಸ್ಥಾಪನೆ ಮಾಡಲು ಪ್ರಯತ್ನಿಸಲೂ ಮಹಾನಾಯಿಯಲ್ಲಿ ವಾತ್ಸಲ್ಯಿಸಿಕೊಂಡು ಬಲಗೊಳ್ಳುವುದಕ್ಕಾಗಿ ನಡೆವ ಒಂದು ಸಾಪ್ತಾಹದ ಪ್ರಕಾಲದ ಆರಾಧನೆ ಮಾನವಕೋಟಿಯ ಐಾಂಡ್ಯವು ಸಾಧ್ಯವಾಗುವಂತೆ ಯಾವ ಪ್ರಗತಿಯವಾದ ಹಂಚಿಕೆಗಳವೆಯೋ ಅವನ್ನು ಹೂಡಲೂ ವ್ಯವಹಾರಕ್ಕೆತರಲೂ ಇದೇಸಮಯವು

ಶಕ್ತಿ—ಶಾಂತಿ—ಸಂಸ್ಕೃತಿಗಳನ್ನು ಗಳಿಸಿಕೊಳ್ಳುವುದಕ್ಕೆ, ಮಹಾನಾಯಿಯು ಪ್ರಸನ್ನಳಾಗಿರುವ ಈ ಅವಕಾಶದಲ್ಲೇ, ಸರ್ವಭಾರತೀಯರಿಗೂ ಸಾಧ್ಯವಿದೆ

ಭರತಖಂಡದಲ್ಲಿನ ಸಮಸ್ತರಿಗೆ ಶ್ರೇ (ಶಾಂತಿ ಸಮೃದ್ಧಿಗಳು) ವಿಜಯ (ಕೃತಾರ್ಥತೆ, ಮುಕ್ತಿ ಭಗತಿ (ಅಭ್ಯುದಯ) ದೊರೆತು, ಈ ದೃಷ್ಟಿಯಲ್ಲಿ ಸರ್ವರ ನಡೆ ಸುಗಮವಾಗಲಿ, ಕರುಣಾಮಯಿಯಾಗಿರುವ ಆದಿಶಕ್ತಿಯು ನಮ್ಮನ್ನು ಅವಶ್ಯವಾಗಿರುವ ಅಧಿಸಂಧಿಗಳಿಂದ ತಪ್ಪಿಸಿ, ಆದರ್ಶವು ಸಾಧ್ಯವಾಗುವಂತೆ ನಡೆಯಿಸಿಕೊಂಡು ಆಶೀರ್ವದಿಸಲಿ.

THE

Bank of Mangalore Ltd.,

MANGALORE.

ESTD 1931

Branches-

Panemangalore Mudabidri & Padubidri.

Fixed Deposits will be received at following rates of interest

For 3 Months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly

Saving Bank deposit 3½% on daily balances.

All kinds of banking business transacted

ಅರೆ ನೋಟಗಳು!

ಅಂತೂ ಮುಸ್ಲಿಮರಿಗೆ ಕೆಲಸ ಕೊಟ್ಟಿದ್ದೇ ನಾಳುವುದು ಹೇಗೆ? ಸ್ವಲ್ಪವೇ, ಇಂಗ್ಲೆಂಡು ನುಗ್ಗಿದ್ದಲ್ಲಿ ಕೈಯತ್ತಬೇಕಾಗಿ ಬಂದರೆ, ಇಂಡಿ ಯನ್ನ–ಪ್ರಪಂಚವೇ ಕುರಿದು ಹೋಗುತ್ತಿರು ವಾಗ–ಪ್ರಾರ್ಥನಾಮುಗ್ಧನಾಗಿ ಕೈಚಟ್ಟಿ ಕೂತಿ ರಬಲ್ಲುದೆ? ಆಂತಹ ಯುದ್ಧದಲ್ಲಿ ಇಂಗ್ಲೆಂಡು ಸೋತರೆ ಇಂಗ್ಲೆಂಡಿನ ವಿರೋಧಿಗಳು ಇಂಡಿಯ ನನ್ನು ಗೆಲ್ಲಬಹುದು ಅದಲ್ಲದೆ, ಇಂಗ್ಲೆಂಡಿನ ಹಗೆತನವನ್ನು "ಸಂಪಾದಿಸಿಕೊಳ್ಳಬೇಕಾಗು ವುದು. ಇಂಡಿಯದ ಸಹಾಯವಿಲ್ಲದೆ ಇಂ ಗ್ಲೆಂಡು ಗೆದ್ದರೆ, ಇಂಡಿಯವನ್ನು ಮತ್ತೆ ಇಂಗ್ಲೆಂ ಡು ಕ್ಷಡಿಗಣ್ಣಿಂದಲೂ ನೋಡಲಾರದು.

++ ++ ++

ನನ್ನುಳ್ಳಿಸ್ಸೆ ಸುಮಾರು ೯೦೦ ಮಂದಿ ರಾ ಜಾಧಿರಾಜರುಗಳಲ್ಲಿ ಮೂವತ್ತು ಮಂದಿಯೇ ನೋ ತಮ್ಮ ಸರ್ವಸ್ವವನ್ನೂ ಸಹಾಯಕ್ಕಾಗಿ ಆತುರತೆಯಿಂದ ಇಂಗ್ಲೆಂಡಿಗೆ ಒಪ್ಪಿಸಿ ಕೃತಾರ್ಥ ರಾಗಿದ್ದಾರೆ. ಇಂಗ್ಲೆಂಡು ಪ್ರಜಾಸತ್ತೆಯುಳ್ಳ ದು; ಅದರ ತಕ್ಷ ರಕ್ಷಣಾರ್ಥವಾಗಿಯೆ ಯುದ್ಧ ಮಾಡಲೂ ಹಿಂದೆಗೆಯದು ಅದರ ಸಹಾಯ ಕ್ಕೆ ಸರ್ವಸ್ವವನ್ನೂ ಒಪ್ಪಿಸುವ ರಾಜರುಗಳ ಲ್ಲೆಷ್ಟು ಮಂದಿ ಎಮ್ಮೆ ನುಟ್ಟಿಗೆ ಪ್ರಜಾಸತ್ತೆಯು ಪೋಷಕರು? ಪ್ರಜಾ ಪ್ರತಿನಿಧಿತ್ವವಿಲ್ಲದೆ ರಾಜ ರುಗಳಿಂದ ಬ್ರಿಟಿಷ ಪ್ರಜಾಪ್ರತಿನಿಧಿ ಸರಕಾರವು ಯುದ್ಧ ಸಹಾಯವನ್ನು ನಡೆದು ಸಮಾನಸ್ಯಂ ಥತೆಯನ್ನು ತೋರಿಸುವುದೆಂದರೇನು?

++ ++ ++

ಪ್ರಥಮ ಸಹಾಯಾತುರರಾಗಿರುವ ಭಿಕಾ ನೇರ ಮಹಾಶಯರು, ಸ್ವಲ್ಪ ವಿಚಾರಿಸಿ ನೋಡ ಬೇಕಾಗಿದೆ ಎನ್ನಬಹುದು ಬಿಕಾನೇರದ ಒಂಟೆ ಗಳ ಸೈನ್ಯವನ್ನು, ಜರ್ಮನ್ ವಿಮಾನಗಳು ಲಂಡನ್ನನ್ನು ಬೋಂಬುಗಳಿಂದ ಸುಡಲೆಳಸಿರು ವಾಗ, ಬ್ರಿಟಿಷರು ಯಾವ ಉಪಯೋಗಕ್ಕೆ ಇಟ್ಟುಕೊಳ್ಳಬಹುದು? ಅಥವಾ ಒಂಟೆಗಳ ಸೈನ್ಯವು ನುಗ್ಗುವುದಕ್ಕೆ ಜರ್ಮನಿಯು ಏಂದು ಮರುಭೂಮಿಯೆ? ಕಳೆದ ಮಹಾಯುದ್ಧ ಕಾಲದಲ್ಲಿ ಯಾರೋ ಒಬ್ಬ ರಾಜರು ತಮ್ಮ ಪ್ರಜೆಗಳನ್ನು ತೆರಿಗೆ ಮಂತಿಗೆ ತೆರಲೂ, ಯುದ್ಧ ಸಾಲದ ಬೋಂಡುಗಳನ್ನು ಕನ್ನ ಹೆಸರಲ್ಲಿ ಪಡೆ ಯಲು ವ್ಯಜೆಗಳನ್ನು ಹಣ ತೆರುವುದಕ್ಕೆ ಒತ್ತಾ ಯಪಡಿಸಿದುದರಿಂದಲೂ ಅನ್ಯಾಯವಾದ ವೃತ್ತಾಂತಗಳಿವೆ ನಿಜವಾದ ಅಚ್ಚ ಇಂಡಿಯ ವು ಮುಂದೆ ಬಂದು ಸಹಾಯಪ್ರೊಪ್ತಿಸಲಿ, ರಾಜರುಗಳಲ್ಲಿ ರಾಜಭಕ್ತಿ ತುಂಬ ಇದೆಯೆಂ ಬುದು ನಿಜ, ಪಾರ್ಲಿಮೆಂಟು ಅಚ್ಚ ಹಿಂದೀ ಜನತೆಯ ಸಹಾಯ ಪಡೆಯಲು ನಿರೀಕ್ಷಿಸಲಿ

++ ++ ++

ಅಸ್ಸಾಮ ವಿಜಯ ಎಂದೇ ಎಲ್ಲ ಕೊಂಗ್ರೆ ಸ್ ಕೂಟಗಳು ಕೂಡಿದ್ದೇ ತಡ, ನರ ವಿರುದ್ಧರ ಜಿ ವಿಶ್ವಾಸದ ರಥಾವುಗಳು ಮುಂದೆ ನಿಂತಿವೆ ನೀರವೇರುವ ತೊಡಲೇ ಅಸ್ಸಾಮ ಮಂತ್ರಿ ಗಳಿಗೆ ಪದತ್ಯಾಗವಾದೀತೋ? ಯೂರೋಪಿ ಯರೂ ಮುಸ್ಲಿಮರೂ ಒಂದುಕೂಡಿರುವರು ಕೊಂಗ್ರೆಸು ಮುಂದೆ ಬಾರದಂತೆ ಅಲ್ಲಿ ಪೇಚಾಟ ಗಳು ನಡೆಯುತ್ತಿವೆ ಸಿಂಧೆದಲ್ಲಿ ಲೀಗ್ ಇದೆ, ಹೊಸ ಮಂತ್ರಿಗಳನ್ನು ಉಜ್ಜಾಟನ ಮಾಡುವು ದಕ್ಕೆ! ಗಡಿನಾಡಿನ ಮಂತ್ರಿಮಂಡಲವು ಹೇಗಾ ಗುವುದೆಂದು ಹೇಳಬರುವುದಿಲ್ಲ ಅದರ ಫಲ ವಾಗಿ,–ಎಂಟೊಂಬತ್ತು ಮಂತ್ರಿಮಂಡಲಗಳು ಕೊಂಗ್ರೆಸಿನವಾಗುವ ಬದಲಾಗಿ, ಅರೇ ಉಳಿ ದಾವೊ ಎಂದು ಹಲವರು ಬೆದರಿರುವರು

++ ++ ++

ಜಿನ್ನಾರವರ ಮುಕ್ಷದತನ, ಹೈದ್ರಾಬಾದಿ ನಲ್ಲಾದ ಇತ್ತೀಚೆಯ ಧರ್ಮಾನುವ್ಯಕಟನ, ಕಾಶ್ಮೀರ ರಾಜ್ಯದಲ್ಲಿನ ದಂಗೆ–ಇವನ್ನು ಕೊಂಗ್ರೆ ಸಿನವರು ಸರಿಯಾಗಿ ತಿಳಿದುಕೊಳ್ಳುವರೆ? ಎಲ್ಲಿ ನೋಡಿದರೂ ಯೂರೋಪಿಯರು ಮುಸ್ಲಿಮ ವಕ್ಷವಾಗಿರುವರು. ಬಂಗಾಳದ ಸಿಂಹಾಸನ ದಲ್ಲಿ ಹುಕ್ಕರಿರಲು ಕಾರಣವಿದೇ ಕಾಶ್ಮೀರ ದಲ್ಲಿ ಗ್ಲೆನ್ಸಿ ಕಮಿಶನು ಕುಂಟಾಗಿ ಅಧಿಕ-ಸಂಖ್ಯೆ ಅಧಿಕ ಸಂಖ್ಯೆಯವರಿಗೆ ಸಾಕಷ್ಟು ಹುದ್ದೆಕೊ ಡಲು ಯಾವ ಕಮಿಶನೂ ಕುಂಟಾಗಿಲ್ಲ–ಇದೇ ಕಾರಣದಿಂದ

++ ++ ++

ಕೊಂಗ್ರೆಸ್–ಲೀಗ್‌ಗಳೊಳಗೆ ನಡೆದ ವತ್ಕ ಸೌಹಾರ್ದವು ಪ್ರಕಟನಾಗಿದೆ ಪೂರ್ವ ಪಶ್ಚಿ ಮಗಳು ಒಂದಾಗುವುದು ಅಸಾಧ್ಯವೆಂತಿದ್ದರೂ, ಹಿಂದೂ ಮುಸ್ಲಿಮರು ಹಿಂದುಸ್ತಾನದಲ್ಲಿ ಒಂ ದಾಗುವುದು ಕಷ್ಟನಾಗಿದೆ

++ ++ ++

ಆದರೂ, ಕೊಂಗ್ರೆಸು ಮೊದಲಿಂದಲೂ ಈ ಜಾತಿ ಮತ ವರ್ಣಭೇದಗಳನ್ನು ಯಾವ ನಕ್ಷ ವಾತ ದೃಷ್ಟಿಯಿಂದಲೂ ಕಾಣುತ್ತಿಲ್ಲವಾದುದ ರಿಂದ, ಕೊಂಗ್ರೆಸು ಸ್ವಲ್ಪ ವಿವೇಕದಿಂದ ಧೈರ್ಯ ದಿಂದ ಮುಂದಡಿದರೆ ವಿಜಯ ಹೊಂದಲೇ ಬೇಕು ಕೆಲವೇ ಮಂದಿ, ಅವರೆಷ್ಟೊ ಪ್ರಮುಖರಿರಲಿ,–ಮುಸ್ಲಿಮ ಸ್ವಾರ್ಥಿಗಳ ಸ್ವತಂತ್ರಾ ಭಿಮಾನದಿಂದ ಕೊಂಗ್ರೆಸು ಸೋಲಲಾರದು ಹಸಿವು ದಾರಿದ್ರ್ಯಗಳು ಎಲ್ಲ ಜಾತಿಗಳವರನ್ನು ಒಂದೇ ಬಗೆ ಬಾಧಿಸುವಾಗ,–ಬರ್ಮದಲ್ಲಿ ಹಿಂದೂ ಮುಸ್ಲಿಮರೆನ್ನದೆ ಹಿಂದೀಯರನ್ನೆ ಹಿಂ ಸಿಸಿರುವಾಗ, ಕೊಂಗ್ರೆಸು ಹಿಂದೀಯರದಾಗಿ ಯೇ ಬಾಳುವುದು ಇದರಿಂದ, ಒಂದು ದಿನ ಚೆಂಬರ್ಲೇನರು ಹಿಟ್ಲರನ್ನು ಕಾಣ ಹೋದಂತೆ, ಕೊಂಗ್ರೆಸ್ ಅಧಿನಾಯಕರನ್ನೂ ಕಾಣುವ ಪ್ರ ಸಂಗವುಂಟಾದೀತು

++ ++ ++

ಗಾಂಧಿಜಿಯವರು ಪ್ರತ್ಯಕ್ಷ ವ್ಯವಹಾರದೇ ಯೋಗ್ಯ ಯುಕ್ತಿ ಎಂದು ತ್ರಿವಾಂಕೂರಿಗೆ ತಿಳಿಸಿ ದ್ದೆ, ಮೂರು ಸಲ ವೈಸ್ರಾಯ್ ಗುಂಡು ಹಾರಿಸಲಾ ಯಿತು ಅತ್ತ ಜಿನ್ನಾರವರೂ–ಹಿಂದೂ ರಾಜ್ಯ ಗಳಲ್ಲಿರುವ ಮುಸ್ಲಿಮರಿಗೆ ಒಂದಾಗಿ ತಮ್ಮ ಕೇರಿಕೆಗಳನ್ನು ಮುಂದೊತ್ತಲು ಸೂಚನೆ ಕೊಟ್ಟು ಹಿರುವರು ಲೀಗು ನಿಮ್ಮ ಬೆಂಬಲಕ್ಕಿದೆ ಎಂದು ಅವರ ಮಾತು ಹಿಂದುಗಳ ಬೆಂಬಲಕ್ಕೆ ಕೊಂ ಗ್ರೆಸು ಇದೆ ಎಂದು ಅವರೇ ಸೂಚಿಸಿರುವರು ಕೊಂಗ್ರೆಸಿನ ಮತ್ತು ಲೀಗಿನ ಸತ್ತಾಗ್ರಹಗಳು ಎರಡೂ ಕಡೆ ಬಾಧಿಸುವಾಗ, ದೇಶೀಯ ರಾಜ್ಯ ಗಳಿಗೆ ಭಗವಂತನೇ ಗತಿ! ಇಪ್ಪತ್ತನೆಯ ಶತ ಮಾನದ ಪ್ರಜಾಸತ್ತೆಯ ಆನುಷ್ಠಾನವೇ ಇವ ರನ್ನು ಕಾಪಾಡಬೇಕು

++ ++ ++

"ಸರಕಾರದ ಅಧೀಶರು ಮಂತ್ರಿಮಂಡ ಲಕ್ಕೆ ವಿಧೇಯರೆಂದು ಸಾರಿಕೊಂಡರೂ, ಕೃತ ಯಿಂದ ತಮ್ಮ ಮಾತು ಸರಿಯಾದುದಲ್ಲವೆಂದು ಕೋರಿಸಿರುವರು ಎಂದು ಖಾನ್ ಅಬ್ದುಲ್ ಗಫೂರ್ ಖಾನರು ತಿಳಿಸಿರುವರು ಇಲ್ಲಿ, ನಮ್ಮ ಮಂತ್ರಿ ರಾಜಾಜಿಯವರು ಸರಕಾರದ ಅಧೀಸರರನ್ನು ಬಹಳವಾಗಿ ಕೊಂಡಾಡಿ ಸೋ ತಿರುವರು. ಹೀಗೇಕೆಂದು ಖಾನ್-ರಾಜಾಜಿ ಗಳ ಶರಾಗಳನ್ನು ಕೊಂಗ್ರೆಸ್ ವರಿಷ್ಠ ಸಮಿ ತಿಯು ವಿಚಾರಿಸಿ ನೋಡಬೇಕಾಗಿದೆ ಮುಖ್ಯ ಮಂತ್ರಿಗೆ ಪೂರ್ಣಾಧಿಕಾರವಿಲ್ಲದುದರಿಂದ, ಹೀಗೆ ಗದಿನಾಡಿನಲ್ಲಿ ದರೋಡೆಗಳು, ಕದ್ದೊ ಯ್ಯುವ ರೀತಿಗಳು! ಎಂದು ಮುಕ್ತೊಬ್ಬ ಗಡಿ ನಾಡಿನ ಸ್ಥಮಿಖರ ಮಾತು ಮಹಾತ್ಮಾಜಿ ಯವರು ಅತ್ತ ಹೋಗುವರಂತೆ ಅದೇ ಧೈರ್ಯ

++ ++ ++

ಹುಳ್ಳರು ಅತ್ಯುತ್ಸಮವಾಗಿರುವ ಹೊಸ ತಕ್ಷವನ್ನು ಶೋಧಿಸಿರುವರು ಸಿಕಂದರ ಹಯಾ ತಖಾನರ ಅಶ್ರಯದಲ್ಲಿರುವಾಗ, ಜಾತಿಗಳ ಸಮಸ್ಯೆ ಬಹಳವಾಗಿ ಪ್ರಚಾರಿಸಿದರು, ಲಖ್ನೌ ಕಡೆಗೆ ಹೋಗುವುವಿಲ್ಲ, ಢಿಲ್ಲಿಯಲ್ಲಿ ಹುಕ್ಕರು ಭದ್ರವಾಗಿಯೇ ಇದ್ದು ೨ವ ದೇವಳದ ಬಳ ಪುರೋಹಿತನನ್ನು ತಿವಿದ ವಿಷಯವೇನೂ ಮಾ ತಾಡದೆ ಇದ್ದ ಒಂದು ಅತ್ಯುತ್ತಮ ಸಂದರ್ಭ ದಲ್ಲಿ ಕಳೆದುಕೊಂಡರು. ಆದರೆ ಅಲ್ಲೇ ಈ ಹೊಸ ಶೋಧವನ್ನು ಪ್ರಕಟಿಸಿದರು "ಕೊಂ ಗ್ರೆಸ ಹಿಂದೂಗಳ ಸಮಿತಿ, ಹಿಂದುಗಳು ಎಂದು ಅಳಿದವರಲ್ಲಿ ರಾಜ್ಯಭಾರ ನೋಡಿದವರೇ ಅಲ್ಲ ಈಗ ಅಧಿಕ ಸಂಖ್ಯೆವರಾಗಿಯೂ ರಾಜ್ಯಭಾರ ವನ್ನು ಅವರು ನಿರ್ವಹಿಸಬೇಕಾಗಿರುವಾಗ ಅಲ್ಪ ಸಂಖ್ಯೆಯವರನ್ನು ಸದೆಬಡೆದು ಮುಸಿ ಮುರಿ 'ಚಾನಾಹಾಸಿ' ಮಾಡುತ್ತಿರುವರು!"

++ ++ ++

ಈ ಮಾತುಗಳನ್ನು, ಸಿಂಹ–ಹುಲಿಗಳಂತೆ ಗರ್ಜಿಸಿ–ಕೊಂಗ್ರೆಸು ಅಧಿಕಾರ ತಳೆದ ಏಳು ಪಾಂತ್ಯಗಳಲ್ಲಿ ಮುಸ್ಲಿಮರನ್ನು ದೈನ್ಯಾವಸ್ಥೆಗೆ ತರಲು ಯತ್ನಿಸುವರು ಅವರು ಬಾಯ್ತೆರೆ ದರೆ ಕೂಡಲೆ ಭಯಂಕರ ಕಾನೂನಿಂದ ಶಾಸನ ಮಾಡುವರು –ಜನರಿಗೆ ತಿಳಿಸಿದರು ಇದನ್ನು ದಿಲ್ಲಿಯಲ್ಲಿ ಹೇಳಿದುದು ಉಚಿತವೇ? ಅಲ್ಲೇ ಇದೆ ಶಿವದೇವಸ್ಥಾನ ಪೂಜಾರಿಯ ಹಕ್ಕೆ ಹತ್ತಿರವೇ ಕೊಂಗ್ರೆಸು ಕಾರ್ಯಕಾರೀ ಸಮಿತಿಯು ಅಧಿವೇಶನ

++ ++ ++

'ಹರಿಜನ' ಪತ್ರಿಕೆಯಲ್ಲಿ ಲೇಖನಗಳನ್ನು ಆಗಾಗ ಮಹಾತ್ಮಾಜಿಯವರು ಬರೆಯುತ್ತ, ಶಾಂತೀ ಪೌಜಿನ ವಿಚಾರಗಳನ್ನು ಹೊರಗೆಡಹು ನರು. ಅತ್ತ ಮೌನವ್ರತ ಧರಿಸಿರುವರು ಕಾರ್ಯಕಾರೀ ಮಂಡಲದಲ್ಲಿ ಈ ವಿಚಾರವಾಗಿ ಕೆಲವಾಕುಗಳನ್ನು ಆಡಿದರು ಅವರ ಹಿಂಬಾ ಲಕರೇ ಇದರಲ್ಲಿ ವಿಶೇಷ ವಾತ್ಸಲ್ಯವನ್ನಾಗಲಿ ವಿಶ್ವಾಸವನ್ನಾಗಲಿ ಇವ್ವಿಲ್ಲವೆಂದು ಪ್ರಕಟವಾ ಗಿದೆ ಸಾಮ್ರಾಜ್ಯಶಾಹಿಯ ಊರ್ಜಿತಕ್ಕೆಗಾಗಿ ಯುದ್ಧವಾಗುವಲ್ಲಿ ಇಂಡಿಯವು ಅದರಲ್ಲಿ ನೇ ರವಾರದು, ಇಂಗ್ಲೆಂಡು ಯುದ್ಧ ಮಾಡಲೆಳಸಿ ದರೆ ನನಗೇನು ಬಂತು? ಎಂದು ಕರ್ತವ್ಯವೂ ಆಯಿತು. ಕಾರ್ಯಕಾರೀ ಸುಂದಲವೇ ಅಗಿಂ ದಾಗ ಸೇರಿ ಈ ವಿಷಯ ನಿರ್ಧರಿಸಬಹುದೆಂದೂ ಆಯಿತು. ಆದರೆ ಆಯಿತೇ?

++ ++ ++

ಇಂಥ ಸಂದರ್ಭಗಳಲ್ಲಿ ಭಗವದ್ಗೀತೆ ಏನಂತೆ? ಜಡವಾಗಿ ಕೂತಿರಲು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಸೂಚನೆಯಾಯಿತೆ? ತನ್ನ ಡೆಲ್ಲವನ್ನು ವಿರೋಧ ಪಕ್ಷಕ್ಕೆ ಒಪ್ಪಿಸಲು ಅವನು ಸಿದ್ಧನಾಗಿದ್ದನು. ಆದರೆ, ಧರ್ಮ ಸಂಸ್ಥಾಪ ನೆಗಾಗಿ ಕಾದಾಡುವುದೇ ಅವನಿಗೆ ಶ್ರೀ ಕೃಷ್ಣನು ಬೋಧಿಸಲಿಲ್ಲವೆ? ನಮ್ಮ ದೇಶದಲ್ಲಿ ಧರ್ಮ ರಾಜ್ಯ ಸ್ಥಾಪನೆಯಾ ಗಬೇಕಾಗಿದೆಯಾದರೆ, ಅದನ್ನು ಹೇಗೆ ಕೈಕೊಳ್ಳಬೇಕೆಂದು ಈಗ ಸೂ ಚಿಸಬಾರದೆ, ಮಹಾತ್ಮಾಜಿಯವರು?

++ ++ ++

ಶಾಂತೀ ಫೌಜು–ಅಹಿಂಸಾ ಫೌಜುಗಳ ನಿರ್ಮಾಣವೆಂದರೆ, ಯುದ್ಧ ಸನ್ನಾಹತ್ಯಾಗವೂ ಬೇಕೆಂದರ್ಥವೆ?

++ ++ ++

ಹಿಂದೀ ಸೈನ್ಯವನ್ನು ಗೊತ್ತುಗಾರರಿಗೆ ಬ್ರಿಟಿ ಷರೇ ನಡಿಸಿಕೊಂಡು, ಬೇಕಾದಂತೆ ಯುದ್ಧ ಗಳಿಗೆ ಕೊಂಡೊಯ್ಯ ಬಹುದಾಗಿರುವ ಕಾರಣ, ಬ್ರಿಟಿಷರು ಯುದ್ಧಗಳಲ್ಲಿ ಸೋಲುವುದೆಂದರೆ, ಅವರು ಇನ್ನೂ ಇನ್ನೂ ಬಾರಕ್ಕೆ ಸ್ವರ್ಗವನ್ನು ಬಿಗಿಹಿಡಿದಂತೆ ಅವರೇ ಬಲಗೊಳ್ಳಿಸಿ ಹಿಂದೀಯರು ಕಾದಾಡುವುದು ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ ಹಿಂದೀ ಸೈನ್ಯದ ರಚನೆ, ಆದರ ವೇಲೆ ಅಧಿಕಾರ ಮುಂತಾದು ನೆಲ್ಲ ವಿಟಿಷರ ಕೈಯಲ್ಲಿದ್ದ ಪಕ್ಷಕ್ಕಲ್ಲ ನಮ್ಮ ದಾಗಿರುವುದರ ಒಂದ ಅನ್ಯಾಯ ಎಂದೂ ತಾತ್ಪರ್ಯವಾಗಿದೆ

++ ++ ++

ಇಂಡಿಯಾ ರಕ್ಷಣೆ ವಿಷಯದಿಗೆ ಕೊ ಗ್ರೆಸಿನೊಡನೆ ಬ್ರಿಟಿಷ ಸರಕಾರವು ಸಂಧಾನಕ್ಕೆ ಗಳ ನಾಲಿಕ ಒದ ಇಕ್ಕರ್ದ ಮಾಡಿಕೊಂಡಿ ದರೆ ಉತ್ತಮವಾದೀತು ಇಪ್ಪರಲ್ಲೇ ಇದು ನಿಶ್ಚಿತವಾಗಿದ್ದರೆ ಎನ್ನೋ ಉತ್ತಮವಾಗಿತ್ತು ಫೆರೋಜ್ ಖಾನನೂನರ ಕೆನಡಾದಲ್ಲಿ ಇದೇ ಇಂಡಿಯಾವು ಬ್ರಿಟಿಷರಿಗೆ ಯುದ್ಧದಲ್ಲಿ ಸಹ ಕರಿಸುವುದೆಂದು ನುಡಿದ ದಕ್ಕೆ ಅವರಿಗೇ ಯಾವ ಮತ್ತು ಯಾರ ಅಧಿಕಾರವಿತ್ತೋ ತಿಳಿದಿಲ್ಲ–ಕೊಂಗ್ರೆಸು ಈ ಬಗೆಯು ವಿಚಾರ ನುಡಿದುದಿಲ್ಲ

++ ++ ++

ಯಾವ ಕಾಲದಲ್ಲೂ ಹಿಂಸೆಯರಬಾರದು ಎಂದು ವ ಹಾತ್ಮಾಜಿ ನುಡಿದಿಲ್ಲ ಬೂವರ್ ಯುದ್ಧದಲ್ಲಿ ಬ್ರಿಟಿಷ ಸರಕಾರದ ಸಹಾಯಕ್ಕೆ ಗಾಂಧಿಜಿಯ ವರೂ ಸೇರಿದ್ದರು ಹಿಂಸಾತ್ಮಕ ವಾದ ಮತ್ತೊಂದು ವಕ್ಷದೊಡನೆ ಕಾಳಗವಾಗು ವಾಗ ಅವರೂ ಭಾಗವಹಿಸಿದ್ದರು ಅಹಿಂಸಾ ತ್ಮಕ ಶಕ್ತಿಗಳನ್ನು ಧ್ವಂಸಮಾಡಲು ಹಿಂಸಾತ್ಮಕ ವಕ್ಷ ವು ಕವಿದ ಬರುವಾಗ ಜೀವಪಣವಿಸಿಕೊಳ್ಳುವ ಕರ್ತವ್ಯವೊಂದು ಉಳಿದಿಲ್ಲವೆ? ಅದೆಂತು ಸಾಧ್ಯವು?

++ ++ ++

ಚೀನದ ಮೇಲೆ ದಂಡೆತ್ತಿ ಜಪಾನು ಬಂ ದುದು ಪಾಶ್ಚಾತ್ಯರನ್ನು ಆಸ್ಯಪಂಡದಿಂದ ಓದಿ ಸುವುದಕ್ಕೆಂಬ ವಿಚಿತ್ರ ಕಾರಣವನ್ನು ತಿಳಿಸಿದ ವುನ್ನವು ಜಪಾನು ಕವಿ ಯೋನ್ ನೊಗೂಚಿ ಗದೆ ಹೀಗೆ ಹೇಳಿದರೆ ಕೊಂಗ್ರೆಸು ಜಪಾನಿ ನಲ್ಲಿ ದೋಷ ಕಾಣದೆಂದು ಅವನ ನಂಬಿಕೆ ಯಿತ್ತು ಆದರೆ, ಪಾಶ್ಚಾತ್ಯರಲ್ಲಿ ಕೊಂಗ್ರೆಸು ದೋಷ ಕಾಣದು, ಕೆಲವು ಅದರ್ಶಗಳನ್ನು ಮಾತ್ರ ಕೊಂಗ್ರೆಸು ಬಿದಲಾರದು,–ವಿಷ

ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ಮತ್ತು ಪ್ಲೀಹದ ಬೆಳವಣಿಗೆ ರೋಗವನ್ನು ನಿವಾರಿಸುವ ಮತ್ತು ಕಡೆಯುವ ಖಾತ್ರಿ ಗುಣಗಳುಳ್ಳ ಔಷಧಿಯು

ಎರಡು ವಿಧಗಳಲ್ಲಿ, ಎರಡು ಸರಿಮಾಣಗಳಲ್ಲಿ ಎಲ್ಲಾ ದವಾಖಾನೆ ಗಳಲ್ಲಿ ಮಾರಾಟವಾಗುತ್ತಿದೆ.

ಆಯುರ್ವೇದಾಶ್ರಮಂ ಮದ್ರಾಸು.

ಶನಿವಾರ ಪಡಿ

'ಜೈ ಸೀತಾರಾಮ್'

ಅಂದು ಶನಿವಾರ; ಕಾಲಿಗೆ ಹೋಗುವುದು ತಪ್ಪಲಿಲ್ಲ. ನಾನು ಮನೆ ಜಾವಡಿಯಲ್ಲಿ ಕೂತು ಬರೆಯುತ್ತ ಇದ್ದೆ. ಮಧ್ಯಾಹ್ನ ಸನ್ನೊಂದು ಘಂಟೆಯ ಸಮಯ ಆಗಿರಬಹುದು.

ಕಾವಿ ಶಾಲೆಯನ್ನು ಉಟ್ಟುಕೊಂಡು ಭಸ್ಮಧಾರಣೆ ಮಾಡಿಕೊಂಡ ಜಟಾಧಾರಿ ಭಿಕ್ಷುಕ ನೊಬ್ಬನು ಒಂದು ಕೈಯ್ಯಲ್ಲಿದ್ದ ದಂಡವನ್ನು ನೆಲಕ್ಕೆ ಊರಿ, ಇನ್ನೊಂದು ಕೈಯ್ಯಲ್ಲಿದ್ದ ಕಮಂಡಲುವನ್ನು ಮುಂದಕ್ಕೆ ನೀಡಿ 'ಜೈ ಸೀತಾರಾಮ್' ಎಂದನು. ಬರೆಯುವುದರಲ್ಲಿ ತಲ್ಲೀನನಾಗಿದ್ದ ನಾನು ಅವನ ಆ ಆರ್ಭಟ ಸ್ವರವನ್ನು ಕೇಳಿದ ಮಾತ್ರಕ್ಕೇ ಬೆಚ್ಚಿಬಿದ್ದೆ. ನೋಡುವಾಗ ಅವನು ಕಲ್ಲುಗೊಂಬೆಯಂತೆ ನಿಂತುಕೊಂಡು ಒಳಗಿಂದ ಯಾರು ಬರುವರೋ ಎಂದು ಕಣ್ಣಿಟ್ಟಿದ್ದ. ಅವನಿಗೆ ನಾನು ಬೇಕಾಗಿರಲಿಲ್ಲ.

ನನ್ನಾಕೆ ಒಂದು ಹಿಡಿ ಅಕ್ಕಿಯನ್ನು ತೆಗೆದುಕೊಂಡು ಬಂದಳು. 'ತಾಯಿ . . . ಮೂರು ವರ್ಷದಿಂದ ಬಹಳ ಕಷ್ಟ; ಸುಖ ಇಲ್ಲ; ನಮ್ಮದಿ ಇಲ್ಲ . . . ಕಾಯಿಲೆ . . . . ಕೆಲಸ ಜಾಸ್ತಿ . . . ಸಂಸಾರನೆ ಕಡಿಮೆ . . . ಆ ದೇ ಒಂದು ವರ್ಷದಲ್ಲಿ . . ಎಲ್ಲಾ ಸುಖ . . . ಬೈರಾಗಿ ಸಾಧುವಿಗೆ ಒಂದು ನಸ್ತುದಾನ ಮಾಡಬೇಕು ತಾಯೀ . . . ವಸ್ತುದಾನ . . . !' ಎಂದು ಹೇಳುತ್ತ ಆ ಸಾಧು ಕಮಂಡಲುವನ್ನು ಕೆಳಗೆ ಮಾಡಿದ. ನನ್ನಾಕೆ ಜಾಗೆಯೇ ನಿಂತುಕೊಂಡಳು.

'ಎಲೇ ಇಲೇ, ನಿನ್ನ ಜ್ಯೋತಿಷ್ಯ, ವೈದ್ಯ ನನ್ನಲ್ಲಿ ಟೊಣಪನ ಜಾಗೆ ಬೆಳೆದಿದ್ದಿ. ಕೆಲಸನೆನಾಗಲು ಬರುವದಿಲ್ಲವೆ? ಹೋಗು, ಹೋ . . . !' ಎಂದು ನಾನು ಹೇಳಿದೆ. ಅವನು ನನ್ನ ಕಡೆಗೇ ನೋಡಿದ.

ತಾಯೀ . . .' ಎಂದು ಅವನು ಪುನಃ ಆರಂಭಿಸಿದ.

'ಇಲ್ಲಿಂದ ಜಾರುತ್ತೀಯೋ ಹೇಗೆ?' ಎಂದು ನಾನು ಗದ್ದುಸಿಂತೆ.

'ಸ್ವಾಮಿ! ಕಾಶಿಯಿಂದ ಬಂದ, ಫಂಡಾಪುರಕ್ಕೆ ಹೋಗುತ್ತೇನೆ. ಏನಾದರೂ ಹಿಂದಾಣೆ, ಎರಡಾಣೆ, ...'

'ಬಲ್ಲೆ, ಬಲ್ಲೆ, ಕಾಶಿಯಿಂದ ಫಂಡಾಪುರಕ್ಕೆ ಹೋಗುವೆಯೋ ಕಾರ್ಕಳಕ್ಕೆ ನಡುದಾರಿಯಲ್ಲಿ ಇದೆ. ಹೋಗು ಹೋಗು' ಎಂದೆ.

'ಏನವತ್ತು ಶನಿವಾರ . . . ನಮಿನೆ ಬಾಗಿಲಿಗೆ ಬಂಚವರನ್ನು ಹೀಗೆಯೇ ಕಳುಹಿಸಬಾರದು. ಏನಾದರೂ ಕೊಡಬಾರದೆ?' ಎಂದಳು ನನ್ನಾಕೆ.

'ಕೊಡು, ಕೈಗೆ ಚಿನ್ನದ ಉಂಗುರ ಇದೆಯಲ್ಲ; ಅದನ್ನೇ ಕೊಟ್ಟುಬಿಡು. ಇಲ್ಲವಾದರೆ ರಾತ್ರಿ ಕನ್ನಹಾಕಿ ಅವನಾಗಿ ತಕ್ಕೊಂಡು ಹೋಗುವನು. ಪುಣ್ಯ ಬರುತ್ತದೆ' ಎಂದೆನಾನು.

ನನ್ನ ನನ್ನಾಕೆಯ ಮಾತುಕತೆಯಲ್ಲಿ ತನ್ನ ಕೆಲಸವೇನೂ ಸಾಧಿಸುವ ಹಾಗೆ ಅವನು ತಿಳಿಯಲಿಲ್ಲ. ಆಕೆ ಕೊಟ್ಟ ಒಂದು ಹಿಡಿ ಅಕ್ಕಿಯನ್ನು ತೆಗೆದುಕೊಂಡು, ಅವನು ನನ್ನನ್ನೇ ದುರುಗುರನೆ ನೋಡುತ್ತ ಹೊರಟುಹೋದ.

'ಕೊಡಬೇಕು, ಇವರಿಗೇ—ಶನಿವಾರ ಪಡಿ! ಹೋಗು, ಒಳಗೆ ಹೋಗು' ಎಂದು ಹೇಳಿ ನಾನು ಬರವಣಿಗೆ ಕೆಲಸ ಅಲ್ಲಿಗೇ ನಿಲ್ಲಿಸಿ ಪೇಟೆಗೆ ಬಂದೆ.

* * *

ಅಲ್ಲಿಯೂ ಇದೇ ತರ!

'ಅಲ್ಲಾಮೊ ಅಕ್ಕರ್ . . . ಯಾ ಖುದಾ . . .'

ಫಕೀರನೊಬ್ಬನು ಅಂಗಡಿ ಎದುರು ನಿಂತು ಸೋರೆಕಾಯಿ ಬರುಡೆ ಅಲ್ಲಾಡಿಸುತ್ತಿದ್ದ.

'ಇಲ್ಲ, ಇಲ್ಲ; ಹೋಗು, ಹೋಗು' ಎಂದು ಇಮ್ಮ ಅಂಗಡಿಯವರು ಹೇಳಿದರು. ಅವರು ಸುಧಾರ ವಂಶಜರು.

'ಯೇ ಯೇ ಕಂಜೂಸ್!' ಎಂದು ಫಕೀರ ಕಣ್ಣು ಕೆಂಪಗೆ ಮಾಡಿ ಮುಂದಕ್ಕೆ ನಡೆದ.

'ಕಂಜೂಸ್ ತೂ, ಅಗರ್ ಭೋಲ್ಯಾ ಅಂಬೆ ಫೋಡೀ ದೇತಾ' ಎಂದು ಅಂಗಡಿಯವರು ಹೇಳುತ್ತ ಎದ್ದು ನಿಂತರು. ಅವರಿಗೆ ಸ್ವಲ್ಪ ಸ್ವಲ್ಪ ಹಿಂದುಸ್ಥಾನೀ ಮಾತಾಡಲಿಕ್ಕೆ ಬರುತಿತ್ತು.

'ಹೂಂ, ಹೂಂ' ಎಂದು ಹೇಳಿ ಫಕೀರ—ಒಡಿ ಉದ್ದ, ಎರಡಡಿ ಅಗಲ, ಮೂರಡಿ ದಪ್ಪದ ಆ ಫಕೀರ ಕಣ್ಣು ಕೆಂಪಗೆ ಮಾಡಿ ಮುಂದಿನ ಅಂಗಡಿಗೆ ಹೋದ. ಅಲ್ಲಿ ಹೋಗಿ ಪುನಃ ಸೋರೆಬುರುಡೆ ಅಲ್ಲಾಡಿಸಿದ—ಅಲ್ಲಾ ಹೋ ಅಕ್ಬರ್!'

ಬೀಡಿ ಕಟ್ಟುತ್ತಿದ್ದ ಆ ಅಂಗಡಿಯವರು ಫಕೀರನನ್ನು ನೋಡಿಯೇ ಅವನಿಗೆ ಒಂದು ರುಪ್ಪಿ, ಒಂದು ಬೀಡಿ ಕೊಟ್ಟು ಸಲಾಮ್ ಮಾಡಿದರು.

'ಏನಯ್ಯಾ, ಕಾಸಿನ ಪ್ರಯೋಜನಕ್ಕೂ ಬಾರದ ಇವರಿಗೆ ಭಿಕ್ಷೆ ಕೊಡುವದೆ?' ಎಂದು ಸುಧಾರಕೆ ಅಂಗಡಿಯವರು ಹೇಳಿದರು.

'ಏನು ಮಾಡುವದು, ಅಂಗಡಿ ಬಾಗಿಲಿಗೆ ಬಂದವರನ್ನು ಹಿಂದಕ್ಕೆ ಕಳುಹಿಸಿದರೆ ನರಕ ಲೋಕ ಅಂತೆ, ಗರುಡ ಪುರಾಣದಲ್ಲಿ ಹೇಳಿದೆ. ನನ್ನ ಅಜ್ಜ ಸತ್ತಾಗ ಅದನ್ನು ಓದಿಸಿದ್ದರು.'

'ನಾಕು ನಿನ್ನ ಪುರಾಣ; ಎಷ್ಟು ಹೇಳಿದರೂ ಇಲ್ಲ' ಎಂದು ಸುಧಾರಕರು ತಮ್ಮ ಅಂಗಡಿಗೇ ಬಂದು ಕೂತರು.

* * *

ಮಧ್ಯಾಹ್ನ ಒಂದು ಒಂದೂವರೆ ಘಂಟೆಯ ಸಮಯ ಆಗಿದೆ. ನಾನು ನನ್ನ ಕೆಲಸ ತೀರಿಸಿಕೊಂಡು ಮನೆ ಕಡೆಗೆ ಹೊರಟೆದ್ದೆ. ಧಾರಿಯಲ್ಲಿ ಒಬ್ಬ ಕುಂಟನನ್ನು ಒಂದು ಕೈಗಾಡಿಯಲ್ಲಿ ಕೂತುಕೊಳ್ಳಿಸಿ ಒಬ್ಬ ಕಾರ್ಡಿಗ ಅದನ್ನು ನಡೆಯಿಸುತ್ತ ಭಿಕ್ಷೆ ಬೇಡುತ್ತ ಹೋಗುತಿದ್ದ.

'ಅಯ್ಯಾ! ಅಮ್ಮಾ! ಒಂದು ಕಾಸು..... ಒಂದು ಹಿಡಿ ... ಅಕ್ಕಿ! ಅಮ್ಮಾ . . ಅಣ್ಣಾ..... ಅಪ್ಪಾ!'

ನನ್ನ ಊರ ಅದು ಒಹ! ದೊಡ್ಡ ಮತ್ತ ಉದ್ದ ರಸ್ತೆ. ನುಬ್ಬು ಪೇಜ್ ಇರುವದು ಅಲ್ಲಿಯೆ! ಆದರೆ ರಸ್ತೆಯ ಆ ತುದಿಯಿಂದ ಈ ತುದಿಯ ವರೆಗೆ ಆ ಹೆಳವ ಮತ್ತು ಕುರುಡ ಗಾಡಿ ಒತ್ತಿಕೊಂಡು ಬಂದಿದ್ದರೂ ಅವರ ಹಾರಕು ಮುರುಕಾದ ವಿಂಗಾಡಿ ಬಟ್ಟಲು ಖಾಲಿಯಾಗಿಯೇ ಇದ್ದಿತು. ಇದರಲ್ಲಿ ಒಂದು ಕಾಸು ಅಥವಾ ಒಂದು ಹಿಡಿ ಅಕ್ಕಿ—ಏನೂ ಬಿದ್ದಿರಲಿಲ್ಲ. ಧೂರ ಲಕ್ಷವೂ ಅವರ ಕಡೆ ಹೋಗಿರಲಿಲ್ಲ.

* * *

ಮನೆಗೆ ಬಂದೆ. ಅಲ್ಲಿ ಹೊಲೆಯುರ ದೊಡ್ಡದೊಂದು ಗುಂಪು ಅಂಗಳದಲ್ಲಿ ಕೂಡಿ ಗಲಾಟೆಮಾಡುತ್ತಿದ್ದರು. ಎಲ್ಲರಿಗೂ ಅಕ್ಕಿ ಬೇಕಾಗಿತ್ತು. ಸ್ತ್ರೀಯರು, ಮಕ್ಕಳು, ಪುರುಷರು ಎಲ್ಲರೂ ಬಂದು ಕೂಡಿದ್ದರು. ಆದರೆ ಮಧ್ಯಾಹ್ನದ ಹೊತ್ತು ವಿಂಗಿಹೋಗಿದೆ. ಶನಿವಾರದ ಪಡಿ ಕೊಡಲಿಕ್ಕೆ ಇಲ್ಲ!

ಗುಂಪಿನಲ್ಲೊಬ್ಬ ಹುಡುಗ. ಅವನು ಹರಿಜನ ಪಾಠಶಾಲೆಗೆ ಹೋಗುವ ಹುಡುಗ. ಶಾಲೆಯಲ್ಲಿ ಅವನನ್ನು ಅನೇಕ ಬಾರಿ ಕಂಡಿದ್ದೆ. ಆ ದಿನ ಶಾಲೆ ಇದ್ದರೂ ಅವನು ಮಾತ್ರ ತನ್ನ ಹೆತ್ತವರೊಂದಿಗೆ ಶನಿವಾರದ ಪಡಿ ಬೇಡಲಿಕ್ಕೆ ಬಂದಿದ್ದ.

ನಾನು ಅವನನ್ನು ಕೇಳಿದೆ—'ಕೂಕ್! ಶಾಲೆಗೆ ಹೋಗಲಿಲ್ಲವೊ?'

'ಇಲ್ಲ ಸರೀ!'

'ಯಾಕೆ?'

'ಅಮ್ಮ ಬೇಡ ಅಂದಳು.'

'ಯಾಕೆ?'

'ಪಡಿ ತೀಳಲಿಕ್ಕೆ!'

ನಾನೊಂದು ನಿಟ್ಟುಸಿರು ಬಿಟ್ಟೆ. 'ಹರಿಜನ ಮಕ್ಕಳಿಗೆ ಕಲಿಸುವದು ಎಷ್ಟು ಕಷ್ಟತರ ಎಂಬುದರ ಅನುಭವ ನನಗೂ ಕೊಂಚ ಇದ್ದಿತು. ಶನಿವಾರದ ಪಡಿ ಎಂದು ಹರಿಜನ ಮಕ್ಕಳು ವಾರದಲ್ಲಿ ಒಂದು ದಿನ ಭಿಕ್ಷೆಗೆ ಹೋಗುವದರಿಂದ, ಉಪಾಧ್ಯಾಯರ ವಾರದ ಹಿಂದಿನ ಆರು ದಿನಗಳ ಪರಿಶ್ರಮವೆಲ್ಲ—ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುತ್ತಿತ್ತು. ನಾವು ಗಟ್ಟಿ ಮುಟ್ಟಿನ ಮೈಗಳ್ಳರಿಗೆ, ಅಜ್ಜಾಸು ಜನರಿಗೆ ಶನಿವಾರ ಪಡಿ, ದಾನಧರ್ಮ ಮಾಡಿ ಪುಣ್ಯ ಕಟ್ಟಿಕೊಳ್ಳುವದೆ, ಅಥವಾ ಅವರನ್ನು ಜೂವ ಕೆಲಸಕ್ಕೂ ಬಾರದ ಭಿಕ್ಷುಕರನ್ನಾಗಿ ಮಾಡಿ ಪಾಪ ಕಟ್ಟಿಕೊಳ್ಳುವದೆ, ಎಂಬ ಪ್ರಶ್ನೆಯು ಪನ್ನನ್ನು ಕಾಡದಿರಲಿಲ್ಲ. ಆ ದಿನ ನನಗೆ ಏನೂ ಬರೆಯುವ ಲಾಗಲಿಲ್ಲ.

* * *

ಮರುದಿನ ಒಂದು ಸಾರ್ವಜನಿಕ ಸಭೆ ಕೂಡಿತು. ಹರಿಜನರ, ನಮ್ಮವರ್ಗದವರ ಕಾರ್ಯಾಧಿದ ಆಲೋಚನೆಯ ಸಭೆಯಲ್ಲಿ ನಡೆಯಿತು. ಒಬ್ಬ ಮಹಾಶಯರು—'ಮಹಾಶಯರೆ! ಈ ಜನರನ್ನು ಉದ್ಧರಿಸುವ ನಮ್ಮ ಕಾರ್ಯಭಾರವು ಗುರುತರವಾಗಿದೆ. ಪುಣ್ಯ ಕಟ್ಟಿಕೊಳ್ಳುವದೆಂಬ ಅಂಧಶ್ರದ್ಧೆಗೆ ಜಲಿಯಾಗಿ ನಾವು ಹರಿಜನ ಮೊದಲಾದವರಿಗೆ ಭಿಕ್ಷೆ, ಅನ್ನಹಾಕಿ ಶನಿವಾರದ ಪಡಿ ಅಕ್ಕಿ ಕೊಟ್ಟು, ಅವರಿಗೆ ಭಿಕ್ಷಾವೃತ್ತಿಯನ್ನು ಕಲಿಸಿಕೊಡುತ್ತೇವೆ. ಅವರನ್ನು ಎರಡು ಕಾಲಿನ ಮೃಗಳಳನ್ನಾಗಿ ಮಾಡುತ್ತೇವೆ. ಎಷ್ಟರ ತನಕ ನಾವು ದಾನಧರ್ಮ ಮಾಡಬೇಕಾದ ಉತ್ತಮ ರೀತಿ ಕ್ರಮಗಳನ್ನು ತಿಳಿಕೊಳ್ಳುವದಿಲ್ಲವೋ, ಅಷ್ಟರ ತನಕ ಸಾತ್ವಾವತ್ರ ವಿಚಾರ ಮಾಡದೆ ನಾವು ಮಾಡಿದ ದಾನಧರ್ಮದ ಫಲವು ನಾವೆ—ಮಹಾನಾಪ ಅಲ್ಲದೆ ಮತ್ತೇನೂ ಆಗಿರುವುದಿಲ್ಲ. ನಾವು ಕೊಡುವ ಶನಿವಾರದ ಪಡಿ, ಭಿಕ್ಷುಕರ ಜನ್ಮ, ಸಾಧು ಬೈರಾಗಿಗಳ ರುಪ್ಪಿ ದುಗ್ಗಾಣಿಗಳನ್ನು, ಜನೋಪಕಾರಿ ಸಂಸ್ಥೆ ಸಂಸ್ಥೆಗಳಿಗೆ ಕೊಟ್ಟರೆ, ಭಿಕ್ಷಾವೃತ್ತಿಯು ನಿಂತು ಹೋಗುವದು. ನಮ್ಮ ದೇಶದ ಲಕ್ಷಾಂತರ ಸಾಧು-ಬೈರಾಗಿಗಳ ಶರೀರ ವರಶ್ರಮದ ಸದುಪಯೋಗವಾಗಿ ದೇಶದ ಸಂಪದಭಿವೃದ್ಧಿಯಾಗುವದು. ಕಾರಾಗೃಹ ಖಾತೆಗಳು ನೊದಲಾದ ವಿಕಲಾಂಗಿಗಳಿಗೂ, ದುರ್ಬಲ ಅನಾಥರಿಗೂ ಅಶ್ರಯವೂ ರಕ್ಷಣೆಯೂ ದೊರೆಯುವುದು' ಎಂದರು.

ನನಗೆ ಮಹಾಶಯರ ಮಾತು ಒಪ್ಪಿತು. ಒಂದು ನನ್ನಾಕೆಗೆ ಹೇಳಿದೆ. ಅವಳೂ ನನ್ನ ಮಾತುಗಳನ್ನು ಒಪ್ಪಿದಳು. ಆದರೆ ಶನಿವಾರ ಪಡಿ ಕೊಡದೆ ಇದ್ದರೆ ಮಾತ್ರ ಪಾಪ ತಟ್ಟುವ ದೆಂದು ಹೆದರುತ್ತಾಳೆ.

ಸತ್ಪಾತ್ರ ದಾನದಿಂದ ಪರೋಪಕಾರ ನಿರತವಾದ ಅಂಧ ಒಂದು ಸೇವಾಸಂಘ, ಅಥವಾ ಅನಾಥಾಲಯವನ್ನು ನೋಡಿದರೆ ಇವಳ ಈ ಹೆದರಿಕೆಯು ದೂರವಾಗುವದು ಖಂಡಿತ. ಅಂಥ ಯಾವ ಸಂಸ್ಥೆಗೆ ಅವಳನ್ನು ಕರಕೊಂಡು ಹೋಗಬಹುದು—ಎಂದಿಷ್ಟೇ ಅಲೋಚಿಸುತ್ತಿದ್ದೇನೆ.

ಲಕ್ಸ್ ಟಾಯಿಲೆಟ್ ಸಾಬೂನಿನ ಪರಿಮಳ ನೊರೆಯು ನಿಮ್ಮ ಚರ್ಮದನ್ನೇಲೆ ಬಹು ಕಾಲ ಸುವಾಸನೆಯನ್ನು ಬೀರುತ್ತಿರುತ್ತದೆ.



ಲಕ್ಸ್ ಟಾಯಿಲೆಟ್ ಸಾಬೂನಿನ ಮನಮೋಹಕವಾದ ಸುವಾಸನೆಯು ಸ್ನಾನಮಾಡಿದಪ್ಪಣದ ಅಕೀಲ ಘಂಟೆಗಳ ವರೆಗೂ ಇರುವದಲ್ಲದೆ, ನಿಮ್ಮ ಚರ್ಮವನ್ನು ಬೆಳ್ಳಪಡಿಸುವುದು, ಕೂದಲಿಗೆಂದಂತೆ ಮೈಕಳ್ಳಿಯಾಗಿ ಹಾಲ್ಬಿರುತ್ತದೆ. ಇಷ್ಟಲ್ಲದೆ ಲಕ್ಸ್ ಟಾಯಿಲೆಟ್ ಸಾಬೂನಿನಲ್ಲಿರುವ ವಿಶೇಷ ಸಮ್ಮಾರವು ಪೆಟ್ಟಿಗೆ ತೊರೆಯುವುದಿಲ್ಲ. ಈ ಸೊರೆಯು ಚರ್ಮದ ರಂಧ್ರಗಳಲ್ಲಿ ಬಿದ್ದು ಕೊಳೆಯನ್ನೆಲ್ಲ ತೆಗೆದು ಹಾಕಿ ಚರ್ಮವನ್ನು ಮೃದುವಾಗಿಸುತ್ತದೆ. ಸರ್ವದಾ ಉಪಯೋಗಿಸಿ, ಇದರಿಂದುಂಟಾಗುವ ಸಾಸ್ಥ್ಯಕೋಮಲತೆಯನ್ನು ಅನುಭವಿಸಿ ಪತ್ರಕ್ಕಿಂದಲೇ ಹೊಂದಿ ಆನಂದಪಡಿರಿ.

ಲಕ್ಸ್ ಟಾಯಿಲೆಟ್ ಸಾಬೂನು

ಇದು ಲಕ್ಸ್ ಟಾಯಿಲೆಟ್ ಸಾಬೂನಿನ ಪೆಟ್ಟಿಗೆ. ಇದರಲ್ಲಿ ಒಂದು ಸಾಬೂನು ಇರುವದು. ಇದರ ಮೇಲೆ ಲಕ್ಸ್ ಎಂಬ ಪದವು ಕೆಂಪು ಅಕ್ಷರಗಳಲ್ಲಿ ಬರೆದಿರುವದು.

LEVER BROTHERS (INDIA) LIMITED

S. U. N. & Co.,

Silk Merchants,

Chaukhamba, BENARES CITY.

ಈಗಿನ ತೆರಹ(ಕಾತಿ) ಬೆನಾರೆಸ್ ಶೀರೆ ಕಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕೃಯ ಕಾಲವಾ ಸುಲಭ. ಖಾತ್ರಿ ಮೊಲು. 18 ಮೊಳದ 2½ ಜಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18ಮೊಳ ಸಣ್ಣಬುಟ ಶೀರೆಗಳು ರೂ. 85ರಿಂದ ರೂ. 55. ವದಲು ಸೊದಾ ಶೀರೆ 18 ಮೊಳ ರೂ. 32ರಿಂದ. ರೂ. 65. ಉದ್ದ ಮೊಳ 16, ಅಗಲ 2½ ರೂ. 20 ರಿಂದ 35ರ ವರೆಗೆ. ಬೇರೆ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾಗುತ್ತದೆ.

ವಿಳಾಸ—

ಲಕ್ಷ್ಮಣ ನಾರಾಯಣಾಚಾರ್ಯ,

ಚೌಕಾಂಬಾ, ಬೆನಾರೆಸ್ ಸಿಟಿ.

ಜರ್ಮನಿ
ತಾನು ಸೊಂದುದಕ್ಕೆ ಪ್ರತಿಹಿಂಸಾತುರತೆ!

[ಜರ್ಮನಿಯ ಗ್ರಂಥಕರ್ತರಲ್ಲಿ ಮೊದಲನೆಯವನು ಎಮಿಲ್ ಲುಡ್‌ವಿಗ್. ಸಂಡೇ ಕ್ರೊನಿಕಲ್ ಪತ್ರಿಕೆ (ಲಂಡನ್) ಯಲ್ಲಿ ಆತನು ಬರೆದಿರುವ ಲೇಖನದಿಂದ ಸಂಗ್ರಹಿಸಿದ ಅಭಿಪ್ರಾಯಗಳಿವು.]

ಕೃತಘ್ನತೆಯಲ್ಲದಿದ್ದರೆ, ಸೈನ್ಯಕ್ಷೇತ್ರದಲ್ಲಿ ಸೋತಿರುವ ರಾಷ್ಟ್ರಗಳಲ್ಲಿ ಅಳುತ್ತಿದ್ದ ಜರ್ಮನಿಯಲ್ಲಿ ಇದು ನೆರೆಗೆ ನಿಷ್ಠವಾಗಿ ಕ್ಯಾಂತಿಯುಂಟಾದು ದಿಲ್ಲ. ಸಾಮಾನ್ಯನಾಗಿ ಜರ್ಮನರು ಅಳಿಕ ಮೇಲ್ ಸೈನ್ಯವೆರಡನ್ನೂ ಅಧಿಕಾರಗಳಾಗಿರುವ ವರಿಗೊಪ್ಪಿಸಿ ತಾವು ನಿಮ್ಮದಿಯಾಗಿ ವಾಳೆಕ್ಕ ವೆರು. ಪೀಗೆ ಅಳುವ ಅಧಿಕಾರಗಳ ಕಲೆಗಳೇ ಬೆಳೆದುವು, ಮಿದುಳು ಸಂಕೋಚನವಾಗುತ್ತ ಬಂತು. ಜನರಲ್ಲಿ ಸ್ವಾತಂತ್ರ್ಯದ ಮಾತು ಮರೆ ಯಿತು, ಯೋಗ್ಯತೆ ಮತ್ತು ವ್ಯಾಪಾರ ಹೆಚ್ಚಿ ದುವು.

"ನನ್ನ ಆಸ್ತಿಯೆಲ್ಲ ನನ್ನ ಕುಮಾರರಲ್ಲಿ ಒಕ್ಕ ನಿವಣನಿಗೆ; ನಿರಡನೆಯವನು ಸೈನ್ಯಕ್ಕೆ ದಾನು; ಯಾವುದಕ್ಕೂ ಆಗದವನು ನರಿಪಾನ್ಯ ಗಳ ಇಲಾಖೆ ಸೇರುವನು" ಎಂದೇ ಒಬ್ಬ ದೊಡ್ಡಾಳು ನುಡಿದಿದ್ದನು!

ಹೀಗಾಗಿ ಆಳುವುದು ಎಂದರೆ ಲೇಖನಿ ಯಿಂದಲ್ಲ, ಕತ್ತಿಯಿಂದ ಎಂದೇ ಜರ್ಮನಿಗೆ ತಿಳ್ಪಣ. ಇದು ಫ್ರೆಂಚರ ಆದರ್ಶಗಳಿಗೆ ತೀರ ವಿರುದ್ಧವಾಗಿದೆ.

ಜರ್ಮನ್–ಫ್ರೆಂಚರಲ್ಲಿ ಒಬ್ಬರ ಆದರ್ಶ ಗಳು ಮತ್ತೊಬ್ಬನದಲ್ಲ, 'ಹೀಗಾಗಿ ಕಾದಾ ಟವು ಶಾಶ್ವತವಾಗಿ ನಿಂತಿದೆ. ಯಾವುದು ಬಲ ಹೀನತೆಗೆ ಕಾರಣವೊ, ಅದೇ ಮತ್ತೆರ್ಡ್ಬನಲ್ಲಿ ಸ್ಥಾಬಲ್ಯಕ್ಕೆ ಕಾರಣ. ಫ್ರೆಂಚರ ವಿನಯಕ್ಕೂ ಜರ್ಮರ ಧೂರ್ತತೆಗೂ ಗುಂಟು ಬೀಳಲಾರದು.

ಫ್ರಾನ್ಸಿನಲ್ಲಿ, ತನ್ನ ಹೆಸರನ್ನು ಸಹ ಮನೆ ಯ ಎದುರು ಬರೆದಿಟ್ಟರೆ ಹಲವರಿಗಾಗದು. ಜರ್ಮನಿಯಲ್ಲಿ ಪ್ರತಿಯೊಂದಕ್ಕೂ ಒಂದು ಮೃನ ಸ್ಥೆ ಮಾಡುವವರೇ ಪ್ರತ್ಯೇಕ.

ಉತ್ತಮ ಜಾಣರಾದ ನೆರೆಯವರು ಫ್ರೆಂಚ್. ಜರ್ಮನರುಗಳೊಳಗೆ ನಿಮ್ಮದಿಯಿದ್ದೀತೆಂದು ನಂಬಿದೆವು. ಆದರೆ, ಇವರೊಳಗೆ ಒಂದು ಜನಾಂಗವು ಇತ್ತೀಚೆಯದು; ಕಷ್ಟ ಸಹಿಸಿ ಬಲ್ಲುದು–ಹೀಗಾಗಿ ನಿಮ್ಮಿಗೆ ಅಸ್ಪದವಾಗಲಿಲ್ಲ..

೩೦೦ ವರ್ಷಗಳ ತನಕ ನಿರಂಕುಶರ ಕೈಯಲ್ಲೇ ಜರ್ಮನಿ ಇತ್ತು. ಆಗ, ಜೀವನವೆಂದರೆ,–ದುಸ್ತು, ಕವಾಯಿತು, ಬಾವುಟಾಗಳು, ಮೆರವಣಿಗೆಗಳು ಇವ್ಹೇ ಎಂದರ್ಥವಾಗಿ ಬೆಳೆಯಿತು.

೩೦೦ ವರ್ಷಗಳಿಂದಲೂ ಬಲಶಾಲಿಯೇ ವಿಜಯಿಯೆಂದು ಜರ್ಮನರು ಕಲಿತಿರುವರು. ಮನಸ್ಸಿಗಿಂತ ಕೋವಿಯೇ ಮಿಗಿಲೆಂದು ಅವರು ತಿಳಿದಿರುವರು.

ಈಗ? ವ್ರತಿ ಜರ್ಮನ್ ಬಾಲಕನೂ ಬಾಲಿಕೆಯೂ ಶಾಲೆಯಲ್ಲಿ ಕಲಿತಿರುವುದಿಂದರೆ, ಕಳೆದ ಯುದ್ಧವನ್ನು ಜರ್ಮನಿಯು ಪ್ರಾರಂಭಿಸಿ ದ್ದು ಅಲ್ಲ, ಜರ್ಮನಿಯು ಸೋತುದೂ ಇಲ್ಲ ಎಂದು. ಯುದ್ಧದಲ್ಲಿ ನಿಗುವಂತಿದ್ದಾಗಲೇ, ಯಿಹೂದ್ಯರೂ ಸೋಶಲಿಸ್ಟರೂ ತಮ್ಮನ್ನು ವಂ ಚಿಸಿದರೆಂದು ಇದೀ ಜರ್ಮನ್ ಜನಾಂಗವು ಈಗ ಶಾಲೆಗಳಿಂದ ಕಲಿತುಕೊಂಡಿದೆ.

ನಾಲ್ಕು ವರ್ಷ ಯುದ್ಧದಲ್ಲಿ ಸ್ವರಕ್ಷಣೆ ಮಾಡಿಕೊಂಡುದಕ್ಕೆ ಜಗತ್ತು ಜರ್ಮನಿಯನ್ನು ಕೊಂಡಾಡುತ್ತಿದೆ; ಜರ್ಮನಿಯು ವಿಜ್ಞಾನದಲ್ಲೂ ಕೈಗಾರಿಕೆಯಲ್ಲೂ ಅದ್ವಿತಿಯವಾಗಿದೆ ಎಂದು ಪ್ರನೆಂಚರೇ ಶ್ಲಾಘಿಸುತ್ತಿದ್ದರೂ ಜರ್ಮನಿಗೆ ಅದರಿಂದ ತೃಪ್ತಿಯಿಲ್ಲ.

ಗೌರವ ಎಂದರೆ, ಯುದ್ಧಮಾಡಿ ಜಯ ಹೊಂದಿದರೇ ಹೊರತು, ಇತರ ವಿಧಾನಗಳಿಂ ದಲ್ಲ ಎಂದೇ ಜರ್ಮನರ ವಿಶ್ವಾಸ.

ಹಾಗೆ ಜಯಹೊಂದುದಾದರೂ, ನಾರಿಸಿ ನಲ್ಲಿ ಹೊಂದಬೇಕು! ವಾರ್ಸೇಲ್ಸ್ ಒಪ್ಪಂದದ ಶರ್ತಗಳಿಂದ ಜರ್ಮನಿಗೆ ಅವಮಾನವಾದವರ ರಾರು? ಫ್ರೆಂಚರು! ಅದೇ ಕಾರಣ.

ಫ್ರೆಂಚೆಂಟ ವಿಲ್ಲನನು ಬಂದಿರದಿದ್ದಲ್ಲಿ, ಜರ್ಮನಿಗೆ ಇತಿಹಾಸದಲ್ಲಿ ಪವಿತ್ರವಾದ ರೈನ್ ನದಿಯ ದಡವನ್ನೆ ಫ್ರೆಂಚರು ಅಕ್ರಮಿಸುತ್ತಿ ರೆಂಬುದನ್ನು ಜಗುನಿ ಮರೆತಿದೆ.

ದಾನೆಲ್ಸ್‌ದಲ್ಲಾದ ಒಪ್ಪಂದದ ದೃಶ್ಯ ವನ್ನು ವ್ರತಿಯೊಂದೂ ಜರ್ಮನ ಮಗು ಸಾಯುವ ತನಕ ಮರೆಯಲಾರದಂತೆ ಅದನ್ನು ಅದರ ಮನಸ್ಸಿನಲ್ಲಿ ಕೊರೆದಿಟ್ಟಿರುವರು.

ಈ ದೃಶ್ಯದ ಫಲವಾಗಿ, ಜರ್ಮನರಲ್ಲಿ ತಾವು ಫ್ರೆಂಚರಿಗೆ ಕಡಮೆ ಎಂಬಭಿಪ್ರಾಯ ವಾಗಿದೆ. ಆ ಅಭಿಪ್ರಾಯವು ಮಾಯವಾಗುವ ಹಾಗೆ,–ವಾರ್ಸೇಲ್ಸದಲ್ಲಿನ ಅದೇ ಸ್ಥಾನದಲ್ಲಿ ಹಿಂದೆ ಬಿಸ್ಮಾರ್ಕ್‌ನು ಜರ್ಮನ್ ಸಾಮ್ರಾಜ್ಯ ವನ್ನು ಫ್ರೆಂಚರಿಂದ ಮೇಲೆ ಸ್ಥಾಪನೆಮಾಡಿದ್ದಿ ರುತ್ತ–ಸಾಕಷ್ಟು ಪ್ರಯತ್ನಿಸಬೇಕಾಗಿದೆ. ಅದೇ ಸ್ಥಾನದಲ್ಲಿ 'ಹುಲಿ'ಕ್ಲೆಮೆನ್ಸ್ಯೊ–ಳಿ ವರ್ಷಗಳ ತರುವಾಯ ನಿಂತು—ಜರ್ಮನರನ್ನು ಆಯಧ ಹೀನರನ್ನಾಗಿ ಮಾಡುವ ಒಪ್ಪಂದಕ್ಕೆ ಒತ್ತಾಯ ಪೂರ್ವಕ ಸಹಿಮಾಡಿಸಿದನು!

ಮರೆಯಲಾಗದಂತೆ ಮನದೊಳಗೆ ನಾಟಿ ಸಿರುವ ಈ ದೃಶ್ಯವೇ ಮುಂದಣ ಯುದ್ಧಗಳನ್ನು ಪ್ರೇರೇಪಿಸುವುದಾಗಿದೆ.

ಹಾಗೆಂದು ಸಂಯಾಯತಿಯಿಂದ ಗೆದ್ದ ಜಯವು ಜಯವಲ್ಲ, ಯುದ್ಧಮುಖೇನ ಗೆದ್ದ ರೇ ಜಯ—ಎಂದೂ ಭೋಧಿಸಲಾಗುತ್ತಿದೆ.

ಟ್ರಿಗನೀಕಾವನ್ನು ಜರ್ಮನಿಗೆ ಕೊಡಿರಿ. ನಾಳಿಗೇ ಎಲ್ಲ ಹಿಂದಣ ವಸಾಹತುಗಳಿಗಾಗಿ ಅವರು ಯುದ್ಧಮಾಡುವರು.

ಡೆಸ್ಸಿಯಿಕನ್ನು ಕೊಡಿರಿ; ನಾಳಿಗೇ ಪೊಲೆಂ ದಿನ ಹಿಂದಣ ಅಂಶಕ್ಕಾಗಿ ಯುದ್ಧಮಾಡುವರು.

ಹೊಲ್‌ಸ್ಟೀನ್‌ನ್ನು ಕೊಡಿರಿ; ನಾಳಿಗೇ ಹೊಲ್ಲೆಂಡು ಬೆಲ್ಜಿಯಮುಗಳ ಕುಂಡಿಗಾಗಿ ಖಂಡಿತ ಯುದ್ಧವಾಗುವುದು.

ಲೋರೆನೆಲ್ಲ ಮತ್ಸರದಿಂದ ತಮ್ಮನ್ನು ಮುರಿದಿರುವರಾದ ಕಾರಣ, ವ್ರತಿಹಿಂಸೆಯಿಂದ ಎಲ್ಲವನ್ನೂ ಗೆಲ್ಲಬೇಕಾಗಿ ಅವರ ಇಚ್ಛೆ.

ಅಧಿಕಾರವುಳ್ಳವರು ಏನೆನ್ನುವರೋ ಅವ ರನ್ನು ಹಿಂಬಾಲಿಸುವುದು ಜರ್ಮನ ಅಭ್ಯಾಸವು.

ವಿದ್ಯಾರ್ಥಿಗಳು ತಾವೂ ಸಿಪಾಯರಂತೆ ದುಸ್ತು ಹಾಕಲು ಆತುರವಡುವರು. ವರಸ್ಪರ ಹೊಡೆದಾಡಿಕೊಂಡು, ಮುಖವೆಲ್ಲ ಸೀಳಿದಂತಿ ದ್ದರೆ, ಅವನೇ ಮೆಹಾವೀರುವನೆಂದೂ ನಂಬು ವರು. ಲೆಫ್ಟಿನೆಂಟನೆಂತಾದ್ಪೆ,–ಯುವತಿಯರಿಗೆ ಜೀವನವೇ ಇದು ಆಲ್ಲೋಲವಾಗುವುದು.

ಹಿಟ್ಲರನು ಕೈಸರನ ಮೋರೆಯನೇ – ಅವನ ಸೀಪಿ, ಭಾಷಣಶಕ್ತಿಯು ಕೈಸರನನೇ. ಹಿಟ್ಲರನ ಚಿತ್ರದ ಮೇಲೆ, ಕೈಸರನ ಮಿಸೆ ತಿದ್ದಿ ದ್ದರೇ ಇದು ತಿದಿದು ಬಂದೀತು.

ನರರೋಗಪೀಡಿತರ ಮಾತುಗಳಿಂದ ಜರ್ಮನರು ಸದಾ ಮೋಸಹೋದವರೆಂದು ಇತಿ ಹಾಸದಲ್ಲಿ ವ್ಯಕ್ತವಾಗದಿರದು

ಕೆಲವು ವಿಚಿತ್ರ ವಿಷಯಗಳನ್ನು: ಸ್ವಾಸ್ ಬರ್ಗ ಬೀಡನೆಂದು ಹಿಟ್ಲರನು ಸಾರುತ್ತಾನಷ್ಟೆ. ಶಾಲಾ ಪುಸ್ತಕಗಳಲ್ಲಿ ಹಿಂದೆ ಸ್ವಾಸ್‌ಬರ್ಗ ಜರ್ಮನರದ್ದಾಗಿತ್ತು, ಮುಂದೆಯೂ ಜಗ ತ್ತಿನ್ನದು ಎಂದು ಆತನೇ ಪಾಠ ಬರೆಯಿಸಿದ್ದಾನೆ!

ಫ್ರೆಂಚರೊಡನೆ ತನಗಿನ್ನು ವಿವಾದವಿ ವೆಂದು ತಿಳಿಸುವ ಹಿಟ್ಲರನೇ, ಶಾಲಾಪುಸ್ತ ಗಳಲ್ಲಿ–ಫ್ರೆಂಚರು ಆರೆನಿಗ್ಸೋಜನಾಂಗ ವಂಚ ಬರೆದ ಪುಸ್ತಕವನ್ನು ಒತ್ತಾಯದಿಂದ ಆಧೀನ ಗಳೂ ಶಾಲೆಗಳೂ ಯುವಜರ್ಮನಿಗಳ ಕೊಂಡುಕೊಳ್ಳಬೇಕೆಂದು ಅವನೇ ಆಜ್ಞೆ ಕೊಟ್ಟಿರುವನು.

ಜರ್ಮನ ಜನತೆ ಇತರರನ್ನು ಕೊ ಲಿಚ್ಚಿಸುವುದಿಲ್ಲ; ಆದರೆ ಸರಕಾರವು ಯಾರನ ಕೊಂದರೂ ಜನತೆ ಗುಣುಗುಟ್ಟುತ್ತಿಲ್ಲ, ಸಂತೆ ಷವೇ.

ಬ್ರಿಟನ್ನು ಫ್ರಾನ್ಸ್ನ ಅಮೇರಿಕಗಳು ಒ ದಾಗಿ ಒಂದೇ ಸ್ವರದಲ್ಲಿ ಖಂಡಿತ ನುಡಿದಿ ಜರ್ಮನರು ಹೆಜ್ಜೆ ಯುಂದಿಡದು. ಆದ ಬ್ರಿಟನ್ನು ತನ್ನ ವಕ್ಷವಿದೆ ಎಂದೂ, ಅಥವ ತಟಸ್ಥವಾಗಿದೆಯೆಂದೂ ಜರ್ಮನ್ ನಂಬಿ ವನು.

ಜರ್ಮನರಲ್ಲಿ ಕೃಶ್ತಿಯಿಲ್ಲದವರು ಕೋ ಗಟ್ಟಲೆ ಇರುವರು. ಬೆಳೆ ಬಂದೆ, ಬೆಣ್ಣೆ ಕಡೆವೆ ಮಜೂರಿ ಕಡಮೆ, ಭಾಷಣ ಸ್ವಾತಂತ್ರ್ಯವಿ ಎಂದು ಅವರೆನ್ನುವರು. ಆದರೂ ಅವ ಕ್ಯಾಂತಿಕಾರರಲ್ಲ.

ಮೂರು ವರ್ಷಗಳ ಹಿಂದೆ, ಹಿಟ್ಲರನನ್ನ ಸೈನ್ಯಾಧ್ಯಕ್ಷರು ಓಡಿಸುವರೆಂದು ಹೇಳುತ್ತಿದ್ದರ ಆದರೆ, ಸ್ವನ್ಪಯೋಜನಕ್ಕೆ ಒದಗುವುದಾದ ಸೈನ್ಯಾಧ್ಯಕ್ಷರು ಯಾವ ಅಧಿಕಾರಗಳಿಗೂ ತ ಬಾಗುವರು. ಮಹಾಯುದ್ಧದ ಕಾಲದ ಕೈಸರನಿಗಾಗಿ ಪ್ರಾಣಕೊಟ್ಟವರು ಸೈನ್ಯಾಧ್ಯ ರಿಮ್ಮು ಮುಂದೆ! ಮೂವರೇ! ಅಭ್ಯಾ ದವರು.

ಸ್ವಪ್ರಯೋಜನವಿಲ್ಲದಿದ್ದಲ್ಲಿ, –ನಾ ನಾಯಕನ ಜತೆ ನಿಂತಾರೇ? ಹೀಗಿರುವು ರಿಂದ, ಹಿಟ್ಲರನ್ನ ಸದಿಬಡೆವುದೆಂದರೆ, ಅವ ಸೈನ್ಯಾಧ್ಯಕ್ಷರು–ಅವನಪ್ಪಲೇ ಹೊರತು ಕೊಡ ಸಿಸ್ಸೆರಲ್ಲಿ, ವ್ಯಕ್ತಿಸತ್ತಾವಾದಿಗಳು ಅಲ್ಲ.

ಮಜೂರರು ವೃದಿಕರು ಮಾತ್ರ–ಕೆಲವ ಮಿ ಲ್ಲಿ ಯ — ಕ್ಯಾಂತಿಕಾರಣರಾಗಬಹುದ ಆದರೆ, ಈಗ ಕ್ಯಾಂತಿಯನ್ನುಟುಮಾಡು ಇವರು ಸ್ವಬಲರಾಗಿಲ್ಲ. ಆದರೆ, ಸೈಂ ಯುದ್ಧವಾಗುವಾಗ ಗಣಿಗಳಲ್ಲಿದ್ದು ತಲೂ ಸ್ವಬಲವಾಗಿ ತೋರಬಹುದಾಗಿರು ಜರ್ಮನಿಯ ಜನತೆಯೇ ಇವರು. ಅಗ್ನಿತಾ ಜರ್ಮನಿ ಆಭ್ಯುದಯಕ್ಕೆ ಬಂದೀತು. ನಿ ವಾದ ಜರ್ಮನಿ ಅದು.

ಜೆಕ್ಕೊಸ್ಲೊವಾಕಿಯದ ಗ್ರಾಮಗಳಿಂ ಹಿಟ್ಲರ ಅಧಿಷ್ಠಾನವನ್ನು ಕುರಿತಾಗಿ ಮಾತುಗಳು.

ನ್ಯೂಯೋರ್ಕ್ ಟೈಮ್ಸ್ ಪತ್ರಿಕೆಯಿಂದ

ಪ್ರತಿಯೊಂದು ಗ್ರಾಮವಾಠಶಾಲೆಯ ಬೋರ್ಡಿನ ಮೇಲೆ–ನಾವೆಂದೂ ಶರಣಾ ಗವೆವು—ಎಂಬ ವಾಕ್ಯವನ್ನು ಬರೆದೇ ಇಟ್ಟ ವರು. ಪ್ರತಿಗ್ರಾಮದಲ್ಲಿ ಪ್ರಾಣಮುನ್ನಾಗಿರ ಕಟ್ಟಡವೇ ಗ್ರಾಮವಾಠಶಾಲೆ: ಅಮೇರಿ ಗ್ರಾಮಶಾಲೆಗೂ ಮಿಗಿಲಾಗಿಯೇ ಇದೆ. ವಿದ್ಯಾರ್ಥಿಗಳು ವಿಮಾನಯುದ್ಧಕ್ಕೂ ಸಿದ್ಧ ಯುದ್ಧಕಾಲದಲ್ಲಿ ಆತ್ಮರಕ್ಷಣೆಯನ್ನೂ ತಿರುವರು. ಹದಿನೈದೂರು ಶತಮಾನಗಳಿಂದ ಇವರೆಲ್ಲ ಬೇಸಾಯಿಗಳು: ೧೬ನೇ ಶತಮ ದಲ್ಲಿ ಇವರ ಸ್ವಾತಂತ್ರ್ಯವು ಮಣ್ಣುಪಾ ಯಿತು. ಮೂರು ಶತಮಾನ ಇವರು ಯ ದ ಪಂಗಾಮಿಗಳಾದರು. ೨೦ ವ ಗಳಿಂದ ಮಾತ್ರ ಇವರು ಸ್ವತಂತ್ರರು. ಕೈತ ಸರಾಸರಿ ೧೫ ಎಕ್ರೆ ಸ್ಥಳವಿದೆ. ಇವನು ಮೂಡದ ಋತುವಿನಲ್ಲಿ ಕೈಕೆಲಸದಲ್ಲೂ ವಿವ ಗ್ರಾಮದಲ್ಲಿ ಸಲೀಲ ಮತ್ತು ಕುಗ್ರಾಡಿ ಇಬ್ಬ ಅಧಿಕಾರಿಗಳು. ಗ್ರಾಮದಲ್ಲೆಲ್ಲ ಶಾಸನಕ್ಕೆ ಯಾಗಿ ನಡೆಯುತ್ತದೆ. ನಾವು ಒಟ್ಟಿಯನ ಶರಣಾಗತರಾಗೆವು ಎಂದೇ ಅವರೆನ್ನುವರು.



ರಕ್ತಶುದ್ಧಿ ದ್ರಾವಕ

ಇದು ರಕ್ತಹೀನತೆ ಮಲಬದ್ಧತೆ, ಅಜೀರ್ಣ, ಕೀಲುನೋವು, ಸೋಮಾರಿತನ ಮೇಹ ವ್ರಣಗಳು, ಸುಖ ಸಂಕಟಗಳು, ನಿಕ್ಕಟ್ಟಿ, ಹೊಟ್ಟೆಯಲ್ಲಿ ಉರಿ ಮುಂತಾದ ವ್ಯಾಧಿಗಳನ್ನು ನಿವಾರಿಸಿ ಶರೀರಕ್ಕೆ ಕಾಂತಿಯನ್ನೂ ಮುಖಕ್ಕೆ ತೇಜಸ್ಸನ್ನೂ ಉಂಟುಮಾಡುತ್ತದೆ. ಈ ಉತ್ತಮ ವಾದ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿರುತ್ತಾರೆ.



ಸರ್ವ ಜ್ವರ ನಿವಾರಿಣಿ

ಆಹಾರ, ವಿಹಾರ, ಯಕ್ತು ಭೇದ ದೋಷಗಳಿಂದ ಅನ್ಯಾತಯದಲಿ ಕ್ರಿಮಿಕೀಟಗಳು ಸೇರಿ, ಹಲವು ವಿಧವಾದ ಜ್ವರಗಳು ಸಂಭವಿಸುತ್ತಿವೆ. ವಾತ ಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಜ್ವರಗಳು, ಹೊಟ್ಟೆಯಲ್ಲಿ ಪ್ಲೀಹವೆಂಬ ಜ್ವರದ ಗಡ್ಡೆ ಇವುಗಳನ್ನು ನಿವಾರಿಸುತ್ತದೆ. ಈ ಔಷಧವನ್ನು ಚಿಕ್ಕ ಮಕ್ಕಳಿಗೂ ಸಹ ಕೊಡಬಹುದು.

ಕೇಸರಿ ಕುಟೀರಂ, ಮದ್ರಾಸು.

ಇಂಗ್ಲಂಡಿನಲ್ಲಿ ಅಂಧಕಾರ ತುಂಬಿದೆ!

ಸೂರ್ಯದೇವನೆ ಉದಯ ಇನ್ನಾಗಬೇಕು!!

ಹಿಟ್ಲರ ಮುಸಲೋನಿಯವರ ವಕ್ರದೃಷ್ಟಿಗೆ ಬಿದ್ದ ಯೂರೋಪು-ಅವರ ರಾಕ್ಷಸೀ ಮಹತ್ವಾಕಾಂಕ್ಷೆಗೆ ಬಲಿಯಾದ ಯೂರೋಪು-ವಿವೇಕ ಕಟ್ಟಿದೆ. ತಾನು ಏನು ಮಾಡಬೇಕು, ಏನು ಮಾಡಬಾರದೆಂಬುದನ್ನು ತಿಳಿಯದಾಗಿ ಅವನತಿಯ ಗರ್ತೆಗೆ ಉರುಳಿ ಬೀಳುತ್ತಲಿದೆ. ಅದನ್ನು ಎತ್ತಿ ಹಿಡಿಯುವ ಸಾಮರ್ಥ್ಯವು, ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರವೆನ್ನಿಸಿಕೊಂಡಿರುವ ಇಂಗ್ಲಂಡಿಗೂ ಇಲ್ಲ. ಯಾಕೆಂದರೆ ಅಲ್ಲಿಯೂ ಅಜ್ಞಾನ ಅಂಧಕಾರವು ತುಂಬಿಕೊಂಡಿದೆ. ಇಂಗ್ಲಂಡಿನ ಪ್ರಧಾನರು ಕಿಂಕರ್ತವ್ಯ ಮೂಢರಾಗಿದ್ದಾರೆ. ಹಾಗಾದರೆ ಆ ಅಂಧಕಾರವು ತೊಲಗುವುದು ಹೇಗೆ? ಸೂರ್ಯದೇವನ ಉದಯವಾಗುವುದು ಎಂದು?

ಅನೋನ ಏಡನ್

ಓರಿದೊನ್ಮೈಗೆ ಸೂರ್ಯದೇವನ ಉದಯವಾಗಿತ್ತು. ಇಂಗ್ಲಂಡಿನಲ್ಲಿ, ಆದರೆ ಅವನ ನ್ನನ್ನು ಭಕ್ಷನೆ ಬಂದು ಕಾರ್ಮುಗಿಲುಗಳು ಮುಚ್ಚಿಕೊಂಡುವು. ಸೂರ್ಯ ಪ್ರಕಾಶವು ಮಂದವಾಯಿತು. ಇಂಗ್ಲಂಡಿನ ಜನರು ಕಮ್ಮ ಸೌಭಾಗ್ಯ ಸೂರ್ಯನನ್ನು ಕಾಣದೆ, ಕಬ್ಬಿಬ್ಬಾಗಿದ್ದಾರೆ. ಆದರೆ ಮುಗಿಲುಗಳೆಲ್ಲ ಚೆದರಿ, ಸೂರ್ಯ ಪ್ರಕಾಶವು ಹರಡುವಂತೆ ಮಾಡುವ ಉಪಾಯಗಳು ಇಂಗ್ಲಂಡಿನ ಜನರ ಕೈಯಲ್ಲಿ ಯೇ ಇವೆ. ಅವರು ಅವುಗಳನ್ನು ತಿಳಿಯಬೇಕು; ಹಾಗೆ ವರ್ತಿಸಬೇಕು. ಕಮ್ಮ ಭಾಗ್ಯ ಸೂರ್ಯನನ್ನು ಮತ್ತೆ ಆಕಾಶದ ಉಚ್ಚೈಸ್ಥಾನಕ್ಕೆ ಏರಿಸಬೇಕು. ಆಗ ಮಾತ್ರ ಅಲ್ಲಿನ ಅಂಧಕಾರವು ದೂರವಾದೀತು. ಪ್ರಪಂಚದಲ್ಲಿ ಸುಖಶಾಂತಿಗಳು ಉಂಟಾದಾವು.

ಇಂಗ್ಲಂಡಿನ ಭಾಗ್ಯಸೂರ್ಯನು ಯಾರು? ಅವನೆ-ಪದಚ್ಯುತ ಅಂತೋನಿ ಏಡನ್!

ಅಂತೋನಿ ಏಡನ್-ಅವನ ಹೆಸರನ್ನು ವಾಚಕರು ಇಷ್ಟರೊಳಗಾಗಿ ಪೂರ್ಣ ಸುರಿಕು ಹೋಗಿರಲಿಕ್ಕಿಲ್ಲ. ಅವನು ಒಂದು ವರ್ಷದ ಹಿಂದೆ ಇಂಗ್ಲಂಡಿನ ವರರಾಷ್ಟ್ರ ಸಚಿವನಾಗಿದ್ದನು. ಧೈರ್ಯ, ಸಾಹಸದ ಪ್ರತಿ ಮೂರ್ತಿ, ವೀರ, ಕಟ್ಟಿದೆಯೆ ದಂಡಾಳು! ಇಂಗ್ಲಂಡಿನಲ್ಲೇ ಯಾಕೆ ಯೂರೋಪಿನಲ್ಲೆಲ್ಲ ಅಜ್ಞಾನ ಅಂಧಕಾರವು ತುಂಬಿದ್ದ ವೇಳೆ, ಅದನ್ನು ಪರಿಹರಿಸುವ ಜ್ಞಾನಜ್ಯೋತಿಯ ಅವನ ಕೈಯ್ಯಲ್ಲಿದೆ.

ಇಂಗ್ಲಂಡಿನ ಈಗಿನ ಪ್ರಧಾನರು ದೇಶ ಶತ್ರು, ಯೂರೋಪನ್ನು ಪ್ರಪಂಚವನ್ನು ಮುನ್ನ ಡೆಸಿಸಲಿಕ್ಕೆ ಸಮರ್ಥರಲ್ಲವೆ? ಅವರಲ್ಲಿ ಆ ಶಕ್ತಿಗೆ ಬೇಕಾದ ಶಕ್ತಿ ಸಾಹಸಗಳು ಇರುವುದಿಲ್ಲವೆ? ಹೌದು ಅವರು ಸಮರ್ಥರಿದ್ದಾರೆ, ಶಕ್ತಿ ಸಾಹಸ ಸಂಪನ್ನರಾಗಿದ್ದಾರೆ ಆದರೆ ಪರಿಸ್ಥಿತಿಗೆ ತಕ್ಕಂತೆ ಉಪಾಯಗಳನ್ನು ಹೊಂದಿಸಿಕೊಳ್ಳುವ ವಿಚಕ್ಷಣತೆ, ವ್ಯವಹಾರ ಬುದ್ಧಿ ಗಳು ಅವರಲ್ಲಿಲ್ಲ. ಅವರ ದೃಷ್ಟಿಯಿಂದ, ಹೃದಯ ಸಾಕ್ಷಿತ ಈಗಿರುವ ಕತ್ತಲನ್ನು ಪರಿಹರಿಸುವ ಅನಿವಾರ್ಯದಲ್ಲಿ ಉಜ್ವಲ ಭವಿಷ್ಯವನ್ನು ಬಲಿಕೊಡಲಿಕ್ಕೆ ಎಂದೂ ಹಿಂಜರಿಯುವ ವಲ್ಲ. ಅಷ್ಟರಿಂದ ಇಂಗ್ಲಂಡಿಗೆ ಈಗ ಬೇಕಾದವರು ಚೆಂಬರಲೇನರಲ್ಲ, ಏಡನರು!

ಚೆಂಬರಲೇನರು-ಅಂದ್ದ ಬೇಡ, ಗಲಾಟೆ ಬೇಡ ಇದ್ದಷ್ಟು ಕಾಲ ಸುಖವಾಗಿ ಇದ್ದು ಬಿಡೋಣ ಎಂಬ ಭಾವನೆಯಿಂದ ಸ್ವಾಭಿಮಾನ ವನ್ನಾದರೂ ಮಾರಿ ಬಿಡಲಿಕ್ಕೆ ಸಿದ್ಧರು ಅವರು ಪರಿಸ್ಥಿತಿಯ ಸೂಕ್ಷ್ಮ ಪರ್ಯಾಲೋಚನೆಯನ್ನು ಕಾವು ಹಾಡುವದಿಲ್ಲ ಮಾಡುವಂಥವರನ್ನು ನಂಬುವದಿಲ್ಲ ಅದರ ಮೇಲೆ ಕುಂಟಾ ವೃದ್ಧರಾಗಿ, ಬರುವಂಥ ರಾಜಕೀಯ ವಿಕೃತಿಗಳನ್ನಷ್ಟೆ ಹೇಗೆ ಪರಿಹರಿಸಬೇಕೋ, ಹಾಗೆ ಪರಿಹರಿಸಲಿಕ್ಕೆ ತುಂಬಾ ಅಸಮರ್ಥರಾಗಿದ್ದಾರೆ

ಪ್ರಜಾ ತಂತ್ರದ ರಕ್ಷಣೆಯಾಗಬೇಕಾದರೆ ಯೂರೋಪಿನ ಸರ್ವತಂತ್ರ ಸ್ವತಂತ್ರರಾದ ನಿರಂಕುಶ ಸರ್ವಾಧಿಕಾರಿಗಳ ಕೈ ಕಾಲುಗಳು ಮುರಿದು ಬೀಳಬೇಕಾದರೆ, ಧೈರ್ಯವಂತರೂ ಸಾಹಸಿಗಳೂ ಆದ ಪ್ರತಿಭಾ ಸಂಪನ್ನಧುರೀಣರು ಇಂಗ್ಲಂಡಿಗೆ ಬೇಕಾಗಿದ್ದಾರೆ. ಅಂಥ ಘನತ್ವದ ಲಕ್ಷಣಗಳು ಏಕ ಮಾತ್ರ ಏಡನ್ನರಲ್ಲಿ ಕಂಡು ಬರುವವು

ಬ್ರಿಟನು ಸರ್ವಾಧಿಕಾರಿಗಳ ಮಾತಿಗೆ ಸೊಪ್ಪು ಹಾಕುತ್ತ ಬಂದಿದೆ, ಒಂದು ದಿನ ತಾವು ಮನೆ ಮಾರು ಕಳಕೊಂಡು ಭಿಕ್ಷಾರ್ಥಿಗಳಾಗಿ ಹೋಗುವ ಸಮಯವೂ ಬರಬಹುದೆಂದು ಏಡನ್ನರು ಹೇಳ್ದರು. ಅವರ ಮಾತಿಗೆ ಸಂಪೂರ್ಣ ಸಕ್ಕವಾಗಿ ವರಿಣಮಿಸತೊಡಗಿದೆ ಮುಸಲೋನಿಯು ಅಭಿಸೀನಿಯವನ್ನು ನುಂಗಿದ. ಹಿಟ್ಲರನು ಆಸ್ಟ್ರಿಯನ್ನು ಗುಳುಂ ಮಾಡಿ ನೀರೆಬಿಕುತಿದೆ. ಈಗ ಅವನ ದೃಷ್ಟಿ ಝೆಕೋಸ್ಲೊವೇಕಿಯದ ಮೇಲಿದೆ. ಹೀಗೆ ಇವರಿಬ್ಬರು ಅತಿರಥ ವೀರರಿದ್ದಾ ಬಿಸಲೆ ನ ಮೆಲ್ಲಿ ತಮ್ಮ ಸ್ವಾರ್ಥದ ಕೆಣಸನ್ನು ಅಡಿಸಿ ಕಂಡರೆ ಮೊದಲೆ ಪರಿಣಾಮ ವಾಗಬಹುದೆ?

ಸರ್ವಾಧಿಕಾರಿಗಳ ದಾರಿ ಸ್ವೇಚ್ಛೆಯ ಅತಿ ನಡೆಯ ಒಬಿರಿ ಬಂದ ಕಡೆಯಿಂದ ಅವರು ಪಲಾಯನಗತ್ತಿ ಹಿರುವ ಗ ಇಸ್ಸಾರ ದ ಕಡೆಯಿಂದ ಬಿಜಾನಸ್ತ್ರದಾರ ದುರ್ಬಲ ರಾಗುತ್ತ ಬರುವರು ಕದೆಯಿಂದ ದಿನ ಹಿಟ್ಲರ ವ ಸಲೋನಿಯರಿಗೆ ಇನ್ನಿತ ಭಾಸ್ಯಗಳನ್ನು ಹರಿವೆ ಚೆಲ್ಲಾಸಾದಿ ಸಿದು ಬಾಯಿಮಚ್ಚಿಸುವದೂ ಕಷ್ಟವಾಗಲಿಕ್ಕಿಲ್ಲ. ಆ ಕಾರ್ಯವು ಅವರಿಗೆ ಒಳ್ಳೆ ಹಣ್ಣಾದ ರಸ ಬಾಳೆ ಹಣ್ಣಿನ್ನು, ಸವಿದ ಬಾಯಿಗಿಚ್ಚುವಂತೆ ಅತ್ಯಂತ ಸುಲಭವಾಗುವದು.

ಆದ್ದರಿಂದ ಪ್ರಾರಂಭದಲ್ಲಿಯೇ ಹಿಟ್ಲರ ಮುಸಲೋನಿಯರ ಜೀಳಿಯು ಬೇಯದಂತೆ ಮಾಡಬೇಕೆಂದು ಏಡನ್ನರು ಸಾಧಿಸಿದರು. ಅಬಿಸೀನಿಯದಲ್ಲಿ ಮುಸಲೋನಿಯ ಆಕ್ರಮಣವನ್ನು, ಸ್ಪೈನಿನಲ್ಲಿ ಹಿಟ್ಲರನ ಅಟವನ್ನು ವಿರೋಧಿಸಿದರು ಆದರೆ ಅವರ ಸಾಧನೆಯಲ್ಲಿ, ಅವರ ವಿರೋಧದಲ್ಲಿ ಅವರು ಒಬ್ಬರೇ ಒಬ್ಬರಾದರು ಚೆಂಬರಲೇನ ಮಂತ್ರಿ ಕೂಟವಾಗಲೀ, ಫ್ರಾನ್ಸ ಸರಕಾರವಾಗಲೀ ಅವರ ಸಹಾಯಕ್ಕೆ ಬರಲಿಲ್ಲ ಮತ್ತೆ ಅವರು ಹತಾಶರಾಗಿ ಕಮ್ಮ ವರರಾಷ್ಟ್ರ ಸಚಿವತನಕ್ಕೂ ತಿಲಾಂಜಲಿಯನ್ನು ಕೊಟ್ಟು, ಇಂಗ್ಲಂಡಿನ ಮಂತ್ರಿಮಂಡಲದಿಂದ ಹೊರಬರಬೇಕಾಯಿತು

ಈಗ ಪರಿಣಾಮವೇನಾಗಿದೆ, ನೋಡಿ! ಯೂರೋಪದ ಆಕಾಶವನ್ನೆಲ್ಲ ವ ಹಾಯಿದ್ದಡ ಕಾವು ಗಿಲುಗಳು ಮುಚ್ಚಿಕೊಂಡಿವೆ ಎಂದು ಅವು ಕೆಂದ ಕಾರುವವೋ ಗೊತ್ತಿಲ್ಲ. ಒಂದು ವೇಳೆ ಝೆಕೋಸ್ಲೊವೇಕಿಯದ ಈಗಿನ ಪ್ರಕರಣದ ವಿತ್ತ ಮಹಾ ಯುದ್ಧವು ಆಗಲಿಲ್ಲ, ಫ್ರಾನ್ಸ್ ಇಂಗ್ಲಂಡ ಸರಕಾರಗಳು, ತಾವು ಕೊಟ್ಟ ಮಾತಿನಂತೆ ದುರ್ಬಲ ಝೆಕೋಸ್ಲೊವೇಕಿಯದ ಸಹಾಯ ಕ್ಕೆ ಹೋಗದೆ, ಅದನ್ನೇ ಹಿಟ್ಲರ್ ಬಲಿಕೊಟ್ಟ ತಂತ್ರಿಕ ಶಾಂತಿಯನ್ನು ಸ್ಥಾಪಿಸಿದರು ಹೀಗೆಂದು ಇಟ್ಟುಕೊಂಡರೆ ಸಹ ಹಿಟ್ಲರ ಗ್ರಾಸಲೋನಿಯರ ಅಬಿಸೀನಿಯ, ಸ್ಪೈನ್, ಆಸ್ಟ್ರಿಯ ಝೆಕೋಸ್ಲೊವಾಕಿಯಗಳ ದಲೇ ಪೈಸ್ಪಾಗ ವರಿಂಬಡಿಕ್ಕೆ ಯಾವ ಭಂಗಸಿ ಇದೆ? ಅವರ ಭರವಸೆ ಕೊಟ್ಟರೂ ಅದಕ್ಕೆ ಏನ ಬೆಲೆ ಇದೆ? ಅವರು ಹೊಡೆ ಕೊಟ್ಟ ಎಷ್ಟು ಭರವಸೆಗಳನ್ನು ಕಾಲಬುಡದ ಸಕ್ಕಿಂತಲೂ ಅಲ್ಪ ಎಂಬ ಹಾಗೆ ನಾಡಿಲ್ಲ?

ಅದೇ ಏಡನ್ನರ ತಿಟ್ಟಿನ್ನು ಅನುಸರಿಸಿ, ಮುಸಲೋನಿಯು ಅಬಿಸೀನಿಯದ ಮೇಲೆ ಹಿಟ್ಲರನ ಆಸ್ಟ್ರಿಯದ ಮೇಲೆ ಏರಿ ಹೋದಾಗಲೇ, ಅವರ ಗರ್ವ ಭಗ ಕೇಜೋ ನಧೆ ಮಾಡಿದ್ದರೆ ಎಷ್ಟು ಚೆನ್ನಾಗಿತ್ತು? ಆಗ ಈ ಇಬ್ಬರು ಸರ್ವಾಧಿಕಾರಿಗಳ ಮೇಲೆ ಒಂದು ಸಣ್ಣಯುದ್ಧವನ್ನು ಹೂಡಿ ಅವರನ್ನು ನಿಗ್ರಹಿಸುವದಾದರೂ ಸುಸಭವಿತ್ತು, ಆದ್ದರಿಂದ ಸಕಾಲಕ್ಕೆ ಅಲ್ಪವಾದರೆ, ದೀರ್ಘಕಾಲಕ್ಕಾದರೂ ಪ್ರಪಂಚದಲ್ಲಿ ಸುಖಶಾಂತಿಗಳು ನೆಲೆಗೊಳ್ಳುತ್ತಿದ್ದುವು ಈಗ ಮಾತ್ರ ವಹಾ ಯುದ್ಧವು ಯಾವಾಗ ಆಗಬಹುದಾದರೂ ಅದರ ಆ ಸನ್ನಿಧಿಯು ಮಾತ್ರ ಎಂದೆಂದೂ ಇರುವಂತಾಗಿದೆ. ಅನಕ್ತು ಬಂದು ಅದನ್ನು ಸಹಿಸುವದಕ್ಕಿಂತಲೂ, ಅದು ಬರುವದೆಂಬ ಹೆದರಿಕೆಯಿಂದ ಆಗುವ ದುಪ್ಪರಿ ಣಾಮಗಳು ಅವರಿಬ್ಬರವಾಗಿವೆ. ಇದನ್ನು ತಿಳಿಕೊಳ್ಳುವ ಶಕ್ತಿಸಾಮರ್ಥ್ಯವು ಇಂಗ್ಲಂಡಿಗೆ ಬಾರದೆ ಹೋಯಿತಲ್ಲ! ಆದ್ದರಿಂದಲೇ ಅಲ್ಲಿ ಆ ಜ್ಞಾನ ಅಂಧಕಾರವು ಕೊಂಭಿಕೊಂಡಿದೆ, ಎಂದು ನಾವು ಹೇಳಬೇಕಾಯಿತು.

ಇರಲಿ; ಆ ಅಜ್ಞಾನ ಅಂಧಕಾರವನ್ನು ದೂರ ಮಾಡುವ ಜ್ಞಾನಜ್ಯೋತಿಯು ಏಡನ್ನರ ಕೈಯ್ಯಲ್ಲಿದೆ. ಅವರು ಅದನ್ನು ಉರಿಸಿ ಲೋಕವನ್ನೇ ಬೆಳಗಿಸಲಿಕ್ಕೆ ಅನುಕೂಲ ಸಮಯವನ್ನು ಕಾಯುತ್ತಿದ್ದಾರೆ ಈಗ ಅವರು ಚೆಂಬರಲೇನರಿಗೆ ಯಾವದೇ ವಿರೋಧವನ್ನು ತೋರಿಸದೆ ಇರಲಿಕ್ಕೆ ಇದುವೆ ಕಾರಣವಾಗಿರುವುದು.

ಏಡನ್ನರು ತರುಣರಿದ್ದಾರೆ, ಅವರಿಗೆ ಪ್ರಪಂಚದ ಆಧಿಕ್ಯ, ಸಾಮಾಜಿಕ, ರಾಜಕೀಯ ವಿವಿಧ ಸಮಸ್ಯೆಗಳ ಉತ್ತಮ ಅನುಭವವಿದೆ. ಅವುಗಳನ್ನು ಬಿಡಿಸುವ ಕರ್ತವ್ಯ ಜ್ಞಾನವಿದೆ, ಸ್ಥೈರ್ಯ ಧೈರ್ಯಗಳಿವೆ. ಆದರೆ ಈಗಲೇ ಅಧಿಕಾರ ಸೂತ್ರವನ್ನು ತಮ್ಮ ಕೈಗೆ ತೆಗೆದು ಕೊಂಡು ಪಾಳಯದೊಳಗೆ ಕ್ರಿಯ್ಯಾಟವನ್ನೆಬ್ಬಿಸಲಿಕ್ಕೆ ಮಾತ್ರ ಅವರು ಸಿದ್ಧರಿಲ್ಲ ಹಾಗೆ ನೂಡುವದರಿಂದ ಖಾನ ಪುರುಷಾರ್ಥಕ ಸಾಧನೆಯೂ ಆಗುವದಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ

ಎಂದು ಚೆಂಬರಲೇನರ ಕಾರ್ಯನೀತಿಯು ಸಮಯಕ್ಕೆ ಸಂಕೂಲವಾಗಿಲ್ಲ ಎಂದು ಇಂಗ್ಲಂಡಿನ ಜನತೆಯು ತಿಳಕೊಳ್ಳುವದೊ?-ಅಂಧ ತಿಳಿಗೆಡೆಯು ಇಂಗ್ಲಂಡಿನ ಜನರಿಗೆ ನಾವು ಎಚ್ಚರಿಸುವದಕ್ಕಿಂತ ಬೇಗ ಬರಲಿಕ್ಕಿದೆ- ಆಗ ಚೆಂಬರಲೇನರು ತಾವಾಗಿ ಅಧಿಕಾರವನ್ನು ಏಡನ್ನರ ಕೈಗೆ ಕೊಡಬೇಕಾಗುವದು. ಆಗಲೇ ಇಂಗ್ಲಂಡಿನ ಸೌಭಾಗ್ಯ ಸೂರ್ಯನ-ಕಾರ್ಮುಗಿಲುಗಳಿಂದ ಮುಚ್ಚಿಕೊಂಡವನು, ಅವುಗಳಿಂದ ಹೊರಬಂದ -ಪ್ರಸಂಚವನ್ನೇ ಬೆಳಗಿಸುವನು. ಕತ್ತಲನ್ನು ಅಶ್ರಯಿಸಿಕೊಂಡಿದ್ದ ಗೂಗೆಗಳ ಕೇಜೋವಧೆಯಾಗಿ, ಲೋಕ ಶಾಂತಿ ಸಂಪಾಗಿ ವದು,

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜಮ್ಮಿ ವೆಂಕಟ್ರಮಣಯ್ಯ

ವಿವರ ಮತ್ತು ಸ್ಟ್ರೀನ್ ಸ್ಪೆಸಿಯಲಿಸ್ಟ,

ಮೈಲಾಪುರ, ಮದ್ರಾಸು.

WANTED.

Organizing Secretary for our Udipi Branch on pay and Commission

Only influential men with previous knowledge of Insurance need apply

Call or write for full particulars to—

THE MANAGING DIRECTOR,

The Popular Insurance Co, Ltd.,

H. O.: MANGALORE.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ಸ್ಕೈಡಮ್ಮಿನಿಂದ ಒರುವ ವಜ್ರಗಳು ಒಜಾರ ಧಾರಣೆಗಿಂತ ಬದು ನರ್ಸೆಂಟಿಗೆ ಕಡಿಮೆಯಾಗಿದಲೆ ಸಮ್ಮಲ್ಲಿ ವಿಕ್ರಯಿಸಲ್ಪಡುತ ಕವೆ

ನನ್ನಲ್ಲಿ ಒಂದು ಸ್ವತಂತ್ರ ಪರೀಕ್ಷೆಯಿ ನೋಡಿದಲ್ಲಿ ನನ್ನ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ಖಾನೇ ನಿಮಗೆ ಖಚಿತವಾಗುವುದು.

ಪೆಸ್ಕು ಒಂದು ಬ್ರಾಂಚು ಇತ್ತುಡೆಗೆ ಹಂಸಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

ಈ ಕೆಳಕಂಡ ಮೆಸ್ಸರ್ಸ್ ಕಂಪನಿಯವರು

ಅಮೃತ ತೈಲಾಸ್ಥಾನದಲ್ಲಿ ಪ್ರಥೀತರಾಗಿ ಪ್ರಪಂಚದ ಪ್ರಸಿದ್ಧ ಪ್ರಸಿದ್ಧ ಜನರಿರುವಲ್ಲೆಲ್ಲಾ ಇವು ದೂರದ ಬೆಳ್ಳಿರುವೆನೆಲ್ಲಾ ನಿಮ್ಮ ಭಕ್ತರಿರುವರೆಂದೂ ಗಾಂಧಿಜೀಯವರಿಗೆ ವಿನಯದಿಂದ ತಿಳಿಸಿದೆನು. ಅವರು ಕೂಡಲೆ ನನ್ನೆಂದರು, ಬಲ್ಲಿದಾ! ನನ್ನನ್ನು ಕಣ್ಣಲ್ಲೇ ನೋಡಿ, ನಗುತ್ತ,—ದೂರದಿಂದ ಬೆಟ್ಟ ನುಣ್ಣಗೆ, ಎಂದರು. ಅವರ ವಿಷಯದಲ್ಲಿ ಯಾರೂ ತಪ್ಪಿತಗಳನ್ನು ಮಾಡಿದರೆ, ಅವರನ್ನು ದೂರದ, ತಪ್ಪಲ್ಲೇ ಅವರ ಕುಂದುಗಳಿಗೆ ಕಾರಣಗಳನ್ನು ಆರೋಪಿಸಿಕೊಂಡು, ಉದಾಸೀನವಾನವಾಗಿದ್ದು ಸ್ವಾರ್ಥನಾಮೂಲಳವಾಗಿ ತನ್ನ ಅತ್ಯುದ್ಧಿಯನ್ನು ಮಾಡಿಕೊಳ್ಳುವರು. ನಮಗೇನಾದರೂ ಸಂದೇಶವಿದೆಯೆ? ಎಂದು ಕೇಳಿದ್ದನು ರಾಜಕೀಯ ವಿಷಯಗಳಲ್ಲಿ ನನ್ನ ಮಾತುಗಳು ಅಷ್ಟು ದೃಢವಲ್ಲ, ಆಗಾಗ ಅಭಿಪ್ರಾಯಗಳು ಬದಲಾಗುವುವು ನೂತನ ಪರಿಸ್ಥಿತಿಗೆ ತಕ್ಕಂತೆ ನೂತನ ಅಭಿಪ್ರಾಯವಾಗುವುದು. ನನ್ನ ಆಶ್ರಮವನ್ನು ನೋಡಿರಿ, ! ನನ್ನ ಪುಸ್ತಕ ಓದಿರಿ ಅಲ್ಲಿದೆ ನನ್ನ ಸಂದೇಶ. ಸಾಮಾಜಿಕ ವಿಚಾರಗಳಲ್ಲಿ, ಸತ್ಯಾಗ್ರಹ, ಅಹ್ಯಸಂಯವನ, ಖಾದೀ ಪ್ರಚಾರ, ಇವೇ ಸ್ವಾತಂತ್ರ್ಯ ಲಾಭಸೂಚಕವಾಗಿವೆಂದೇ ನನ್ನ ವಿಶ್ವಾಸ.

ಮೆ! ಎಚ್. ಎಸ್ ಪೊಲೆಕ್

ಉತ್ತಮ ಪುರುಷರೂ, ಉತ್ತಮ ಸ್ತ್ರೀಯರೂ ತಮ್ಮೊಳಗೆ ಉತ್ತಮ ಗುಣಗಳನ್ನು ಕೊಡಿಕೊಂಡು ಬೆಳೆದರು. ತಾಳ್ಮೆ ಮತ್ತು ಸಹನ ಶಕ್ತಿಗಳಲ್ಲಿ ಗಾಂಧೀಜೀ ಯಾವ ಸ್ತ್ರೀಗಿಂತಲೂ ಅಧಿಕರು ಕಾರಣವೇನೆಂದು ತಿಳಿಯಲು ಅವರ ಕಾಟುಂಬಿಕ ಜೀವನವನ್ನು ತಿಳಿದುಕೊಂಡರೇ ತಿಳಿಯುವುದು. ಆತ ಮಹತ್ವದ ರಾಜಕೀಯ ವಿಚಾರಗಳನ್ನು ವಿವರಿಸುತ್ತ, ಕೈಯಲ್ಲಿ ಪುಗುವನ್ನಿಕ್ಕಿತ್ತಿರುವ ಗಾಂಧೀಜೀ ಯಾವ ತಾಯಿಗಿಂತಲೂ ಹೆಚ್ಚಿನ ಪ್ರೀತಿಯಿಂದ ಮುದ್ದಾದಿ ಅತ್ತಿತ್ತ ಅಡ್ಡಾಡುವುದೂ ಇದೇ ಕಾರಣದಿಂದ

ಶ್ರೀ! ಸಿ ಎಫ್ ಎಂಡ್ರ್ಯೂಸ್

ಸತ್ಯವನ್ನು ಬಿಟ್ಟು ಕಿಂಚಿತ್ತೂ ನಡಿದರೂ ಮಹಾತ್ಮಾಜಿಗೆ ಒಪ್ಪದು, ಒಲ್ಲದು ಸತ್ಯ ವೆಂದು ತಾನು ನಿರ್ಧರಿಸಿ ಇರುವುದನ್ನೆ ಅವರು ಯಾವಾಗಲು ನುಡಿವರು ಕೆಲವರು ರಾಜಕಂತ್ರಕ್ಕೆ ಸರಿಯಾಗುವ ಹಾಗೆ, ಅಥವಾ ತಾತ್ಕಾಲಿಕ ಫಲಪ್ರಾಪ್ತಿಗಾಗಿ ಅಥವಾ ಕೇವಲ ರಾಜಕೀಯ ದೃಷ್ಟಿಯಿಂದ ನುಡಿವರು. ಗಾಂಧೀ ಎಂದೂ ಬರಿಯ ಉಪಚಾರ ಮಾತುಗಳನ್ನು ಆಡುವವರಲ್ಲ ತನ್ನೊಡನೆ ಸಂಘಾಷಿಸುವವನಿಗೆ ಅಥವಾ ತನ್ನ ಸಭೆಯವರಿಗೆ ರುಚಿಸದ ಮಾತುಗಳನ್ನೆ ಆದರೂ ಗಾಂಧೀಜೀ ತಾನು ಸತ್ಯವೆಂದರಿತುದನ್ನು ಆಡುವವರೇ ಸರಿ

ಬಿಷಪ್ ವ್ಹಾಯಿಟ್ ಹಿಡ್

ಯಥಾರ್ಥತೆ, ಕರುಣೆ ಇವುಗಳಿಗಾಗಿ ಧಾರಾಳವಾಗಿ ಕ್ಲೇಶವನ್ನು ಅನುಭವಿಸುತ್ತಲಿರುವ ಗಾಂಧಿಜಿಯನ್ನು ಕಂಡು ನನ್ನಲ್ಲಿ ಬಹಳ ಸಹಾನುಭೂತಿ ಉಂಟಾಗಿರುತ್ತದೆ ಈತನೆ ನಮ್ಮ ಕ್ರೂಜೆಯಲ್ಲಿ ಬಲಿಗೊಂಡ ಸ್ವಾಮಿಯ ಪ್ರತಿನಿಧಿ ಆತನನ್ನು ಜೈಲಿನಲ್ಲಿಟ್ಟು ತಾವು ಕೈಸ್ತರೆನ್ನಿಸಿರುವವರಿಗಿಂತ ಈತನೆಷ್ಟೋ ಮಿಗಿಲು!

ಪ್ರೊಫೆಸರ್ ಗಿಲ್ಬರ್ಟ್ ಮರ್ರೆ

ಯಾವ ಅಪರಾಧವನ್ನೂ ಗೂಡದೆ, ಯಾವ ಹಿಂಸೆಯನ್ನೂ ಕೈಗೊಳ್ಳದೆ ಇದ್ದರೂ ಎದುರಾಳಿಗಳು ಕೊಡಬಹುದಾದ ಎಲ್ಲ ದಂಡನೆಗಳನ್ನೂ ನಿರ್ವಹಿಸಿ ಅವರೇ ತಮ್ಮ ದುಸ್ಥಿತಿಗಳಿಗಾಗಿ ಮನನೊಂದು ನಾಚಿಕೆಪಡುವಂತಾಗುವ ವಿದ್ಯಮಾನಗಳಲ್ಲಿ, ಹೋರಾಟದಲ್ಲಿ ಸುಲಭವಾಗಿ ವಿಜಯಯಾಗುವ ಅತಿಅಪರೂಪ ದೃಷ್ಟಾಂತವೇ ಈತನದು ಅಸಾಧಾರಣವಾಗಿರುವ ವಾಸ್ತವಿಕ ಬಲವನ್ನು ಬಲವೇನೂ ಇಲ್ಲವೆನ್ನುವ ಅತ್ಯಬಲದಿಂದ ಕಾಡಾದಿ, ವಾಸ್ತವಿಕ ಬಲಶಾಲಿಗಳು ಒಬ್ಬರ ಹಿಂದೆ ಮತ್ತೊಬ್ಬರು ಹಿಂಮೋದಿ ಅತ್ಯಬಲದಕಡೆಗೆ ಪಕ್ಷವಾಗಿ ನಿಲ್ಲುವಂತೆ ಸಾಧಿಸುವವನೇ ಈತನು

ಗಾಂಧೀ ಜಯಂತಿ

ನೊಟ್ಟಿಂಗ್ಹೆಮ್ ಗಾರ್ಡಿಯನ್ ಪತ್ರಿಕೆಯಲ್ಲಿ:

'ಗಾಂಧಿಜಿಯು ಈಗ ೬೯ನೆ ವಯಸ್ಸನ್ನು ದಾಟಿರುವನು. ಆತನ ಆರೋಗ್ಯದ ವಿಷಯದು ಅಸಮಾಧಾನಕರವಾದ ವಾರ್ತೆಗಳು ಬರುತ್ತಲಿವೆ ರಾಷ್ಟ್ರೀಯ ಮತ್ತು ಕೊಂಗ್ರೆಸಿನ ಬೆಂಬಲದಲ್ಲಿರುವ ಮಹಾಶಕ್ತಿಯೇ ಗಾಂಧಿಜೀ. ಆತನಿಗೇಗೆ ರಕ್ತಪ್ರಪೀಡನ ಉಂಟಾಗಿದೆ. ವಿಶೇಷ ಜಾಗರೂಕತೆಯನ್ನಿಟ್ಟಿಲ್ಲಿ ಸದ್ಯಕ್ಕೆ ಹಾನಿಯುಂಟಾಗದು ಎಂದೇ ಸಮೀಪದ ವೈದ್ಯರು ಎನ್ನುತ್ತಾರೆ ಆದರೆ ಗಾಂಧಿಜಿ ತಾವಾಗಿ ಇನ್ನು ಕೆಲವೇ ತಿಂಗಳಲ್ಲಿ ತನಗೆ ಪರಮಾಕ್ಷನ ಕರೆ ಬರುವುದೆನ್ನುತ್ತಾನೆ. ಈ ಮಾನಸಿಕ ವಿಶ್ವಾಸವನ್ನು ಎದುರಾಡಲು ಯಾವ ವೈದ್ಯನಿಗೂ ಸಾಮರ್ಥ್ಯವಿಲ್ಲವಾಗಿದೆ. ಪೌರ್ವಾಹ್ಯದಲ್ಲಿ ಇಂತಹ ಮಾನಸಿಕ ನಂಬುಗೆ ಉಂಟಾದಾಗ, ಅದು ಆಗಿಯೇ ಹೋಗುತ್ತದೆ. ಗಾಂಧಿಜಿಯ ಅನುಯಾಯಿಗಳಿಗೆ ಇದು ವಿಶೇಷ ಸಂತಾಪಕ್ಕೆ ಕಾರಣವಾಗಿದೆ. ಈ ವಿಷಾದವು ಇಂಡಿಯಾ ಸರಕಾರಕ್ಕೂ ಇರಲೇ ಬೇಕು: ಏಕೆಂದರೆ, ಗಾಂಧಿಜಿಯ ನಂತರದಲ್ಲಿ ಭಾರತೀಯ ರಾಜಕೀಯ ಕ್ಷೇತ್ರವು ಧಾರಾಳ ಸರಳಟಿಕರ'

ಶಾಂತಿ, ಸತ್ಯ ಅಹಿಂಸೆಗಳ ಪ್ರಚಾರಕನಾಗಿರುವ ಗಾಂಧಿಜೀಯ ಜನ್ಮದಿನೋತ್ಸವವು ಭಾರತವರ್ಷದಲ್ಲೆಲ್ಲ ತಾ. ೨ರಲ್ಲಿ ಸಂಭ್ರಮದಿಂದ ಜರುಗಿತು

ರೆವರೆಂಡ್ ಡಾ! ಹೊಲ್ಮ್ಸ್

ರೊಲೆಂಡನ ನೆನಪಾಗುವಾಗ ನನಗೆ ಟೋಲ್ಸ್ಟಾಯಿಯ ನೆನಪಾಗುವುದು ಲೆನಿನ ನೆನಪಾಗುತ್ತಲೇ ನಪೊಲಿಯನನ ನೆನಪಾಗುವುದು ಆದರೆ ಗಾಂಧಿಯ ನೆನಪಾಗ.ವಾಗ ಕ್ರಿಸ್ತಸ್ವಾಮಿಯ ನೆನಪಾಗುವುದು ಆತನದೇ ಜೀವನ, ಅವೇ ಮಾತುಗಳು, ಅವನಂತೆಯೇ ಸಹಿಸಿ, ಬೇಚಾಡಿ, ಒಂದು ದಿನ, ತನ್ನ ರಾಜ್ಯವು ಈ ಲೋಕದ ಮೇಲೆ ನಿರ್ಮಾಣ ಹೊಂದುವಂತೆ ಆವನು ಅತ್ಯಬಲಿಯಸ್ಸೀಯವನು

ರೆನೆ ಫುಲೊಪ್ ಮಿಲ್ಲರ್

ನಿಜವಾಗಿಯೂ, ಗಾಂಧಿಜಿಯೇ ಭಾರತ ವರ್ಷವನ್ನು ಆಳುವಾತನು ಮಹಾರಾಜರ ಸಂಭ್ರಮವೂ ಬ್ರಿಟಿಷರಕಾರದ ಆದಂಬರವೂ ಇದ್ದರೂ, ಭಾರತವಾಸಿಗಳು ಬ್ರಿಟಿಷ ಹುದ್ದೇದಾರರಿಂದ ಧಿಲ್ಲಿಯಿಂದ ಆಳಲ್ಪಡುವ ಬದಲಾಗಿ ಹೊಲೆಯನ ವೇಷದಲ್ಲಿರುವ ದೀನ ದರಿದ್ರನಾದವನೊಬ್ಬನ ಅನ ಚ್ಛೆಗಳಿಗೆ ಒಳಗಾಗಿದೆ ಈ ತನು ಬಂದೀಖಾನೆಗಳಲ್ಲೂ, ಆಸ್ಪತ್ರೆಗಳಲ್ಲೂ ಬದುಕಿದವನ, ಯಾವಾಗಲೂ ಈತನನ್ನು ನ್ಯಾಯವಿಚಾರಣೆಗೆ ಒಳಪಡಿಸಿ ಬಾಧಿಸುತ್ತಲೇ ಇದ್ದರು

ದೇಶಬಂಧು ಚಿತ್ತರಂಜನ ದಾಸ

ಇನ್ನತ್ತನೆಯ ಶತಮಾನದ ಕ್ರಿಸ್ತನೆಂದರೆ ನಜವಾಗಿಯೂ ವ ಹಾತ್ಮಾಜಿ

ಜೋರ್ಜ್ ಜೋಸೆಫ್

ಜಗದ್ಬಂಧುವು ಪುನಃ ಜನ್ಮವೆತ್ತಿದನಾದರೆ,—ಸಬವ ರ್ತಿಯ ಸಾಧುವಿನಲ್ಲೆ' ಆವನ

ಎಸಿಯಾಟಿಕ್ ಪ್ರೋಡಕ್ಟ್ಸ್

ಅತ್ಯುತ್ತಮ ಹೆರ್ ಆಯಿಲ್ ಇದಕ್ಕೆ ಸರಿಸಮಾನವಾದುದಿಲ್ಲ!

ಸ್ವತಃ ಒಬ್ಬರೂ ಈ ಕೂದಲೆಣ್ಣೆಗಳನ್ನು ಉಪಯೋಗಿಸದೇ ಗ ಡಸಾಗಲೀ, ಹೆಂಗಸಾಗಲೀ, ಯೌವನಸ್ಥರಾಗಲೀ, ಪ್ರಾಯದವರಾಗಲೀ ಯಾ ಮುದುಕರಾದರೂ ಚಿ ತಿಲ್ಲ

ದೀಪಾವಳಿಯು ಕ್ಷುರಿತಗತಿಯಿಂದ ಸಮೀಪಿಸುತ್ತಿದೆ!

ಹಿಂದುಗಳ ಪರಮಪೂಜ್ಯವಾದ ಪುಣ್ಯ ದಿನ!!

ತೈಲಾಭ್ಯಂಗದ ದಿನ

ಈ ಎಣ್ಣೆಗಳಲ್ಲಿದ್ದ ಮನೆಯ ಸೌಕರ್ಯಗಳೇ ಪೂರ್ಣವಾಗವು ದೇವಾನಿಳಿಯ ದ ಇವುಗಳಲ್ಲಿಂದೆಣ್ಣೆಯನ್ನಾದರೂ ಉಪಯೋಗಿಸದಿದ್ದರೆ ಸ್ನಾನವು ಪರಿಪೂರ್ಣವೂ ಫಲಕಾರಿತ್ವವೂ ಆಗದು ಈ ಕೆಳಗಿನ ಯಾವುದಾದರೊಂದೆಣ್ಣೆಯನ್ನುಪಯೋಗಿಸಿ ಅವು ನಿಮ್ಮ ಕೂದಲನ್ನು ನಾಜೂಕಾಗಿಯೂ ನಯವಾಗಿಯೂ ಬೆಳೆಯುವುದಕ್ಕೆ ಸಹಾಯ ನಾಡುವುದಲ್ಲದೆ ಕೂದಲು ಉದುರುವುದನ್ನು ನಿಲ್ಲಿಸುತ್ತದೆ ತಲೆ ಹೊಟ್ಟು ವ ತ್ತು ವಿಕೇಶ (ಬೋಳು ತಲೆ)ದ ವಿಷಯ ಜಾಗ್ರತೆಯಿಂದಿ ನೀವು ಈ ತೈಲಗಳನ್ನುಪಯೋಗಿಸಿ ನಿಜವಾಗಿ ಇರ ವುದಕ್ಕಿಂತ ತರುಣರಾಗಿ ಕಾಣಿಸಿಕೊಳ್ಳಿರಿ!

ಎಲ್ಲಾ ಜನರ ರುಚಿಕ್ಕಕ್ಕೆ ಮತ್ತು ಅವರ್ಷಣ ರೀತಿಯ ಕ್ರೋನನ್ನು ಬಾಚ ವುದಕ್ಕೆ ಅನುಕೂಲವಾದ ರೀತಿಯಲ್ಲಿ ನುಧುರತರ ಸುಗಂಧಪೂರಿತವಾಗಿದೆ

ಎಲ್ಲಾ ಜನರಿಗೆ ಅನುಕೂಲವಾಗುವಂತೆ ಸಾಧಾರಣ ಬೆಲೆಯನ್ನಿಟ್ಟಿದ್ದೇವೆ

ದರ — ಭಾಗ್ಯಲತಾ ಹೆರ್ ಆಯಿಲ್ ೨½ ಔನ್ಸಿನ ಬಾಟ್ಲಿ 1ಕ್ಕೆ 0–6–0
4 ಔನ್ಸಿನ ಬಾಟ್ಲಿಗೆ 0–8–0 5 ಔನ್ಸಿನ ಬಾಟ್ಲಿಗೆ 0–9–0 12 ಔನ್ಸಿಗೆ 1 4 0

ದಿಲ್‌ಕುಷ್ ಹೆರ್ ಆಯಿಲ್—4 ಔನ್ಸಿನ ಬಾಟ್ಲಿಗೆ ಆಣೆ 8 5 ಔನ್ಸಿಗೆ ಆಣೆ 10
6 ಔನ್ಸಿಗೆ ಆಣೆ 12 12 ಔನ್ಸಿಗೆ ರೂ 1 4 0

ಬೊರ್ಸಾಲಿ ಹೆರ್ ಆಯಿಲ್—4 ಔನ್ಸಿನ ಬಾಟ್ಲಿಗೆ ಆಣೆ 8, 6 ಔನ್ಸಿಗೆ ಆಣೆ 10,
12 ಔನ್ಸಿಗೆ ರೂ 1-2-0

ಒಟ್ಟೋ ಸೆಂಟುಗಳು

ನರ್ಸಿಸಸ್ಸ್, ಹಿನೋ, ಜೆಸ್ಮಿನ್ ಮತ್ತು ಮಸ್ಕ್ ½ ಔನ್ಸಿಗೆ ಆ. 8, 1 ಔನ್ಸಿಗೆ ಆ 12

ಪೌಮೆಡುಗಳು—ಪ್ರತೀ ಬಾಟ್ಲಿಗೆ ಆಣೆ 4, ಮತ್ತು ಆಣೆ 6.

ರೂಲಿ ಪೆಯಿನ್ ಬಾಮ್—ಪ್ರತೀ ಕರಡಿಗೆಗಳಿಗೆ ಆಣೆ 4, ಆಣೆ 6 ಮತ್ತು 8

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು.

ಈ ಕೆಳಗಿನವರಿಗೆ ಬರೆಯಿರಿ.

ದಿ ಎಸಿಯಾಟಿಕ್ ಪರಫ್ಯೂಮರಿ ಪ್ರೋಡಕ್ಟ್ಸ್,
ಹೊಸ್ಪಿಟಲ್ ರೋಡ್, ಕುಂಪನಕಟ್ಟೆ ಮಂಗಳೂರು

ಅವತಾರವಾಗಿದೆ ಯೇಸುವಿನ ಪುನರುತ್ಥಾನವೇ ಗಾಂಧಿಜಿ.

ಮೌಲನಾ ಮಹಮ್ಮದ್ ಆಲಿ

ಭೂಲೋಕನಾಸಿಗಳಲ್ಲಿ ಇವನೇ ಮಹಾ ಪುರುಷನೆನ್ನುವುದನ್ನು ಅಲ್ಲಗಳೆಯುವವರಾರು?

ಮಾರ್ಮದ್ಯೂಕ್ ಪಿಕ್ಥಾಲ್

ಸತ್ಯದೃಷ್ಟಿಯಿಂದ ಈತನೆ ಸಾಧು... ಮಹತ್ಮಾಜಿ ಬಾಳಲಿ, ಬಾಳುತ್ತ ಬಾಳುತ್ತ ಯುವಕನಾಗುತ್ತ ಬರಲಿ ಎಂದೇ ನರ್ವರ ಪ್ರಾರ್ಥನೆ.

ಮ್ಯುನಿಚ್ (ಮ್ಯುನಿಕೆನ್) ಕರಾರುಗಳು ಅಧೊಂದು ವಿಲೇವಾರಿ

(ಬ್ರಿಟಿಷರದೇ ಆಗಿರುವ ಕಳ್ಳತನದ 'ಸ್ಟೇಟ್ಸ್‌ಮನ್' ಪತ್ರಿಕೆಯಿಂದ)

ಯುದ್ಧಭೀತಿಯು ದೂರವಾಯಿತೆಂದು ಪ್ರಜಾಸತ್ತೆಯುಳ್ಳ ರಾಜ್ಯಗಳೀಗ ಜಿನ್ನಾಗಿ ನರಿಯಾಗಿ ಉಸಿರಾಡುತ್ತಿರಬಹುದು, ಆದರೆ ಅಂಕಿಹ ಶಾಂತಿಕರವಾದ ವಿಧಾನಗಳಲ್ಲಿ ಹೊಡಿರುವ ಬಗೆಯನ್ನು ಮಾತ್ರ ಆಲೋಚಿಸಿದರೆ ಮನಸ್ಸಿನಲ್ಲಿ ನಾಚುಗೆಯೂ ಸಂತಾಪವೂ ಉಂಟಾಗದಿರದು

ಸಸ್ತಂಬರ ತಾ ೧೭ರಲ್ಲಿ ಎಂಗ್ಲೋ—ಫ್ರೆಂಚರು ಝೆಕ್ಕರ ಅಂಗೀಕಾರಕ್ಕಾಗಿ ಒಪ್ಪಿದ್ದ ಸೂಚನೆಗಳಲ್ಲಿ, ಮ್ಯುನಿಚ್ ಸಭೆಯಲ್ಲಿ ಝೆಕ್ಕರ ವ್ಯವಸಿಧಿಗಳೇ ಇಲ್ಲದೆ (ಅಗತ್ಯವಾಗಿಯೂ ಸರಿಯಾದ ಕ್ರಮವಾಗಿದ್ದಿರಬಹುದು) ಅವರ ಅದೃಷ್ಟವನ್ನು ವಿಧಾಯಿಸಿದ ಕ್ರಮಗಳನ್ನು, ಬ್ರಿಟನ್ನಿನಲ್ಲಿ, ಯುದ್ಧವಾಗದಂತಾಯಿತೆಂದು ಪ್ರಥಮತಃ ಸಂತೋಷ ಅನುಭವಿಸಿದ್ದ ಜನವರ್ಗದಲ್ಲಾದರೂ, ಅಸಂತೋಷವು ಮರೆತಂತೆ, ಪುನಃ ಪುನಃವಾಗಿ ತಾನಿನ್ನಿಗೆ ತಾರದಿರುವರೆಂದರು.

ಗರ್ಗರಲ್ಲಾದ ಶಾಂತಿ ಸ್ಥಾಪನಾಕಾಲದ ವಿಧಾನಗಳನ್ನೂ ಅನ್ಯಾಯ ತೀರ್ಮಾನಗಳನ್ನೂ ತಿದ್ದಬೇಕೆಂದು ಎಲ್ಲರೂ ನಂಬಿದ್ದರೂ, ಸುಡೆಟನ್ ಸ್ಪಾಂತ್ಯವನ್ನು ಜರ್ಮನಿಗೆ ಪುನಃ ಪಿಸಿಸಿ ಕೊಡುವಂತೆ ಪ್ರೇರೇಪಿಸಿದ ವಿಧಾನಗಳು ಮಾತ್ರ ಯಾವ ಜಿತಿಯಲ್ಲೂ ಪ್ರಜಾಸತ್ತೆಯುಳ್ಳ ರಾಜಗಳ ಕೀರ್ತಿಯನ್ನು ಹೆಚ್ಚಿಸುವಂತಹವಲ್ಲ

ಪ್ರಸ್ತುತದಲ್ಲಿ ಎಂತಹ ಕೋಟಿಯ ಮುಂದಿರುವ ಪ್ರತ್ಯಕ್ಷ ಪ್ರತ್ಯೆಯೆಂದರೆ ಯುದ್ಧದ ಭಯವೂ ಪ್ರಳಯವೂ ಸದ್ಯಕ್ಕಾ ಮಾತ್ರ ನಿಲ್ಲಿರುವಂತೆ, ಅಥವಾ ಇನ್ನು ಕೆಲಕಾಲದಲ್ಲಿ ಮರಳುವುದುಂಟೆ? ಎಂಬುದೇ. ಇನ್ನುವೇ ಕೆಲವು ವಿಚಾರಗಳೊಳಗೆ ವಿದ್ಯಮಾನಗಳು ಹೀಗೆ ಭಾವಿಸಿಕೊಳ್ಳುವುದೂ ನೋಡಬಹುದಷ್ಟೆ ಬಲಪ್ರದರ್ಶನದಿಂದ ತಮಗೆ ಬೇಕಾದುದನ್ನೆ ಸೆಳೆದುಕೊಳ್ಳುವುದಕ್ಕೆ ಒಂದಾಗಿ ವರ್ತಿಸುವ ರಾಜ್ಯಗಳು ಹೀಗೆ ಇನ್ನು ಹೇಗೆ ವರ್ತಿಸುವುದೂ ಎಂಬುದನ್ನು ಖಂಡಿತ ತಿಳಿಯದೆ, ಶಾಂತಿ ಸ್ಥಾಪನೆಯಾಯತನ್ನುವುದಕ್ಕೆ ಅಧಾರ ಸಿಗುವುದಿಲ್ಲ

ವರ್ಸೆಲ್ಲ ಒಪ್ಪಂದದ ಕರುವಾಯ ಜರ್ಮನಿಯ ಕಡೆಗೆ ಬ್ರಿಟಿಷರಲ್ಲಿ ಹೆಚ್ಚಿಕವಿಗಿ ಇರುತ್ತಿರ ವ ಸಹಾನುಭೂತಿಯು ಈ ಸಸ್ತಂಬರದಲ್ಲಾದ ಕಾರ್ಯನಿಂದ ಕುಂದುವುದು ದೆನಾ ಬ್ಯಾಪ್ತಾಂಕ್ಯನನ್ನೆಲ್ಲ ಅಕ್ಷರಮಿಸಿಕೊಂಡು ಸಾಮಾಜ್ಯವನ್ನಾಳಬೇಕೆಂದೇ ಜರ್ಮನಿಗೆ ಆಸೆ ಇದೆಂದೀಗ ಹೆಚ್ಚಿನವು ಜರ್ಮನಿಯ ನುಂದಾಳುಗಳೂ ಸರಕಾರದ ಕೈಗೊಂಬೆಗಳಾಗಿರುವ ಪತ್ರಿಕೆಗಳೂ ವಿವೇಕದಿಂದ ಆಡಬೇಕಾಗಿದೆ ಏಕೆಂದರೆ, ಇದೇ ಸಮಯದಲ್ಲಿ ಈ ಪತ್ರಿಕೆಗಳ ಹಿಂದಣ ವಸಾಹತುಗಳ ಮಾತ್ಕಿ ಟೀಕಿಸುವುದೂ ಒಂದು ಹೊಸ ಕುರುಹು ಭದ್ರವಾದ ಅಸ್ತಿಭಾರದ ಮೇಲೆ ಬ್ರಿಟಿಷರೂ ಜರ್ಮನಿಯೂ ಇಟಲಿಗಳೂ ವರಸ್ಪರವಾದ ಕರಾರಾಗಿರುವುದನ್ನು ಕಾಣುವ ಕನಸ, ಬ್ರಿಟಿಷರು ಸ್ವದೇಶ ಮತ್ತು ಜನಾಂಗರಕ್ಷಣೆಗೆ ಮಾಡುತ್ತಲಿರುವ ವಿರ್ಧಾರಗಳನ್ನು ಕಡಮೆ ಮಾಡುವುದೆರೆ ಅಥವಾ ತೃಪ್ತಿಸುವುದರಲ್ಲಿ ಯಾವ ಅರ್ಥವೂ ಇಲ್ಲ ವಿನಾನಗಳು ನಾಳೆಯೆ ಧ್ವಂಸವೃತ್ತಿಗೆ ಸಿದ್ಧವಾಗಬಹುದಲ್ಲವೆ?

ಪೆಟ್ಟು ತಿಂದ ಚೀನಿಯರ ದುರವಸ್ಥೆ

ಚೀನ ಜಪಾನಿಯರೊಳಗೆ ಘನಘೋರ ಸಂಗ್ರಾಮವು ನಡೆಯುತ್ತಲಿದೆ. ಒಂದು ವರ್ಷದಿಂದ-ಈಚೆಗೆ ಎಷ್ಟೋ ಮಂದಿ ಚೀನಿಯರು ಜಪಾನಿಯರ ಗುಂಡಿನ ಪೆಟ್ಟಿಗೆ ಬಲಿಯಾದರು. ಎಷ್ಟೋ ಮಂದಿ ಗಾಯಪಟ್ಟು ರಣ ಕ್ಷೇತ್ರದಲ್ಲಿ ನರಳಿದರು ಸತ್ತವರಂತೂ ಸಕ್ಕರು. ಅವರ ನೋವು ನರಳಿಕೆಗಳು ಅಲ್ಲಿಗೆ ಕೊನೆಗಂಡವು. ಆದರೆ ಗಾಯಪಟ್ಟು ಬದುಕಿದವರ ಸ್ಥಿತಿಗತಿಗಳು ಏನಾಗಿವೆ? ಅವರನ್ನು ಜಪಾನಿಯರಂತೂ ಮುಟ್ಟುವದಿಲ್ಲ ಚೀನಿಯರಿಗೆ ಅವರ ಆರೈಕೆ, ಸೇವೆ ಶುಶ್ರೂಷೆ ಮಾಡುವುದು ಅಸಾಧ್ಯವಾಗಿದೆ ಅವರಿಗೆ ಅದನ್ನು ಮಾಡಲಿಕ್ಕೆ ತಕ್ಕ ಧನಬಲವಿಲ್ಲ, ಜನಬಲವಿಲ್ಲ ಬಡಪಾಯಿಗಳಾದ ಗಾಯಪಟ್ಟ ಸೈನಿಕರು ರಣಕ್ಷೇತ್ರದಲ್ಲಿಯೇ ನರಳಿ ನರಳಿ ಸಾಯುತ್ತಾರೆ. ಇಲ್ಲವೆ ನರಿನಾಯಿಗಳ ಪಾಲಾಗುತ್ತಾರೆ

ಚೀನದಲ್ಲಿ ಜಪಾನಿಯರ ಹಕ್ಕಾಕಾಂಡವು ತಿನೇ ಶತಮಾನದ ಗಣಿಲೆನೆ ಇನವಿಗೆ ಅನುಕೂಲವಾಗಿ ನಡೆಯುತ್ತಿದೆಯಾದರೂ, ರಣಕ್ಷೇತ್ರದಲ್ಲಿ ಬಿದ್ದ ಸೈನಿಕರ ಪಾಡು ಮಾತ್ರ ೧೦೧೧ನೇ ಶತಮಾನಗಳ ಯುದ್ಧಕ್ರಮವನ್ನು ಅನುಸರಿಸಿದೆ. ರಣಕ್ಷೇತ್ರದಲ್ಲಿ ಗಾಯಪಟ್ಟವರ ಗೋಳನ್ನು ಕೇಳುವವರೇ ಇಲ್ಲ. ಬಹಳವಾಗಿ ಗಾಯಪಟ್ಟವರು ಚಿಕಿತ್ಸೆಯ ಅಭಾವದಿಂದಲೇ ಸಾಯುತ್ತಾರೆ. ಸಣ್ಣ ಸಣ್ಣ ಗಾಯಗಳಾದವರು ತಾವೇ ತಾವಾಗಿ ಸುರಕ್ಷಿತಸ್ಥಾನಗಳನ್ನು ಮುಟ್ಟಿಕೊಂಡು ಏನಾದರೊಂದು ಚಿಕಿತ್ಸೆಯನ್ನು ಮಾಡಿ ಪ್ರಾಣವನ್ನು ಉಳಿಸಿಕೊಳ್ಳುತ್ತಾರೆ ಆದರೂ ಕೂಡ ಹೀಗೆ ಪ್ರಾಣ ಉಳಿಸಿಕೊಳ್ಳುವವರ ಸಂಖ್ಯೆ ಗಾಯಗೊಂಡವರಿಗಿಂತ ಬಹಳ ಕಡಿಮೆ ಇರುತ್ತದೆ. ಎಲ್ಲಾದರೂ ಸಾವಿರದಲ್ಲಿ ಒಬ್ಬಿಬ್ಬರು ಹಾಗೆ ಬದುಕಿದ ಪುಣ್ಯವನ್ನು ಕಟ್ಟಿಕೊಳ್ಳುತ್ತಾರೆ.

ಚೀನೀ ಸೈನ್ಯದಲ್ಲಿ ಗಾಯಪಟ್ಟವರ ಆರೈಕೆಗೆ ಅಲ್ಲಿ ಶುಶ್ರೂಷಾದಳ ಅಥವಾ ಚಿಕಿತ್ಸಕರ ಮಂಡಲವು ಇರುವುದಿಲ್ಲವೆ ಎಂದು ಕೇಳಿದರೆ ಅಂಥ ದಳಗಳು ಅಲ್ಲಿ ಇವೆ ಪರಂತು ಅವು ಸಂಖ್ಯೆಯಲ್ಲಿ ಒಹಳ ಕಡಿಮೆಯಾಗಿರುವವು ಅನೇಕಮಂದಿ ಚಿಕಿತ್ಸಾಶ್ರಮದಲ್ಲಿ ಯಾವ ತರಹದ ಅಭ್ಯಾಸ ಅನುಭವ ಶಿಕ್ಷಣ ಇಲ್ಲದವರಾಗಿರುತ್ತಾರೆ ಬಹಳಮಂದಿ ಸ್ವಾರ್ಥಿಗಳೂ, ಬೇಸಿದ ಕಾಲದಲ್ಲೇ ಮುಕ್ಕುವವರೂ ಆಗಿರುತ್ತಾರೆ. ಈ ದಳಗಳಲ್ಲಿ ಯಾವ ಕರಣ ಶಿಸ್ತು ಸಮರ್ಪಕತೆಗಳಿರುವುದಿಲ್ಲ ಎಲ್ಲಿ ಈ ದಳಗಳಿಗೆ ಹೆಚ್ಚು ಆಸಕ್ತಿಕತೆ ಇರುತ್ತದೋ ಅಲ್ಲಿ ಆ ಧೂರ್ತಗಳು ಇರುವುದಿಲ್ಲ ಮತ್ತೆಲ್ಲಿ ಅವುಗಳ ಅವಶ್ಯಕತೆ ಇರುವುದಿಲ್ಲವೋ ಅಲ್ಲಿ ದಳಗಳು ತಂಡಕಟ್ಟಿಕೊಂಡು ಇರುತ್ತವೆ ಇವೆಲ್ಲಾ ಲೋಪದೋಶಗಳಿಂದ, ಅಂಥದಳಗಳು ಇದ್ದೂ ಇಲ್ಲದಂತಾಗಿವೆ

ಗ್ರಾಮಪಟ್ಟವರು ಹಾಳು ಮುನಿಗಳಲ್ಲಿ ಕೊಳೆಕೆಸರು ತುಂಬಿರುವ ಹೊಲಸು ವ್ರಣಗಳಲ್ಲಿ ವಾಸಮಾಡಿಕೊಂಡು ಇರಬೇಕಾಗುತ್ತದೆ ಇದ್ದರಿಂದ ಗಾಯದಿಂದ ಅವರು ಸಾಯುವದಕ್ಕಿಂತಲೂ ಹೆಚ್ಚಾಗಿ ಗಾಯದಲ್ಲಿ ರೋಗಾಣುಗಳು ನಿಷ್ಕ್ರಿಯಿಗಳೂ ಸೇರಿದ ಕಾರಣದಿಂದ ಆ ಬಡವಾಯಿಗಳು ಅಕಾಲ ಮರಣವನ್ನು ಹೊಂದುವುದು ಹೆಚ್ಚಾಗಿರುವುದು ರೆಡ್‌ಕ್ರಾಸ್ ಸೊಸ್ಯಾಟೆಯವರೂ ಸೈನಿಕ ವೈದ್ಯಕೀಯ ಮಂಡಲದವರೂ, ಹೀಗೆ ಸರಕಾರಿಗಳಿಂಗೆ ಸಾಯುವ ಜನರನ್ನು ಬದುಕಿಸಲಿಕ್ಕೆ ಶತಪ್ರಯತ್ನಗಳನ್ನ ಮಾಡುತ್ತಾರೆ ಹಾಗೆ ಮಾಡಿದರೂ ಕೂಡ ಅವರು ತಮ್ಮ ಕಾರ್ಯಗಳಲ್ಲಿ ಪೂರ್ಣ ಸಫಲರಾಗುವುದಿಲ್ಲ ಯಾಕಂದರೆ ಅಗತ್ಯವಾದ ಕಾರ್ಯದ ಪ್ರಮಾಣವು ಸಮುದ್ರದಷ್ಟು ದೊಡ್ಡದಾಗಿರುವಾಗ, ಇವರ ಆ ಶತಪ್ರಯತ್ನಗಳೆಂಬವು ಸಮುದ್ರದಲ್ಲಿ ಹಾಕಿದ ಸಣ್ಣ ಜಾಜಕಾಯಿಯಂತೆ ಅಲ್ಪವಾಗಿರುತ್ತದೆ

ಚೀನೀಯರಿಗೆ ಹಣದ ಅಭಾವವು ಕೂಡ ಕುಂಬ ಇರುತ್ತದೆ ಆದ್ದರಿಂದ ರಣರಂಗದಲ್ಲಿರುವ ಆಸ್ಪತ್ರೆಗಳು ಅಪೂರ್ಣವಾಗಿವೆ ಅವುಗಳಲ್ಲಿ ಚಿಕಿತ್ಸೆಗೆ ಬೇಕಾದ ಎಲ್ಲಾ ಸಲಕರಣೆಗಳಿಂಗಲೀ ಸಾಹಿತ್ಯೋಪಕರಣಗಳಿಂಗಲೀ, ಮದ್ದು ಔಷಧಿ, ಮುಲಾಮು ಪಟ್ಟಿಗಳಿಂಗಲೀ ಇರುವುದಿಲ್ಲ ಅವುಗಳನ್ನು ಪೂರೈಸಿಕೊಳ್ಳಲಿಕ್ಕೆ ಸರಕಾರದವರೊಡನೆ ಹಣವೂ ಇರುವುದಿಲ್ಲ ಈ ಆಸ್ಪತ್ರೆಗಳು ಇರುವುದು ಎಲ್ಲಿ— ಅಂದರೆ, ದೇವಸ್ಥಾನ, ಛಂದಸಾಲೆ, ಅಂಗಡಿ, ಮಂಗಿಗೆಗಳಲ್ಲಿ! ಅಲ್ಲಿಗೆ ಚಿಕಿತ್ಸೆಗೆ ಬಂದ ಸೈನಿಕರು ಸರಿಯಾದ ಚಿಕಿತ್ಸೆಯು ಪಡೆಯುವುದು ದೂರವಾಗಿ, ಹೊಟ್ಟೆತುಂಬ ಅನ್ನಾಹಾರಗಳನ್ನು ಕೂಡ ಪಡೆಯಲಾರದವರಾಗಿ, ನೀರು ನೇರಿ ಕೂಡ ಜವುಗು ನೆಲಗಳಲ್ಲಿ, ಜಾಸಿಗೆ ದಿಂಬುಗಳಲ್ಲದೆ ಮಲಗಿಕೊಂಡು ದಿನಗಳನ್ನ ಕಳೆಯಬೇಕಾದಿತೆ ಈ ಆಸ್ಪತ್ರೆಗಳು ನನ್ನುದೇಶದ ಕಕ್ಕಲುಲಾಟಿಕೋನಗಳಿಗಿಂತ ನಿಕೃಷ್ಟವಾಗಿರುವುವು

ಸ್ವಾರ್ಥಿಗಳಾದ ಅಧಿಕಾರಿಗಳು—ಬೇಸಿದ ಮುಂಡೆಯು ಮುಕ್ಕಿದ್ದನ್ನೇ ಲಾಭಮಾಡಿಕೊಳ್ಳುವಂತೆ—ಗಾಯಗೊಂಡ ಸೈನಿಕರಿಗಾಗಿ ಸರಕಾರವು ಒದಗಿಸಿಕೊಟ್ಟ ಸ್ವಲ್ಪದರದಲ್ಲಿ ಹೆಚ್ಚಿನ ಅಂಶವನ್ನು ತಾವು ನುಂಗಿಬಿಡುವರು ಮನೆ ಸುಟ್ಟಾಗ ಹಪ್ಪಳ ಸುಡಲಿಕ್ಕೆ ಹೋಗುವವರ ಹಾಗೆ ಇವರ ಮನೋವೃತ್ತಿ ಇರುತ್ತದೆ ಹೀಗೆ ಲಾಭಮಾಡಿಕೊಂಡು ಹಣಗಳಿಸಿದ ಚೀನೀ ಅಧಿಕಾರಿಗಳು ಅಲ್ಲಿರು ಬಾ ನುಂದಿ ಇವರಂತೆ ಇವರಿಗೆ ಅನುಕೂಲವಾಗಿ ಸೇನಾಧಿಕಾರಿಗಳು ಕೂಡ ಬಲ್ಲಿ ವಂತ ವರ್ಜಿಯಂದ ಸೇವಕರಾದುವವರನ್ನು ಗಣ್ಯಕ್ಕೆ ತರುವುದೇ ಇಲ್ಲ. ಅಂಥ ಚಿಕಿತ್ಸಕರನ್ನು ಅಲಕ್ಷ್ಯಮಾಡಿ ಬಿಡುತ್ತಾರೆ ಆ ಧೂರ್ತರಿಂದ ಹೆಚ್ಚಿನ ಸಂದರ್ಭಗಳಲ್ಲಿ ಸ್ವಾರ್ಥಿಗಳ ಚೇಲೆಯೇ ಎಂದುಹೋಗುತ್ತದೆ ಸೇನಾಧಿಕಾರಿಗಳು ಎಲ್ಲಿ ಯಾವಾಗ ಚಿಕಿತ್ಸಕರ ಸಹಾಯವು ಹೆಚ್ಚಿಗೆ ಬೇಕಾಗುವುದೆಂಬುದನ್ನು ಹೇಳುವುದಿಲ್ಲ ಸೇನಾಧಿಕಾರಿಗಳಲ್ಲಿಯೂ ಚಿಕಿತ್ಸಕರಲ್ಲಿಯೂ ಸ್ವೇಚ್ಛಸಾಹಾರ್ದಭಾವನೆಗಳಿರುವುದಿಲ್ಲ ಅದರ ಬದಲಿಗೆ ಸೇನಾಧಿಕಾರಿಗಳು ತಮ್ಮನ್ನು ಉಚ್ಚರಿಂದೂ ಚಿಕಿತ್ಸಕರನ್ನು ಅಲ್ಪರೆಂದೂ ತಿಳಿಯುತ್ತಾರೆ

ಚೀನದಲ್ಲಿ ಗಾಯಗೊಂಡವರ ಸರಿಯಾದ ಚಿಕಿತ್ಸೆಗೆ ಇನ್ನೂ ಕೆಲವು ಅಡಚಣೆಗಳಿವೆ ಚೀನಿಯರನ್ನು ಯುದ್ಧದಲ್ಲಿ ಗಾಯಮಾಡಿದ ಜಪಾನಿಯರನ್ನು ಕೈಸೆರೆ ಹಿಡಿಯುವುದಿಲ್ಲ ಅದರ ಬದಲಿಗೆ ಅವರ ಬಗ್ಗೆ ಯಾವ ಚಿಕಿತ್ಸೆಯು ಏರ್ಪಾಡೂ ನಡೆಯುದಂತೆ ನೋಡುತ್ತಾರೆ ಅವರು ಬೇಕು ಬೇಕಾದ್ದೆ ಗಾಯಗೊಂಡವರಿಗಾಗಿ ಇರುವ ಆಸ್ಪತ್ರೆಗಳು ಚಿಕಿತ್ಸಾಲಯಗಳಲ್ಲಿ ಮೊದಲಿಂದವುಗಳ ನೀಟಿಯಿಂದ ಸಿದ್ಧವಾದ ಗಾಯಗಳ ವಿವರಣೆಯನ್ನು ಸುರಿಸಿ ಅವುಗಳನ್ನು ಸಂಪೂರ್ಣ ನಾಶಮಾಡುತ್ತಾರೆ ಆದರಿಂದ ಗಾಯಗೊಂಡವರಿಗೆ ಆಗ ಬೇಕಾದ ಚಿಕಿತ್ಸೆಯು ಜಪಾನಿಯರ ಗೋಚರಕ್ಕೆ ಬಾರದಹಾಗೆಯೇ ನಡೆಯಬೇಕು.

ಕಳೆದ ಜುಲ್ಯಾತಿಂಗಳ ಅಂತ್ಯಭಾಗದಲ್ಲಿ ಕೊಕಿಂಗ-ನಾಂಚಿಂಗ ರಣಕ್ಷೇತ್ರದಲ್ಲಿ ಒಂದು ದೊಡ್ಡ ಸಂಗ್ರಾಮವು ನಡೆಯಿತು. ಸಾವಿರಾರುಮಂದಿ ಚೀನೀ ಸೈನಿಕರು ಆಹತರಾದರು. ಚೀನೀ ಚಿಕಿತ್ಸಕ ದಳದ ಪ್ರಧಾನರಾದ ಡಾಕ್ಟರ್ ಲೂ-ಚಿನ್-ಚ್ಹೇ ಅವರು ಸಮೀಪದಲ್ಲಿಯೆ ಒಂದು ದೇವಾಲಯದಲ್ಲಿ ಗಾಯಗೊಂಡ ಚಿಕಿತ್ಸೆಗೆ ಎಲ್ಲಾ ಏರ್ಪಾಡುಗಳನ್ನು ಮಾಡಿದ್ದರು ಡಾಕ್ಟರ್ ಚ್ಹೆ ಅಂದರೆ ಚೀನೀ ಸೈನಿಕ ಭಾಗ್ಯದೇವತೆ ಅವರು ರಣಕ್ಷೇತ್ರದ ಸಮೀಪದಲ್ಲಿಯೇ ಇರುವರೆಂಬುದು ಜಪಾನಿಯರ ಹೇಗೋ ತಿಳಿದು, ಅವರ ಆಸ್ಪತ್ರೆಯನ್ನು ಗುರುತು, ಆ ದಿನ ರಾತ್ರಿ ಆಸ್ಪತ್ರೆಯನ್ನು ಬೊಂಬಾಕ ಸಂಪೂರ್ಣ ನಾಶಮಾಡಿಬಿಟ್ಟರು. ಡಾಕ್ಟರು ಬದುಕಿ ಬರುವುದೇ ಕಷ್ಟವಾಯಿತು ಅವರು ತಮಗಾದ ಗಾಯಗಳನ್ನು ಕೂಡ ಲೆಕ್ಕಿಸದೆ ಕೊಡಲೇ ಹಂಕೋವಿಗೆ ಹಾರಿಬಂದು ಎಲ್ಲಾ ವೈದ್ಯಕೀಯ ಆವಶ್ಯಕತೆಗಳನ್ನು ಪೂರೈಸಿಕೊಂಡು ಮರುದಿನವೇ ಆ ರಣಕ್ಷೇತ್ರಕ್ಕೆ ಹೊರಟುಹೋದರ

ಹೀಗಿದ್ದರೂ ಕೂಡ ಚೀನೀ ಸೇನಾಧಿಕಾರಿಗಳೂ, ಸರಕಾರವು ಈಗೀಗ ಉತ್ತಮ ಚಿಕಿತ್ಸಕ ದಳಗಳ ಆವಶ್ಯಕತೆಯನ್ನು ಮನಗಾಣಲಾರಂಭಿಸಿದ್ದಾರೆ ಚೀನೀ ಡಾಕ್ಟರರಲ್ಲಿ ಸ್ಫೈರ್ಯ ಧೈರ್ಯ, ಸೇವಾಭಾವನೆಗಳಿರುವವರಿಗೆ ಕಡಿಮೆ ಏನೂ ಇರುವುದಿಲ್ಲ ಅವರೀಗ ರಣಕ್ಷೇತ್ರಕ್ಕೆ ಹೋಗಲಿರುವ ಡಾಕ್ಟರರು ಉಪಚಾರಕರು ಮೊದಲಾದ ೩೦೦ ಮಂದಿಗೆ ಬೇಕಾದ ಅನುಭವ ಅಭ್ಯಾಸಗಳನ್ನು ಕೊಡಲಿಕ್ಕೆ ದೇವದೇವಂದು ಶಾಲೆಯನ್ನೇ ತೆರೆಯುವ ವಿಚಾರವನ್ನು ಮಾಡಿದ್ದಾರೆ ಆದರೆ ಹೊಸ ಅಭ್ಯಾಸವು ಇರುವುದರಿಂದ ಈಗ ಬರೇ ಸಣ್ಣ ಪ್ರಮಾಣದಲ್ಲಿ ಆರಂಭಿಸಿದ್ದಾರೆ ಆಗಿರುವ ಅನುಭವದಿಂದ ಮುಂದಿನ ಯೋಜನೆಗಳನ್ನು ಸಿದ್ಧಮಾಡಿಕೊಳ್ಳುವರು

ಓಂದು ಬಾರಿ ಪರೀಕ್ಷಿಸಿರಿ!

ನಮ್ಮಾಜನರಿಗೆ ನನು "ಸಾರಥಿ ನಸ್ಯ"ವನ್ನ ಕೊಡಕೊಳ್ಳಿರಿ ಎಂದ ತಿಳಿಸಲಿಕ್ಕೆ ನನಗೆ ಒಹಳ ಸಂತೋಷವಾಗುತ್ತದೆ ಒಮ್ಮ ಬಿಟ್ಟುಕ ನಸ್ಯವು ನಿಮ್ಮ ಆರೋಗ್ಯವನ್ನ ಉತ್ತೇಜನಗೊಳಿಸುತ್ತವೆ ಎಲ್ಲ ರೋಗಿಗೆ ತಕ್ಕಹಾಗಿಗೆ ಮತ್ತ ಎಲ್ಲವರಿಗೂ ಅನುಕೂಲ ಬಾದ ದರವ್ಯವಸ್ಥಲಾಗಿದೆ

ಸಾರಥಿ ನಸ್ಯವು ಜಾಸವಳ್ಳಿಯೂ, ರುಚಿಯಲ್ಲಿಯೂ ಬಲ್ಲಾದಲ್ಲಿಯೂ, ಸುವಾಸನೆಯಲ್ಲಿಯೂ ಉತ್ತಮವಾಗಿದೆ.

ಸಾ. ೧ ಸಾರಥಿ ನಸ್ಯ ೧ ಪೀಸಕ್ಕೆ ರೂ ೩ ೯-೦ ಸಪೆರ್ ಸಾರ್ಥ ಸಾರಥಿ ನಸ್ಯ ೧ ಪೀಸಕ್ಕೆ ರು ೫ ೦-೦

(ವಿ ಪಿ ಮಾಸ್ತಿ ಪೈಸೆ ಚಾರ್ಜು ಇಲ್ಲಾವೆ

ಏಜೆಂಟರು ಬೇಕಾಗಿದ್ದಾರೆ

ಎಶ್ರಸ —

ಎ ಪಿ ಸಾರಥಿ

ಮೆನ್ಯುಫಕ್ಚರ್ಸ್ ಒಫ್ ಮೆಡಿಸಿನ್ಸ್ ಸ್ಟಫ್, ಪಿ ಬಿ ನಂಬ್ರ 47 ಮದ್ರಾಸ

ಉಬ್ಬಸ ಪರಿಹಾರಕ

ತಕ್ಷಣ-ನಿಶ್ಚಿತ-ಶಾಶ್ವತ

TOGO
ASTHMA TABLETS
GIVE IMMEDIATE RELIEF

ನೋಡಾರು ಸಾವಿರ ಜನರು ಉಬ್ಬಸದಿಂದ ನರಳಿದ್ದು ಈಗ ಅಂಥಾ ಉಬ್ಬಸದಿಂದ ಗುಣಹೊಂದಿದವರು ಟೊಗೊ ಬಿಲ್ಲೆಗಳು ಜಗತ್ತಿಗೆಲ್ಲ ಶ್ರೇಷ್ಠವಾದುದೆಂದು ಪ್ರಸಿದ್ಧಿ ಪಡಿಸಿದ್ದಾರೆ ಅದನ್ನು ನುಂಗಿದ ತಕ್ಷಣವೇ ಆಶ್ಚರ್ಯಕರವಾದ ಗುಣವನ್ನುಂಟುಮಾಡುತ್ತದೆ ಇನ್ನಾವ ಬಿಲ್ಲೆಗಳಲ್ಲ ಇಂದಂತಾ ಔಷಧಿಗಳು ಈ ಬಿಲ್ಲೆಗಳಲ್ಲಿರುವುದರಿಂದ ಮುಂದಿನ ಯಾವ ಬಾಧೆಯನ್ನೂ ನಿವಾರಿಸುತ್ತವೆ ಹೀಗಾವ ಎಷ್ಟು ಅತ್ಯಧಿಕವಾದ ಬೆಲೆಯ ಒಳ್ಳೆಯ ಔಷಧಿಯನ್ನು ಪಡೆಯುತ್ತದೂ ಅದು ಟೊಗೊಗಿನಿಂದ ಮಾತ್ರ

ಒಬ್ಬ ಲೇಡಿ ಡಾಕ್ಟರರು ಈ ತಳಗಿನಂತೆ ಬರೆಯುತ್ತಾರೆ

"ನಾನು ನಿನ್ನ ನಿನ್ನ ಟೋಗೊ ಬಿಲ್ಲೆಗಳನ್ನು ಕೊಂಡುಕೊಂಡೆನು ಅವು ನನ್ನ ತಾಯಿಯ ಉಸ್ಮಸ್ಥದ ವಿಷಯ ಆಶ್ಚರ್ಯಕರವಾದ ಗುಣವನ್ನುಂಟುಮಾಡಿದವೆ"

ಇನ್ನೊಬ್ಬ ಡಾಕ್ಟರರು ಬರೆಯುತ್ತಾರೆ— ನಾನು ಇತ್ತೀಚೆಗೆ ಟೊಗೊವನ್ನು ಒಂದು ಉಬ್ಬಸದ ರೋಗಿಯ ಮೇಲೆ ಉಪಯೋಗಿಸಿದೆ ಅದು ಪ್ರಜ್ಞಾಮಯವೂ ಆ ಬಾಧೆಗೆ ಅತ್ಯಮವಾದ ಔಷಧಿಯಾಗಿರುತ್ತದೆ ರೋಗಿಯು ಐದೇ ನಿಮಿಷಗಳಲ್ಲಿ ಗುಣವಾಗುತ್ತಾ ಬಂದನು

ಅದುದರಿಂದ ಇನ್ನು ತಡಮಾಡಬೇಡಿರಿ ಇಂದೇ ಒಂದು ಟೊಗೊವಿನ ಬಾಟ್ಲಿಯನ್ನು ಕೊಂಡುಕೊಳ್ಳಿರಿ ಮತ್ತು ಇನ್ನೊಮ್ಮೆ ಜೀವಪರ್ಯಂತ ಸುಖವನ್ನು ಕೊಂಡು ನಿಮ್ಮ ಕೆಲಸಕ್ಕೆ ತೊಡಗಿರಿ ರಾತ್ರಿ ಸುಖವಾದ ನಿದ್ದೆಯನ್ನು ಪಡೆಯಿರಿ

ಎಲ್ಲಾ ಕೆವಿಸ್ಕರಲ್ಲಿ ಬಾಟ್ಲಿಗೆರೂ ೨ರಂತೆ ಮಾರಲ್ಪಡುವುದು ವರೀಕ್ಷೆಗಾಗಿ ಬಾ ರೂ 2

ಗ್ರೇಟ್ ಬ್ರಿಟನ್ನಿನಲ್ಲಿ ಅತ್ಯಂತ ಶಾಸ್ತ್ರೀಯ ರಿತ್ಯಾ ತಯಾರಾದದ್ದು.

ಇಂಡಿಯದ ಸೋಲ್ ಏಜೆಂಟ್ಸ್—**ಎಸ್ ಕುಮಾರ್ ಮತ್ತು ಕಂಪನಿ,**
ಹೋರ್ನಬಿ ರೋಡ್ ಫೋರ್ಟ್ ಬೊಂಬಾಯಿ

ಸ್ಟೋಕಿಸ್ಟರು—**ದಿ ಹೋಂಬೆ ಸ್ಟೋರ್ಸ್**, ಹಂಪನಕಟ್ಟೆ, ಮಂಗಳೂರು.

ಇನ್ನು ಕೆಲವೇ ದಿವಸಗಳಲ್ಲಿ ಚೀನೀ ಚಿಕಿತ್ಸಕರು ಹೊಸ ಯೋಜನೆಗಳನ್ನು ಕಾರ್ಯಗತಮಾಡಲಿಕ್ಕೆ ಪ್ರಾರಂಭಿಸುವರು ಆಗ ಅವರ ಕಾರ್ಯಗಳು ಹೆಚ್ಚು ಸಫಲವಾಗುವವೆಂಬ ಆಶಾಭಾವನೆಯಿದೆ

ನೋಟಿಸು

ಕಾಸರಗೋಡು ಡಿ ಮುನ್ಸೀಫ್ ಕೋರ್ಟಿನಲ್ಲಿ

O P No 173 1938
R I A No 1604/1-8

1 ವಂಸ್ಮೆಬ್ಬು ಕಂಬಾರ ಕುಞಾಂಬು ಹಾಜಿ ಹೆಂಡ್ತಿ ವ ಮೃತಪಟ್ಟ ಮಹಮ್ಮದ ಶೆರಿಫರ ತಾಯಿ. 2 ಬೀವಾತುಮ್ಮ ವೃತಪಟ್ಟ ಮಹಮ್ಮದ ಶೆರೂರ ಪಿದನಿ 3 ಅಹಮ್ಮದ ಪಾಲಿ ಶೆರೂಲ್ ವೃತಪಟ್ಟ ಮಹಮ್ಮದ ಶೆರಿಫರ ವರ್ಗ 4 ಖದಿಜಬಿ ಶೆರೂಫ್ ಸದ್ರಿ ವೃತಪಟ್ಟ ವ ಹಮ್ಮದ ಶೆರೂರ 5 ಆಯಿಬ ಶೆರಿಫರ್ ದ ಶೆರೂರ 6 ಅಬ್ದುಲ್ಲ ರಹಿಮ ಶೆರೂಲ್ ವೈಗರ ಮ ಳಿಕೆಯ ಇವರ ಗಾರ್ಡಿಯ 7 ಜೈನಬಿ ಶೆರೂಲ ನಾ ಕ್ಷೇವ ಜಂತಕೆಳು ಅ 8 ಮೊಹಿನೆ ಶೆರೂಲ್ ಸರ ತಾಯಿ

೨ನೇ ಅರ್ಜಿದಾರಳು ಎಲ್ಲರೂ ಕಾಸರಗೋಡು ತಾಲೂಕು ಅಂಗಡಿ ಮೊಗರು ಗ್ರಾಮದಲ್ಲಿ ವಾಸರು

1ನೇ ಅರ್ಜಿದಾರಳ ಮಗ ಪಟ್ಟಿನೇ ಅರ್ಜಿದಾರಳ ಗಂಡ ಮತ್ತು ತಿಂದ 8ನೇ ಅರ್ಜಿದಾರರಿಗೆ ಅರ್ಜಿದಾರರ ಮೇಲೆ ವೃತಪಟ್ಟ ವ್ಯಹಮ್ಮ ಶೆರೂರರವರಿಗೆ ಹೊಣಕಾಳ್ಗಳಿಂದ ಬರಬೇಕಾದ ಬಾಕಿ ವ್ಯವಹಾರಗಳನ್ನು ಸಲುವಹಿಸುವರೆಗೆ ಅರ್ಜಿದಾರರು ಕೊಡೋಣದ ವಾರಿಸ್ ಸರ್ಟಿಫಿಕೇಟಿನ ಇತರ ಸಾಲುಗಳನ್ನು ಸಕಾ ಕೊಡಿಸಿ ಕೊಡಬೇಕಾಗಿ ಅರ್ಜಿದಾರರು ಡಾಕ್ಟರ್ ಮೊಹಿಯುದ್ದೀನ್ ಮೊಂಟ್ ಅರ್ಜಿಯು ತಾ 18-10-38 ಕ್ಕೆ ಇಟ್ಟಿರುವುದರಿಂದ ಆಕ್ಷೇಪವುಳ್ಳವರು ಆ ದಿವಸ ಜಾಹೀರುಪಡಿಸಿಕೊಳ್ಳಕ್ಕೆ ಈ ಮೂಲಕ ತಿಳಿಸಲಾಗಿದೆ.

Kasaragod 28-9 1938. } (Sd) **P. Ahmad** Advocate for Petitioner

ಈಗ ಸದ್ಯಕ್ಕೆ ಯುದ್ಧವಿಲ್ಲ!

ಹಿಟ್ಲರನಿಗೆ ಇನ್ನೂ ಜೇಕಾಡುವು ವಸಾಹತು

ಚೆಂಬರ್‌ಲೇನರು ಅಧಿಕಾರ ತ್ಯಜಿಸುವರೆ?

ಶಾಂತಿ ಪರಿಷತ್ತು ಜರಗುವುದೆ? ರೈಕ್ಯರು ಕೆಟ್ಟರು!

ಕಳೆದವಾರ ಹಿಕ್ಕೋಬರ ತಾ. ೨೮ರೊಳಗೆ ಯುದ್ಧವುಂಟಾಗಬಹುದೆಂದು ಪ್ರಕಟವಾಗಿ ಕ್ರಮ್ಮ, ಯುದ್ಧವು ಕುರಿತು ಆಲೋಚಿಸಲು ಬ್ರಿಟಿಷ್ ಕ್ಯಾಬಿನೆಟ್ ಮೆಂಬರ್ಸ್ ಸಭೆಯು ಆಗಲೆ ಸೇರಿ ಕ್ತು. ಅಂದಿನ ಆಧಿವೇಶನವು ಮುಗಿಯುವುದಕ್ಕಾಗಿ, ಮತ್ತೊಮ್ಮೆ ಬರಬೇಕು, ಸಂಧಾನ ಮಾತುಕತೆಗಳಾಗಬೇಕೆಂದು ಹಿಟ್ಲರನ ಪಕ್ಷದವರು ಹೇಳುತ್ತಿರುತ್ತಾರು. ಚೆಂಬರ್‌ಲೇನರು ಹಿಟ್ಲರನಲ್ಲಿಗೆ ವಿಮಾನದಲ್ಲಿ ಧಾವಿಸಿದರು. ಮಾತುಕತೆಗಳಾದುವು. ಈ ಮಾತುಕತೆಗಳಂತೆ ಮ್ಯೂನಿಚ್ ನಗರದಲ್ಲಿ ಇಟಲಿಯ ಮುಸಲೆನಿ, ಫ್ರಾನ್ಸಿನ ಡಾಲ್ಡಾ ಡಿಯರ್, ಇಂಗ್ಲಾಂಡಿನ ಚೆಂಬರ್‌ಲೇನ್, ಜರ್ಮನಿಯ ಹಿಟ್ಲರ್, ಈ ನಾಲ್ವರಿಂದ ಕೂಡಿದ ನಾಲ್ಕು ಪ್ರಭುತ್ವಗಳ ಪರಿಷತ್ತೊಂದು ನಡೆಯಿತು. ರೈಕ್ಯರನ್ನು ಕರೆಯದೆ, ರೈಕ್ಯರ ಕುರಿತು ಇತ್ಯರ್ಥಗಳಾದವು. ಜರ್ಮನರು ಅತ್ಯಧಿಕ ಸಂಖ್ಯೆಯಲ್ಲಿರುವ ಸುಡಾಟನ್ ನ್ಯಾಂಕ್ಯವು ಹಿಟ್ಲರ ಸರಕಾರಕ್ಕೆ ಹೋಗಬೇಕೆಂದು ಇತ್ಯರ್ಥವಾಯಿತು. ಅಲ್ಲದೆ ಮಿಕ್ಕುಳಿದ ನ್ಯಾಂಕ್ಯಗಳ ಮತ್ತು ಗಡಿಯನ್ನು ಹಾಕುವ ಕುರಿತು ಮುಂದಕ್ಕೆ ಆಲೋಚನೆಗಳಾಗಬೇಕೆಂದಾಯಿತು. ಈ ಒಪ್ಪಂದದ ಪ್ರಕಾರ ಜರ್ಮನ್ ಸೇನೆಗಳು ಕೆಲವು ಸಡಾಟನ್ ಪ್ರದೇಶಗಳನ್ನು ಸುಗ್ಗಿಯೆಬಿಟ್ಟಿರುವರು. ಆದರೆ ಜರ್ಮನರ ನುಗ್ಗಾಟವು ಅತಿ ಶಾಂತತೆಯಿಂದ ನಡೆಯುತಿರುವು ಮಾರ್ತೆಯಿದೆ ಇನ್ನೆ ಅಲ್ಲ ಇನ್ನು ಮುಂದ ಕೈ ಯುದ್ಧಕ್ಕೆ ಕಾರಣಗಳು ಬಾರದಿರುತಿಯಲ್ಲಿ ಫ್ರೆಂಚ್‌ನಿಗೂ, ಇಂಗ್ಲಾಂಡಿಗೂ, ಜರ್ಮನಿನಿಗೂ ಫ್ರಾನ್ಸಿಗೂ, ಕಾರಣಾಗಿಬಿಟ್ಟವು. ಬೇಲಿನ ಈ ಸಂಧಾನ ಮಾತುಕತೆಗಳಲ್ಲಿ ರಷ್ಯಾಕ್ಕೆ ಪ್ರವೇಶಕೊಡಲಿಲ್ಲವಾಗಿತ್ತು ಕಾರಣ ಸೋವಿಯಟ್‌ರೊಡನೆ ಕರಾರು ಮಾತುಕತೆಗಳನ್ನು ನಡೆಯಿಸಲು, ಹಿಟ್ಲರ್ ಮುಸಲಿನಿಯರು ಸಿದ್ಧರಿಲ್ಲದಿರುವುದರಿಂದ

ಮ್ಯೂನಿಚ್ ಒಪ್ಪಂದವಾಯಿತಷ್ಟೆ ಪಾರ್ಲಿಮೆಂಟ್ ಸಭೆ ಜರಗಿತು ಸರಕಾರದ ವಿರೋಧಪಕ್ಷದವರು, ಚೆಂಬರ್‌ಲೇನರ ಸರಕಾರಿದ ಬಹಿರ್ ವ್ಯವಹಾರದ ನೀತಿಯನ್ನು ತೀವ್ರವಾಗಿ ಖಂಡಿಸಿದರು ಚೆಂಬರ್‌ಲೇನರ ಮೇಲಿನ ವ್ಯವಹಾರದಿಂದ ಯುದ್ಧದಿನವು ಸ್ವಲ್ಪ ಮುಂದುವರಿಸಲಾಗಿದೆ, ಯುದ್ಧಕಾರಣಗಳು ಇನ್ನೂ ಬಲವಂತರವಾಗಿವೆ, ಎಂದು ವಿರೋಧ ಪಕ್ಷದ ಮೆಜರ್ ಆಟ್ಲಿಯವರು ವಾದಿಸಿದರು

ಹಿಟ್ಲರನು ಯಾವ ಕರದ ಸಂಧಾನ ಕರಾರುಗಳನ್ನು ಇಪ್ಪರವರೆಗೆ ಮುನ್ಸಿಸಿದವನಲ್ಲ ಸದ್ಯಕ್ಕೆ ತನ್ನ ಕಾರ್ಯಸಾಧನೆಯಾದ ಮೇಲೆ ಮುಂದಕ್ಕೆ ಏನು ಮಾಡಲಿವ್ವಾನೆಂಬು ನೋಡ ಬೇಕು

ಸೋವಿಯಟ್ ರಷ್ಯಾ ಮೊದಲಾದ ರಾಷ್ಟ್ರಗಳನ್ನು ಕರೆದ್ದು ಶಾಂತಿಪರಿಷತ್ತೊಂದನ್ನು ಜರಗಿಸಬಾರದೆ, ಎಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈಗ ಸರಕಾರದ ವಿರೋಧಪಕ್ಷದ ಲೆಬರ್ ವಂಗಡದ ನಾಯಕರಾದ ಮೆಜರ್ ಆಟ್ಲಿಯವರ ಸ್ಪಶ್ಟ ಚೆಂಬರ್‌ಲೇನರಿಗೆ

ಒಸ್ಟೇಲಿಯದ ಮಂತ್ರಿಗಳು (ಇತರ ವಸಾಹತುಗಳ ಮಂತ್ರಿಗಳ ಹಾಗೆಯೇ ಇಂಬರ್‌ಲೇನರಿಗೆ ಒಕ್ಕಣಿ ಪೂರ್ವಕವಾಗಿ ಬೆಂಬಲ ವಿತ್ತುದಕ್ಕಾಗಿ, ಹಿತಚಿಂತಕರೆಲ್ಲರು ಬ್ರಿಟಿಷ್ ಸಾಮ್ರಾಜ್ಯದಿಂದ ನನ್ನ ಬೆಂಬಲಕ್ಕೆದ್ದುದಕ್ಕೆ ವಂದನೆಗಳನ್ನು ಚೆಂಬರ್‌ಲೇನರಿಂದ ಪಡೆದಿರುವರು

ಲಂಡನ್ನು ರಕ್ಷಣೆಯ ವಿರ್ವಾಡುಗಳ ಬಿಗಿಯೂದ ವ್ಯವಸ್ಥೆ ಸ್ವಲ್ಪ ಸಡಿಲು ಮಾಡಲಾಗಿದೆ ಕೊನೆಗೆ ಯುದ್ಧ ವೇಷ ತಳೆದವರೆಲ್ಲರು ರಜೆ ನ್ಹೇಲೆ ಮನೆಗೆ ಕೆರಳಬಹುದು, ಆದರೆ ಎರಡೇ ತಾಸು (ನೋಟೀಸು ಕೆಲ್ಲುವುದರೊಳಗೆ) ಮರಳಿ ಬೇಕು ಎಂದಾಜ್ಞೆ

ನೌಕಾಸೇನಾ ವಿಭಾಗಾಧ್ಯಕ್ಷ ವಿಂಡಫ್ ಕೂಪರ್ ಇವರು–ಚೆಂಬರ್ಲೇನರ ಪರರಾಷ್ಟ್ರ ನೀತಿಗೆ ಸೋತು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು ಬೇರೆ ಯಾವ ಮಂತ್ರಿಗಳೂ ರಾಜೀನಾಮೆ ಕೊಡುವುದಲ್ಲ (ಇಡನ್ ಸಾಹಿಬರ ರಾಜೀನಾಮೆ ಮೊದಲೇ ದೊರೆತಿದೆ)

ಬರ್ಲಿನಿನಲ್ಲಿ ಸುಡಾಟನ್ ಜರ್ಮನರ ಭಂಢ ವಿಮೋಚಕ, ಶಾಂತಿ ಪರಿಪಾಲಕ ಹಿಟ್ಲರನಿಗೆ ಸ್ವಾಗತ ಒಪ್ಪಿಯ ಸೆಳೆದು ಬಂದಾಗ ದೊರೆತುದಕ್ಕಿಂತಲೂ ವೈಭವದಲ್ಲಿ ಮಿಗಿಲಾಗಿತ್ತು ಒಂದು ಲಕ್ಷ ಜನರ ಗರ್ಜನೆ ಎಲ್ಲ ಇಗರ್ಜಿಗಳಿಂದ ಘಂಟಾನಾದ (ರಣಭೇರಿ ನಾದ ಆಡಗಿತೆಂದು!) ನಾಲ್ಕು ಸಲವೂ ಜನರನ್ನು ಪ್ರತಿವಂದಿಸ ಬೇಕಾಯ್ತು–ಹಿಟ್ಲರನಿಗೆ!

ಇಟೆಲಿಯಲ್ಲಿ ಮುಸ್ಸೊಲಿನಿಯು ಜನರಲ್ಲಿ ಹದಿನಾರುಸಲ ಪ್ರತಿವಂದಿಸ ಬೇಕಾಯ್ತು. ಅವನ ಪತ್ರಿಂದ ಮಾತ್ರ ಹಿಟ್ಲರು ಮ್ಯೂನಿಚ್‌ನಲ್ಲಿ ವೆಂಡಾಯ್ತಕ್ಕೆ ಕೂಡಲು ಪ್ರವೇಶನಷ್ಟೆ! ಆದರೂ "ಇಂಗ್ಲೆಂಡಿನಲ್ಲಿ ಕೆಲವರು 'ಪಶು ಬಲ ಕೋರಿನಿ ಗೆದ್ದನಯ್ಯ' ಎನ್ನುತ್ತಾರಂತೆ. ಕೂಡ

ಲೆ ಹಾಗೆ ಶಾಂತಿಯಾಯಿತೆಂದು ಭಾವಿಸದಿರಿ ಇನ್ನು ಖಂಡಿತ ಇತ್ಯರ್ಥಕ್ಕೆ ಕಾರಣನಾದ ಮುಸ್ಸೊಲಿನಿಗೆ ಯಾವ ಮಾನವನ್ನೂ ನೀವು ಕೊಡುತ್ತಿಲ್ಲ " ಎಂದು ಪತ್ರಿಕೆಗಳಲ್ಲಿದೆ

ಹಂಗೇರಿಯವರು– ನಮ್ಮ ಕಡೆ ನೋಡಬೇಕು, ದೇವರು! ನಾವೂ ನಮ್ಮ ರಾಜ್ಯಕ್ಕೆ ಏನೂ ಕೂಡಿಸಿಕೊಳ್ಳಬೇಡವೆ ಮತ್ತೆ, ನಮ್ಮ ಹಕ್ಕಿನಂತೆ? ಎಂದು ಹಿಟ್ಲರನ್ನು ಪ್ರಾರ್ಥಿಸಿ ಕೊಂಡು ರೈಕ್ಯರು ತಮ್ಮವರನ್ನಾದನ್ನು ಬಿಟ್ಟು ಬಿಡುವಂತೆ ಸೂಚನೆಗಳಾಗಿವೆ

ಫ್ರಾನ್ಸು ಈ ರಾಜತಂತ್ರ ಸರಿಯೋಗಿಲ್ಲ ವೆಂದು ಜನರಲ್ ಫ್ಲೆಚರನು ರಾಜೀನಾಮೆ ಕೊಟ್ಟು ರೈಕ್ಯರ ಸಹಾಯಕ್ಕೆ ಕೆರಳಿರುವನು

ಪೊಲೆಂಡು ತನ್ನ ಗಡಿಯ ಬಳಿಯ ತನ್ನವರ ಪ್ರಾಂತ್ಯವನ್ನು ರೈಕ್ಯರಿಂದ ಬಲದೊಡನೆ ನುಗ್ಗಿ ವಶಪಡಿಸಿಕೊಂಡಾಗಿದೆ ಉಳಿದ ತುಂಡುಗಳು ಕತ್ತರಿಗಾಗಿ ಕಾಣಿವೆ ರೈಕ್ಯ ಸರಕಾರಕ್ಕೆ ನ್ಯಾಷ್ಯವೂ ಹೋಗಿದೆ

ನಾಳಿನ ಯುದ್ಧ! ನೊಬೆಲ್ ಶಾಂತಿ ಬಹುಮಾನ ಯಾರಿಗೆ, ಎಂದು ಚೆಂಬರ್ಲೇನನಿಗೆಂದು ಇಂಗ್ಲೆಂಡು; ಹಿಟ್ಲರಿಗೆಂದು ಹಂಗೇರಿ; ಮುಸೋಲಿನಿಗೆಂದು ಇಟೆಲ್ಲಿ; ಗಾಂಧಿಗೆಂದು 'ಫ್ರೆಂಡ್ಸ್ ಆಫ್ ಇಂಡಿಯಾ'

'ಎಲ್ಲರೂ ಶಾಂತರಾಗಿರಿ!' ಎಂದು ಸೂಚಿಸಿದ ಅಮೇರಿಕದ ಪ್ರೆಸಿಡೆಂಟ್ ರೂಸವೆಲ್ಟರಿಗೇನು?

ಇನ್ನೂ ಉಳಿದಿದೆ.

೧. ಸ್ವೆಯನಿನಿಂದ ಸ್ವಯಂಸೇವಕರನ್ನು ಹಿಂತೆಯುವ ವಿಚಾರ

೨. ಚೆಂಬರ್‌ಲೇನ್ ಮುಸ್ಸೊಲಿನಿ ಸಂಭಾಷಣೆಗಳು

೩. ಫ್ರೆಂಚ್ ರಾಯಭಾರಿಯ ನೇಮಕ (ರೋಮ್ ನಗರಕ್ಕೆ)

೪. ಪೊಲೆಂಡ್-ಹಂಗೇರಿಗಳಿಗೆ ರಾಜ್ಯ ಕೆಡಿಸಿನುವ ವಿವಾದ

ಇವು ಆಗ ತಕ್ಷಣಂದು ಸಿನ್ಹರ್ ಗಾಯೆಡಾ ರವರು ರೋಮ್ ಸರಕಾರದ ತರವಾಗಿ ಉಡುತ್ತಾರೆ

೫. ಎಂಬತ್ತು ವಿಲಿಯ ಜರ್ಮನರು ಕಿರಿದಾದ ರಾಜ್ಯದ ಗತಿಗಳೊಳಗೆ ಇನ್ನೂ ಬಾಳುವುದು ಕಷ್ಟವಾದುದರಿಂದ ವಸಾಹತುಗಳನ್ನು ಹಿಂದೆಕೊಡಬೇಕಾಗಿ ತಾವಾಗಿ ಚೆಂಬರ್‌ಲೇನರು ಎಣಿಸಲಿಕ್ಕುವಿಟು ಎಂದು ಜರ್ಮನ್ ಪತ್ರಗಳು ಸೂಚಿಸುತ್ತವೆ.

2 ವರ್ಷ ಕಾಲ
ರಾಫೆರೋಗದಿಂದ ನರಳಿದೆನು.


2 ವರ್ಷಗಳ ಕಾಲ ನಾನು ಭಯಂಕರವಾದ ಕೋಗದಿಂದ ನರಳಿದೆನು. ನಾನು ಕೆಮ್ಮದೆ ಇರದ ರಾತ್ರಿಯೇ ಇರಲಿಲ್ಲ. ಕಫ್ಫನ್ನು ಮಗನು ನೆನೆಗೆ ಮೆಕ್ಲಿನ್ಸ್ ಬ್ರಾಂಡ್ ಸ್ಟೋಮಕ್ ಪೌಡರು ಕೊಂಡು ಕೊಳ್ಳುವಂತೆ ಹೇಳಿದನು ಈಗ ನನ್ನ ರೋಗವು ಗುಣಮುಖವಾಗುತ್ತ ಬಂದಿದೆ. ಈಗ ನಿರಾದರೂ ಆದರ ಚಿಕ್ಕೆಗಳು ತಂಡುಬಂದಲ್ಲಿ ಒಂದು ನಣ್ಣ ಗುಟುಕನ್ನು ಸೇವಿಸಿ ಕೂಡಲೇ ಗುಣಹೊಂದುತ್ತಲಿದ್ದೇನೆ ಮಿಸ್ಸ್. ಪಲ್ಲ್ಸ್ ಎಮ್
ನಿಮ್ಮ ಉದರ ವೇದನೆಯಿಂದ ಇದೇ ರೀತಿಯಲ್ಲಿ ನಿಶ್ಚಿತ್ಯ ರಾಗಿರಿ

ಎಂತಹ ವೇದನೆಯಾಗಿರಲಿ ಮತ್ತು ಅಸೆಗೆ ಕಾಲದ ಉದರ ನೇದನೆಯಾಗಿರಲಿ ಈ ಮದ್ದಿನಿಂದ ಗುಣಹೊರ ದುತ್ತದೆ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಕೊಂಡುಕೊಳ್ಳಿರಿ ಬಾಟ್ಲುಗಳ ಮೇಲೂ ಕೆಟ್ಟಿಗೆಯ ಮೇಲೂ ಎಲೆಕ್ಸ್ ಸಿ ಮೆಕ್ಲಿನ್ಸ್ ಎಂಬ ದಸ್ಕತು ಇದ್ದರೆ ಮಾತ್ರ ಪಾತ್ರಿಯಾದದ್ದು. ಹುಡಿ ರೂಪದಲ್ಲಿ ಯಾ ಮಾತ್ರೆಯಾಗಿಯೂ ಇರುತ್ತದೆ ಎಲ್ಲಾ ಕೆಮಿಸ್ಟ್‌ರ್ಸ್‌ಯೂ ಸ್ಟೋರುಗಳಲ್ಲಿಯೂ ಇದೆ ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ.

ಪೆಟ್ಟಿಗೆಯ ಮೇಲೆ ಕೆಂಪು ಸೀಲು ಇರುವುದೋ ಎಂದು ದೃಢಪಡಿಸಿಕೊಳ್ಳಿರಿ

ದಸ್ಕತನ್ನು ನೋಡಿರಿ—

Alex. C. Maclean



ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರ್

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ
ಸ್ವದೇಶಾಭಿಮಾನಿ
ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ

ಮಂಗಳೂರು ಸಮಾಚಾರ

ಶ್ರೀ ಕರವು ಗಣೇಶ ವಾಚನಾ ಸಂಘ.

